ಕಾನ್ಸ್‌ಟ್ರೈನ್ಸ್ ಇರತಕ್ಕಂಥ ಕಾಲದಲ್ಲಿ, ನಿರ್ಬಂಧವಿರತಕ್ಕಂಥ ಕಾಲದಲ್ಲಿ, ಕಾಂಪಲ್‌ಷನ್ ಇರತಕ್ಕಂಥ ಕಾಲದಲ್ಲಿ, ನಾವು ಈ ದಕ್ಷಿಣ ವಿದ್ಯುತ್ ಜಾಲ ಏನಿದೆ ಅದರಲ್ಲಿ ನಾನು ಮೊನ್ನೆ ಆಂಧ್ರಪ್ರದೇಶದ ವಿದ್ಯುಚ್ಛಕ್ತಿಯ ಮಂತ್ರಿಗಳನ್ನು ಸಂಪರ್ಕಿಸುವುದಕ್ಕೆ ಪ್ರಯತ್ನ ಮಾಡಿದೆವು. ಅವರು ಸಿಕ್ಕಲಿಲ್ಲ. ನಮ್ಮ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಆಂಧ್ರದ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಜೊತೆಯಲ್ಲಿ ಪ್ರತಿದಿನ interact ಮಾಡುತ್ತಿದ್ದಾರೆ. ಇನ್ನು 2–3 ತಿಂಗಳ ಕಾಲ ಪರೀಕ್ಷಾ ಕಾಲ, ಬಹಳ ಕಠಿಣವಾದಂಥ ಕಾಲ, ವಿಷಮವಾದಂಥ ಕಾಲ. ಈಗ ಡ್ರಿಂಕಿಂಗ್ ವಾಟರ್ ಅದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುತ್ತಿದ್ದೇವೆ. ಎಲ್ಲೆಲ್ಲಿ ಅವರು ದುಡ್ಡನ್ನು ಕಟ್ಟದಿದ್ದರೂ ಕೂಡ ನಾವು ಡ್ರಿಂಕಿಂಗ್ ವಾಟರ್‌ಗೆ ಆದ್ಯತೆಯನ್ನು ಕೊಟ್ಟು ವಿದ್ಯುತ್ ಕೊಡಲು ಈಗಲೇ ಆದೇಶವನ್ನು ಕೊಡುತ್ತೇನೆ. ಅವರು ದುಡ್ಡು ಕೊಟ್ಟಿಲ್ಲ, ಹಣವನ್ನು ಕಟ್ಟಿಲ್ಲವೆನ್ನುವ ಕಾರಣಕ್ಕೋಸ್ಕರ ಅವರು ಪವರ್ ಕಟ್ ಮಾಡತಕ್ಕಂಥದ್ದನ್ನು ನಾವು ಸಹಿಸುವುದಕ್ಕೆ ಈ ಸದನ ತಯಾರಿಲ್ಲ. ಏತಕ್ಕೆಂದರೆ ಕೈಗಾರಿಕೋದ್ಯಮಿಗಳು ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದು ಬಿಡುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಅವರಿಂದ ಎಷ್ಟು ಬರಬೇಕೆಂದು. ನನ್ನ ಬೇಡಿಕೆಗಳು ಬಂದಾಗ ಎಷ್ಟು ಬರಬೇಕು? ಯಾರು ಯಾರಿಂದ ಬರಬೇಕು, ಎಲ್ಲೆಲ್ಲಿಂದ ಬರಬೇಕೆನ್ನುವುದನ್ನೆಲ್ಲ ಸವಿವರವಾಗಿ ಈ ಸದನದ ಮುಂದೆ ಇಡತಕ್ಕಂಥದು. ನನ್ನ ಕರ್ತವ್ಯ. ಮತ್ತೆ ಇದಕ್ಕೆ ಮೇಲೂ ಕೂಡ ತಮಗೆ ತಮ್ಮ ಸಲಹೆಗಳನ್ನು ಕೊಡಬೇಕೆಂದು ನಾನು ಹೇಳಿದೆ. ನಿಮ್ಮ ಮಾರ್ಗದರ್ಶನ ನನಗೆ ಬೇಕೆಂದು ಹೇಳಿ, ಇಂದೆಂದಿಗಿಂತಲೂ ಈಗ ನಿಮ್ಮ ಮಾರ್ಗದರ್ಶನ ನನಗೆ ಬೇಕಾಗಿದೆ. ನಾಲ್ಕು ಗಂಟೆಗೆ ತಾವೆಲ್ಲ ಬರುತ್ತಿದ್ದೀರಿ, ನೀವು ಕೂಡ ತಕ್ಕಂಥ ಮಾರ್ಗದರ್ಶನದ ಮೇಲೆ ಮುಂದೆ ಈ ರಾಜ್ಯದ ಜನರಿಗೆ ವಿದ್ಯುಚ್ಛಕ್ತಿ ಸುಧಾರಣೆ ಮಾಡುವುದಕ್ಕೆ ನಾವು ನೀವು ಎಲ್ಲಾ ಒಟ್ಟಾರೆ ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಭಾಗ್ಯಜ್ಯೋತಿ ಎಲ್ಲಿ?

ಶ್ರೀ ಎಸ್.ಎಂ. ಕೃಷ್ಣ:– ಭಾಗ್ಯಜ್ಯೋತಿಯ ಬಗ್ಗೆ ಹೇಳುತ್ತೇನೆ. ಫಿಷರೀಸ್ ಕೋಲ್ಡ್ ಸ್ಟೋರೇಜ್, ಅದನ್ನು ಮಾನ್ಯ ವಿಜಯಕುಮಾರ್ ಶೆಟ್ಟಿಯವರು ನಮೂದಿಸಿದ್ದಾರೆ. ಅದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡಿ ಏನು ಬೇಕೋ ಅದನ್ನು ಮಾಡೋಣ.

ಒಬ್ಬ ಮಾನ್ಯ ಸದಸ್ಯರು:– ಅದನ್ನು ತಿನ್ನುವುದಕ್ಕೆ ವಾಸನೆ ಬರುತ್ತದೆ. ನಮಗೆ ಬಹಳ ತೊಂದರೆ.

ಶ್ರೀ ಎಸ್.ಎಂ. ಕೃಷ್ಣ:– ಈಗ ವಿಶ್ವವೇ ವೇಜಿಟೇರಿಯನ್ ಕಡೆಗೆ ಹೋಗುತ್ತಿದೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಂಥ ಈ ಸಂದರ್ಭದಲ್ಲಿ ನನ್ನದೇನು ಅಭ್ಯಂತರವಿಲ್ಲ. 184 ಜನ ಆಡಳಿತ ಪಕ್ಷದಲ್ಲಿ ಶಾಸಕರಲ್ಲಿ, 10–12 ಜನರು ಇದ್ದಾರೆ. ನನಗೆ ಭಯ ಇರತಕ್ಕಂಥದ್ದು, ಇವತ್ತು ಈ ಸರ್ಕಾರ ಇರುತ್ತೆ ಎನ್ನುವುದು ನಿಶ್ಚಯವಾದರೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಬಹಳ ಗಂಭೀರವಾದ ವಿಚಾರಗಳನ್ನು ಎತ್ತಿ ಇದನ್ನು ಮಾಡಿ ಎಂದು ಹೇಳಬಹುದು. ಯಡಿಯೂರಪ್ಪನವರೇ ಬಹಳ ದಿವಸ ಉಳಿಯುವಂಥ ಸ್ಥಿತಿಯಲ್ಲಿಲ್ಲ, ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡುವುದಕ್ಕೆ ನಮ್ಮಲ್ಲಿ ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿದೆ, ಯಾವಾಗ ಇರುತ್ತದೋ ಯಾವಾಗ ಹೋಗುತ್ತದೋ, ಗೊತ್ತಿಲ್ಲ ಇದನ್ನು ಸ್ಪಷ್ಟ ಮಾಡಿದರೆ, ಅದರ ಬಗ್ಗೆ ಬೇರೆ ವಿಶೇಷವಾದಂಥ ಚರ್ಚೆ ಮಾಡಿ ಅದಕ್ಕೆ ಮಂಗಳವನ್ನು ಹಾಡಿ, ಮುಂದೆ ಸೇರುವುದಕ್ಕೆ ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಿ. ಏತಕ್ಕೆಂದರೆ ಯಾವ ರೀತಿ ರಾಜಕೀಯ ಅಸ್ಥಿರತೆ ಇದೆ ಎಂದರೆ ಫಸ್ಟ್ ಓವರ್‌ನಲ್ಲಿ

ಎರಡು ವಿಕೆಟ್ ಕಿತ್ತುಕೊಂಡು ಹೋಯಿತು. ಇಬ್ಬರು ಮಂತ್ರಿಗಳು ಕ್ಲೀನ್ ಬೌಲ್ಡ್ ನನಗೆ ಭಯ ಬಂದಿರತಕ್ಕಂಥದ್ದು, ಒಳ್ಳೆಯ ಯುವಕ ಸಚಿವ ಪ್ರೇಮಚಂದ್ರ ಸಾಗರ್ ರಾಜೀನಾಮೆಯನ್ನು ಕೊಟ್ಟಿದ್ದಾರೆ. ನಿಮ್ಮ ಅಕ್ಕಪಕ್ಕದಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದು ಆಸಕ್ತಿ ಇರತಕ್ಕಂಥ ವ್ಯಕ್ತಿ ಅವರ ಇಲಾಖೆಗೆ ನೀವು ಕೊಟ್ಟಿರತಕ್ಕಂಥದ್ದು ಒಂದುಕೋಟಿ ಎಂಭತ್ತು ಲಕ್ಷ. ಒಬ್ಬ ಸಚಿವರಿಗೆ ಫೋನ್, ಅವರ ಟಿ.ಎ. ಡಿ.ಎ. ಸ್ಯಾಲರಿಗೆ, ಮನೆ ಖರ್ಚಿಗೆ ಇದೆಲ್ಲಾ ಸೇರಿಕೊಂಡು ಕನಿಷ್ಟ ಒಂದು ಕೋಟಿ ರೂಪಾಯಿ ಒಂದು ವರ್ಷಕ್ಕೆ ಮೇನ್‌ಟೈನ್ ಮಾಡುವುದಕ್ಕೆ ಬೇಕಾಗುತ್ತದೆ.

ಒಂದು ಇಲಾಖೆಗೆ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಕೊಟ್ಟು ಇಲಾಖೆ ನಡೆಸಬೇಕು ಅಂದಾಗ ಹೆಚ್ಚು ಕೇಳುವುದಕ್ಕೆ ಹೋದರೆ ಒಬ್ಬ ಅಧಿಕಾರಿ ಅಧಿಕ ಪ್ರಸಂಗತನದಿಂದ ಮಾತನಾಡುತ್ತಾರೆ. ಎನ್ನುವುದಾದರೆ ಬಹುಶಃ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿ ಕೆಲಸ ಮಾಡುವುದರ ಬಗ್ಗೆ ನೀವೆಲ್ಲ ಮತ್ತೆ ಯೋಚನೆ ಮಾಡುವ ಪರಿಸ್ಥಿತಿ ಬಂದಿದೆಯೋ ಏನೋ ಗೊತ್ತಿಲ್ಲ. ಇನ್ನು ಯಾರಾದರೂ ರಾಜೀನಾಮೆ ಕೊಡಬೇಕೆಂದು ಸಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ಬೆಳಕು ಚೆಲ್ಲಿದರೆ ಆಗ ಇದರ ಬಗ್ಗೆ ಎಷ್ಟರಮಟ್ಟಿಗೆ ಚರ್ಚೆ ಮಾಡಬೇಕು, ಬೇಡ ಎಂಬ ಬಗ್ಗೆ ಯೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ ಇಷ್ಟೊಂದು ಆಲಸ್ಯ ಸಲ್ಲದು ಎಂದು ಅತ್ಯಂತ ವಿನಯದಿಂದ ಸರ್ಕಾರಕ್ಕೆ ವಿನಂತಿಸುತ್ತೇನೆ. ಎಂತಹ ಗಂಭೀರವಾದ ಪರಿಸ್ಥಿತಿ ಇದು. ರೈತ ಕಂಗಾಲಾಗಿದ್ದಾನೆ, ಕೃಷಿ ಕಾರ್ಮಿಕ ಭಿಕ್ಷೆ ಬೇಡುವ ಪರಿಸ್ಥಿತಿಗೆ ಬಂದಿದ್ದಾನೆ, ನಿರುದ್ಯೋಗಿ ಯುವಕರ ಸಮಸ್ಯೆ ಇದೆ, ಪವರ್ ಪ್ರಾಬ್ಲಂ ಇದೆ. ನೆರೆ ಹಾವಳಿಯಿಂದ ಜನರು ತತ್ತರಿಸಿ ಹೋಗಿದ್ದಾರೆ. ಇದರ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ಆ ಕಡೆ 7–8 ಜನರು ಇಲ್ಲ. ನಾವು 4 ಜನ ಎದ್ದುಹೋದರೆ ಕೋರಂ ಇಲ್ಲದ ಪರಿಸ್ಥಿತಿ ಬರುತ್ತದೆ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂಬ ಕಾರಣಕ್ಕೋಸ್ಕರ ನನ್ನ ಕರ್ತವ್ಯದ ದೃಷ್ಟಿಯಿಂದ ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ಕಳೆದ 3 ವರ್ಷಗಳಲ್ಲಿ ರಾಜ್ಯಪಾಲರಿಂದ ತಾವು ಏನು ಹೇಳಿಸಿದ್ದೀರಿ, ಅದರಲ್ಲಿ ಏನನ್ನು ಕಾರ್ಯರೂಪಕ್ಕೆ ತಂದಿದ್ದೀರಿ, ಅದರ ಬಗ್ಗೆ ಬ್ಲೂ ಪ್ರಿಂಟ್ ನಮಗೆ ಕೊಡಿ, ಶ್ವೇತಪತ್ರ ಹೊರಡಿಸಿ. ಏಕೆಂದರೆ ಇದೊಂದು ವಾಡಿಕೆ ಆಗಬಾರದು. ರಾಜ್ಯಪಾಲರಿಂದ ಹೇಳಿಸಿದ ಮೇಲೆ ಅದನ್ನು ಮಾಡುವ ಪ್ರಾಮಾಣಿಕ ಕಳಕಳಿ ಬೇಕು. ಆ ದಿಸೆಯಲ್ಲಿ ಇಷ್ಟು ದೂರ ಹೋಗಿದ್ದೇವೆ. ಇಷ್ಟು ಪ್ರಯತ್ನ ಮಾಡಿದ್ದೇವೆ. ಈ ಕಾರಣಕ್ಕಾಗಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲ. ಏನು ಮಾಡಲಿಲ್ಲ ಅದನ್ನು ಮುಂದಿನ ವರ್ಷ ಮಾಡುವುದಕ್ಕೆ ದಿಟ್ಟ ಹೆಜ್ಜೆ ಇಡುತ್ತಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಆಶ್ವಾಸನೆ ಕೊಡದಿದ್ದರೆ ಬಹುಶಃ ಬರಬರುತ್ತಾ ರಾಜ್ಯಪಾಲರ ಭಾಷಣಕ್ಕೆ ಯಾವ ಒಂದು ಮಹತ್ವವನ್ನು ಜನ ಕೊಡಬೇಕಾಗಿತ್ತು. ಈ ಕಡೆಯವರು, ಆ ಕಡೆಯವರು ಕೊಡಬೇಕಾಗಿತ್ತು. ಅದನ್ನು ಕೊಡದೆ ಒಂದು ರೀತಿಯ ಅಪಚಾರ ಮಾಡಿದಂತಾಗಬಹುದೆಂಬ ಮಾತನ್ನು ಹೇಳುತ್ತಾ, ತಮ್ಮ ಮೂಲಕ ಉಪ ಮುಖ್ಯಮಂತ್ರಿಗಳು ಇರುವ ಸಂದರ್ಭದಲ್ಲಿ, 184 ಶಾಸಕರನ್ನು ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಅವರು ಇಲ್ಲವೆಂದು ಹೇಳುತ್ತೇನೆ. ಈಗಾಗಲೇ 3–4 ಗಂಪುಗಳಾಗಿವೆ. ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು. ಆಶ್ವಾಸನೆ ಕೊಟ್ಟಂತೆ ಮಂತ್ರಿಮಂಡಲದಲ್ಲಿ ಅವಕಾಶ ಸಿಗಲಿಲ್ಲ. ಅನೇಕ ಕಾರಣಗಳಿಂದ ಬಡಿದಾಟದಿಂದ, ಕಚ್ಚಾಟದಿಂದ ಒಂದಾಗಿ ಇಲ್ಲದಿರುವ ವಿಚಿತ್ರ ಪರಿಸ್ಥಿತಿ ಬಂದಿರುವ ಸಂದರ್ಭದಲ್ಲಿ ರಾಜ್ಯದ ಜನರ ಹಿತದೃಷ್ಟಿಯಿಂದ ಒಂದೊಂದು ನಿಮಿಷಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಈ ಸದನದಲ್ಲಿ ಏನು ನಡೆಯುತ್ತದೆ ? ಎರಡು ಕಡೆಯವರು ಜನರ ಸಂಕಷ್ಟಗಳನ್ನು ಬಗೆಹರಿಸುವ ಬಗ್ಗೆ

ಕಳಕಳಿಯಿಂದ ಇಲ್ಲಿ ಭಾಗವಹಿಸುತ್ತಾರೆಯೋ ಎಂಬ ಬಗ್ಗೆ ದೂರದರ್ಶನ ಮುಖಾಂತರ ತೋರಿಸುವುದು ಪ್ರಾರಂಭವಾದರೆ ಕ್ಷೇತ್ರಕ್ಕೆ ಹೋದಾಗ ಜನರು ಏನನ್ನುತ್ತಾರೆಂಬ ಭಯದಿಂದಲಾದರೂ ಇಲ್ಲಿ ಕುಳಿತುಕೊಳ್ಳುವ ಪ್ರಯತ್ನ ಮಾಡಬಹುದು. ಸರ್ಕಾರ ಈ ದಿಕ್ಕಿನಲ್ಲಿ ವಿಶೇಷವಾದ ಯೋಜನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಗ ಬಂದಾಗ ಹೇಳಿದ್ದಿರಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ. ಮಾತನಾಡುತ್ತೇನೆ. ಆದರೆ ನಾನು ತಮ್ಮನ್ನು ಒತ್ತಾಯಿಸುವುದು ಮತ್ತು ಪ್ರಾರ್ಥಿಸುವುದು ಏನೆಂದರೆ, ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಇಲ್ಲಿ ಏನು ಪ್ರಸ್ತಾಪಿಸಿ ಪ್ರಮುಖವಾದುದು ಎಂದು ಹೇಳುತ್ತೇವೆ ಅದರ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡುವ ಸಂದರ್ಭದಲ್ಲಿ ನಿರ್ದಿಷ್ಟವಾದ ಉತ್ತರವನ್ನು ಅಪೇಕ್ಷಿ ಪಡುತ್ತೇನೆ. ಇಲ್ಲದಿದ್ದರೆ ವಿರೋಧ ಪಕ್ಷಗಳ ಮಾತಿಗೂ ಮಾನ್ಯತೆ ಇಲ್ಲದಂತಾಗುತ್ತದೆ. ಕೇವಲ ನಮ್ಮ ಕರ್ತವ್ಯ ನಿರ್ವಹಿಸಬೇಕೆಂಬ ಸಮಾಧಾನದಿಂದ ಮಾತನಾಡುತ್ತಿದ್ದೇವೆಂಬ ಪರಿಸ್ಥಿತಿ ಬರುತ್ತದೆ, ಇದು ಸರಿಯಲ್ಲ. ಸ್ಪಷ್ಟವಾದ ಉತ್ತರ ಕೊಡಬೇಕೆಂಬ ಆದೇಶ ತಾವು ಮುಖ್ಯಮಂತ್ರಿಗಳಲ್ಲಿ ನೀಡುತ್ತೀರಿ. ಆ ಉತ್ತರ ಕೊಡಿಸುತ್ತೀರೆಂಬ ವಿಶ್ವಾಸ ನನಗೆ ಇದೆ. ತಾವು ಆ ಕೆಲಸ ಮಾಡುತ್ತೀರೆಂದು, ಪ್ರಾಮಾಣಿಕ ಪ್ರಯತ್ನ ಮಾಡುತ್ತೀರೆಂದು ನಂಬಿದ್ದೇನೆ. ಇವತ್ತು ನೆರೆ ಹಾವಳಿಗೆ ಸಿಕ್ಕಿರುವ ರೈತನ ಬಗ್ಗೆ ನೀವೇ ಹೇಳಿರುವ ಹಾಗೆ 500 ರೂಪಾಯಿ ಹೆಕ್ಟೇರಿಗೆ ಭಿಕ್ಷೆ ಕೊಡಬೇಕು ಅದನ್ನು ಕೂಡ ಇದುವರೆಗೆ ಕೊಟ್ಟಿಲ್ಲ. ಪಂಪುಸೆಟ್ಟುಗಳು ಹಾಳಾದುದಕ್ಕೆ ದುಡ್ಡು ಕೊಡುತ್ತೇವೆಂದು ಹೋದ ಜನವರಿಯಲ್ಲಿ ಹೇಳಿ ಇದುವರೆಗೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಲಕ್ಷಾಂತರ ಮನೆಗಳು ನೆಲಸಮವಾಗಿವೆ. ಆಶ್ರಯ ಯೋಜನೆಯಲ್ಲಿ ಮಾಡಿ ಮುಗಿಸುತ್ತೇವೆಂದು ಹೇಳಿದ್ದು ಇವತ್ತು ಅವನು ಮುಗಿದು ಹೋಗಿದ್ದಾನೆ. ಮನೆಗಳನ್ನು ಕಟ್ಟುವುದಕ್ಕೆ ಮಾತ್ರ ಪ್ರಯತ್ನ ಮಾಡಿಲ್ಲ. ನೀವೇ ಘೋಷಣೆ ಮಾಡಿದ 5 ಕೋಟಿ ರೂಪಾಯಿಗಳನ್ನು ಇದುವರೆಗೆ ಬಿಡುಗಡೆ ಮಾಡಿಲ್ಲ. ನೀವೇ ಕೊಟ್ಟ ಆಶ್ವಾಸನೆ ಪ್ರಕಾರ ನೆರೆ ಹಾವಳಿಗೆ ಸಿಕ್ಕ ರೈತರಿಗೆ ನೆರವು ಕೊಡತಕ್ಕದ್ದು, ಪರಿಹಾರ ಕೊಡತಕ್ಕದ್ದು, ಮನೆ ಕಟ್ಟಿಕೊಡತಕ್ಕದ್ದು. ಲಾಸ್ ಕಾಂಪನ್‌ಸೇಟ್ ಯಾವ ರೀತಿ ಮಾಡುತ್ತೀರಿ ಅದರ ಬಗ್ಗೆ ವಿಶೇಷ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಉತ್ತರ ಕೊಡುವ ಸಂದರ್ಭದಲ್ಲಿ ತಕ್ಷಣ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು, ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿದ್ದೇವೆಂದು ಹೇಳಿದರು. ಹೋದ ಸಾರಿ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಮತ್ತು ಸಂಬಂಧಪಟ್ಟ ಸಚಿವರನ್ನು ಈ ಖಾತೆಗೆ ನೇಮಕ ಮಾಡಿದ್ದೀರಾ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಕಿತ್ತು ಹಾಕಿದ್ದೇವೆಂದು ಮಂತ್ರಿಗಳನ್ನು ಕಿತ್ತು ಹಾಕಿ, ಅವರಿಗೆ ಇನ್ನು ಯಾವುದಾದರೂ ಒಳ್ಳೆಯ ಇಲಾಖೆ ಕೊಡಿ.

ಮುಖ್ಯಮಂತ್ರಿ ಬಂಗಾರಪ್ಪನವರು ಇದ್ದಂಥ ಜಿಲ್ಲೆಯಿಂದ ಬಂದಿರುವ ಒಬ್ಬ ಮಂತ್ರಿಗಳು, ಶ್ರೀ ಹಾಲಪ್ಪನವರಿಗೆ ಮಲೆನಾಡು ಅಭಿವೃದ್ಧಿ ಮಂಡಲಿ ಕೊಟ್ಟಿದ್ದೀರಿ. ನಾನು ಒತ್ತಾಯ ಮಾಡುವುದು, 35 ಕೋಟಿ ರೂಪಾಯಿಗಳನ್ನು ಮಾರ್ಚಿ ಒಳಗೆ ಖರ್ಚು ಮಾಡಬೇಕಾಗಿತ್ತು ಅಧ್ಯಕ್ಷರೇ ಇದು ಅವರೇ ಕೊಟ್ಟ ಆಶ್ವಾಸನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಎಲ್ಲಾ ವಿರೋಧಪಕ್ಷದವರೂ ಕೂಡ ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮನವಿ ಮಾಡಿದ್ದೇವೆ. ಏನೆಂದರೆ, ಮಂತ್ರಿಗಳ ನಾಮಫಲಕ ಇಲ್ಲಿ ಹಾಕಬೇಕು. 41 ಜನ ಮಂತ್ರಿಗಳಿದ್ದಾರೆ. ಅವರ ಇಲಾಖೆಗಳು ನಮಗೆ ಗೊತ್ತಾಗುವುದಿಲ್ಲ. ದಯವಿಟ್ಟು ಸರ್ಕಾರಕ್ಕೆ ಆದೇಶ ಕೊಟ್ಟು ನಾಮಫಲಕ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಬಗ್ಗೆ ಏನು ಮಂತ್ರಿಗಳು ಇದ್ದಾರೆ, ಅದಕ್ಕಾಗಿ ಕೋಟ್ಯಾಂತರ ರೂಪಾಯಿ ಸಚಿವ ಸಂಪುಟದ ಸಿಬ್ಬಂದಿಗೆ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ, ದಯ ಮಾಡಿ ತಕ್ಷಣವೇ ತಾವು ಆಶ್ವಾಸನೆ ಕೊಟ್ಟ ಹಾಗೆ 35 ಕೋಟಿ ರೂಪಾಯಿಗಳನ್ನು ಮಲೆನಾಡು ಅಭಿವೃದ್ಧಿಗಾಗಿ ಮಾರ್ಚ್ ಒಳಗೆ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇಷ್ಟೊಂದು ನಿರ್ಲಕ್ಷ್ಯ ಗ್ರಾಮಾಂತರ ಪ್ರದೇಶಕ್ಕೆ ಏಕೆ ?

ಶ್ರೀ ವಾಟಾಳ್ ನಾಗರಾಜ್:– ಒಂದು ಮನವಿಯನ್ನು ಮಾಡುತ್ತಿದ್ದೇನೆ. ತಮಗೆ ಈ ಸಭೆ ನೋಡಿದರೆ ಸಂತೋಷ ಕಾಣುತ್ತದೆಯೇ ? ನಾವು ಪ್ರಾಮಾಣಿಕವಾಗಿ ಕುಳಿತಿದ್ದೇವೆ. ಇಡೀ ಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕ ಸಂದರ್ಭದಲ್ಲಿ ಮಂತ್ರಿಗಳು ಇಲ್ಲ. ಶಾಸಕರು ಇಲ್ಲ. ನಿನ್ನೆ ತಾನೇ ತಾವು ಊಟಕ್ಕೆ ಬಿಡುವು ಕೊಡುವುದು ಬೇಡ, ಕಾಲ ವ್ಯಯ ಮಾಡುವುದು ಬೇಡೆನ್ನುವುದನ್ನು ಪ್ರಾಮಾಣಿಕವಾಗಿ ಗುರುತರವಾಗಿ ತೆಗೆದುಕೊಂಡಿದ್ದೀರಿ. ಇವತ್ತು ಸಭೆ ನೋಡಿದರೆ ಮಾತನಾಡತಕ್ಕ ನಮಗಾದರೂ ಯಾರಿಗೋಸ್ಕರ ಮಾತನಾಡಬೇಕೆನ್ನುವ ಪ್ರಶ್ನೆ ಬರುತ್ತದೆ. ಈ ಪರಿಸ್ಥಿತಿಯಾದರೆ ತಾವು ಹೇಳಿ. ಇದನ್ನು ಮುಂದುವರಿಸಬೇಕೇ ? ಇಲ್ಲದಿದ್ದರೆ ಸಭೆಯನ್ನು ಮುಂದೆ ಹಾಕೋಣ. ಎಷ್ಟೊಂದು ಜನ ಮಂತ್ರಿಗಳಿದ್ದಾರೆ, ಸದಸ್ಯರಿದ್ದಾರೆ. ಇದು ನಿಜವಾಗಿಯೂ ಸಭೆಗೆ ಅಗೌರವ. ಅಧ್ಯಕ್ಷರಿಗೆ ಅಗೌರವ ಎಂದು ನಾನು ಹೇಳುತ್ತೇನೆ. ಏಕೆಂದರೆ, ತಾವು ಇಲ್ಲಿ ಬಂದು ಕುಳಿತಾಗ ಈ ಸಭೆಯ ಕನಿಷ್ಟ ಪಕ್ಷ 50 ಭಾಗದಷ್ಟು ಮಂತ್ರಿಗಳು ಇರಬೇಕು, ಶಾಸಕರು ಇರಬೇಕು. ಈ ಪರಿಸ್ಥಿತಿ ಆದರೆ ಹೇಗೆ ? ನಾನು ಮಾನ್ಯ ಯಡಿಯೂರಪ್ಪನವರು ಹೇಳಿದ ಮಾತನ್ನು ಸಮರ್ಥನೆ ಮಾಡುತ್ತೇನೆ. ದೂರದರ್ಶನದಲ್ಲಿ ನಮ್ಮನ್ನು ತೋರಿಸಬೇಕು. ಇದನ್ನು ಲೋಕಸಭೆಯಲ್ಲಿ ಮಾಡಿದ್ದಾರೆ. ಸದಸ್ಯರುಗಳನ್ನು ಆಯಾಯ ಕ್ಷೇತ್ರದ ಜನತೆ ಏನು ಆಯ್ಕೆ ಮಾಡಿ ಕಳುಹಿಸಿ ಕೊಟ್ಟಿದ್ದಾರೆ ಅವರು ಏನು ಸಭೆಯಲ್ಲಿ ಕುಳಿತಿದ್ದಾರೆಯೇ, ಎಲ್ಲಿಯಾದರೂ ಹೋಗಿದ್ದಾರೆಯೇ ಎನ್ನುವುದು ಗೊತ್ತಾಗುತ್ತದೆ ಇದು ಬಹಳ ಶೋಚನೀಯ ಪರಿಸ್ಥಿತಿ. ಇಲ್ಲಿ ಮಾನ್ಯ ಯಡಿಯೂರಪ್ಪನವರು ಯಾರಿಗೆ ಮಾತನಾಡಬೇಕು ? ಎಲ್ಲಿ, ಮಾತನಾಡಬೇಕು ? ಮತ್ತು ಪತ್ರಕರ್ತರು ಪಾಪ ಎಷ್ಟು ಹೊತ್ತು ಕುಳಿತಿರಬೇಕು ? ಮಧ್ಯಾಹ್ನದ ಊಟಕ್ಕೆ ಹೋಗಿದ್ದು, ಅಲ್ಲಿ ಕಷ್ಟದಲ್ಲಿ 4 ಜನ ಗಂಭೀರವಾಗಿ ಕುಳಿತಿದ್ದಾರೆ. ನಾನು ಅವರನ್ನು ತಪ್ಪು ಮಾಡಿದ್ದಾರೆಂದು ಹೇಳುತ್ತಿಲ್ಲ. ಈ ಪರಿಸ್ಥಿತಿಯಾದರೆ ನನಗನ್ನಿಸುತ್ತದೆ, ಮಂತ್ರಿಗಳ ಬಗ್ಗೆ ತಾವು ನಿರ್ದಾಕ್ಷಿಣ್ಯವಾಗಿ, ತೀವ್ರವಾಗಿ ಹೇಳಬೇಕು. ಅವರು ಬಾರದಿದ್ದರೆ ಕಾರಣ ಕೊಡಲಿ, ಏಕೆ ಬರುವುದಿಲ್ಲ, ಕಾರಣ ಏನು ಎಂದು ಹೇಳಲಿ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಮತ್ತೆ ಮಂತ್ರಿಗಳು ಯಾರು ಎಂದು ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪರಿಚಯ ಮಾಡಬೇಕಾಗಿತ್ತು. ಯಾರದ್ದೂ ಪರಿಚಯ ಮಾಡಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಇಷ್ಟು ಮಾತ್ರ ನೊಂದು ಒಂದು ಮಾತನ್ನು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಕೋರಂ ಇಲ್ಲದೇ ನಾನು ಮಾತನಾಡುವ ದುರ್ದೆಸೆ ಬಂದಿದೆಯಲ್ಲ, ಇದು ಒಂದು ಕರಾಳ ದಿವಸ ಎಂದು ಕರೆಯುವುದಕ್ಕೆ ನಾನು ಇಷ್ಟಪಡುತ್ತೇನೆ. ಇದು ಯಾರಿಗೂ ಶೋಭೆ ತರುವ ವಿಚಾರ ಅಲ್ಲ. ದಯ ಮಾಡಿ ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಇದರ ಬಗ್ಗೆ ವಿಶೇಷ ಚಿಂತನೆ ಮಾಡಬೇಕು. ಏನಾಗಿದೆ ನಿಮಗೆ ? 2 ವರ್ಷಗಳನ್ನು ಅದೇ ಬಡಿದಾಟದಲ್ಲಿ ಕಳೆದುಬಿಟ್ಟಿರಿ. ಇವತ್ತೂ ಸಹ ಅದೇ ರಾಜಕೀಯ ಅಸ್ಥಿರತೆ ಪರಿಸ್ಥಿತಿ ಮುಂದುವರಿಯುತ್ತಿದೆ ಎಂದರೆ, ಅವತ್ತು ದೊಡ್ಡದಾಗಿ ನಿಮ್ಮ ಮುಖ್ಯ ಮಂತ್ರಿಗಳು ಹೇಳಿದರು: ನಿಶ್ಚಿತ ಸಮಯದಲ್ಲಿ ತಮ್ಮ ಕೊಠಡಿಗಳಲ್ಲಿ ಮಂತ್ರಿಗಳು ಇರಬೇಕೆಂದು ಹೇಳಿದರು. ಆದರೆ ಸದನ ನಡೆಯುವ ಸಂದರ್ಭದಲ್ಲಿ ಮಂತ್ರಿಗಳು ಇಲ್ಲ ಎಂದರೆ, ಮಂತ್ರಿಗಿರಿ ಸಿಕ್ಕಿಲ್ಲ ಎಂದು ಶಾಸಕರು ಇಲ್ಲದಿರಬಹುದು, ಅದರ ಚಿಂತೆ ಬೇಡ. ಮಂತ್ರಿಗಳಿಗೂ ಕಳಕಳಿ ಇಲ್ಲ ಎಂದರೆ, ಈ ರಾಜ್ಯದ ಜನತೆಗೆ ಈ ಆಡಳಿತ ಪಕ್ಷ ದ್ರೋಹ

ಮಾಡುತ್ತಿದೆ, ವಂಚನೆ ಮಾಡುತ್ತಿದೆ, ತಮ್ಮ ಸ್ವಾರ್ಥದ ಅಧಿಕಾರದ ಕಚ್ಚಾಟದಲ್ಲಿ ಬಹುಶಃ ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟ ಜನತೆಗೆ ಅಪಮಾನ ಮಾಡುವ ಕೆಲಸ ಆಡಳಿತ ಪಕ್ಷ ಮಾಡುತ್ತಿದೆ ಎಂದು ಅನಿವಾರ್ಯವಾಗಿ ಹೇಳುತ್ತೇನೆ. ಬಹುಶಃ ಇದು ಅರಣ್ಯರೋಧನವಾಗಬಹುದು. ನಾನು ನನ್ನ ಕರ್ತವ್ಯ ಮಾಡುತ್ತೇನೆ. ತಾವು ಏನು ಮಲೆನಾಡು ಅಭಿವೃದ್ಧಿ ಮಂಡಲಿ ರಚನೆ ಮಾಡಿದ್ದೀರಿ ಅದಕ್ಕೆ 35 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ತಾವೇ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ನಾನು ಏಕೆ ಈ ವಿಷಯ ತಂದೆ ಅಧ್ಯಕ್ಷರೇ ? ಗ್ರಾಮೀಣ ಪ್ರದೇಶದ ಬಗ್ಗೆ ರೈತನ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ. ಮಾನ್ಯ ಉಪಮುಖ್ಯಮಂತ್ರಿಗಳು ಗಮನ ಕೊಡಬೇಕು. ತಮ್ಮ ಬಗ್ಗೆ ಗೌರವವಿದೆ. ಕೇಂದ್ರ ಸರ್ಕಾರ ಜವಹರ ರೋಜ್‌ಗಾರ್ ಯೋಜನೆಗೆ ಬಿಡುಗಡೆ ಮಾಡಿರುವಂತಹ 75 ಕೋಟಿ ರೂಪಾಯಿ ಹಣವನ್ನು ಆ ಬಾಬಿಗೆ ಖರ್ಚು ಮಾಡದೆ ಜಿಲ್ಲಾ ಪರಿಷತ್ ಮತ್ತು ಮಂಡಲಗಳಿಗೆ ಖರ್ಚು ಮಾಡದೆ ಆ ಹಣವನ್ನು ಬೇರೆ ಕಡೆ ಉಪಯೋಗ ಮಾಡಿಕೊಂಡು, ಗ್ರಾಮೀಣ ಜನರಿಗೆ ದ್ರೋಹ ಮಾಡಿರುವಂತಹ ಕೆಲಸವನ್ನು ಈ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡುವ ಹಣವನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ನೇರವಾಗಿ ಬಿಡುಗಡೆ ಮಾಡಬೇಕೆಂದು ಚರ್ಚೆಯಾಯಿತು. ಏಕೆಂದರೆ ರಾಜ್ಯ ಸರ್ಕಾರದವರು ಹಣವನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವುದಿಲ್ಲ, ತಮ್ಮ ತೀಟೆ ತೀರಿಸಿಕೊಳ್ಳುವುದಕ್ಕೆ ಅನಗತ್ಯವಾದ ಕೆಲಸಗಳಿಗೆ ಖರ್ಚು ಮಾಡುವುದಕ್ಕೋಸ್ಕರ, ಜನರ ಹೆಗ್ಗಳಿಕೆಗೆ ಮತ್ತು ಹೊಗಳಿಕೆಗೆ ಪಾತ್ರರಾಗುವುದಕ್ಕೆ ಹೊಸ ಹೊಸ ಕಾರ್ಯಕ್ರಮಗಳ ಘೋಷಣೆಗೆ ಉಪಯೋಗ ಮಾಡಿಕೊಳ್ಳಬಹುದು ಎನ್ನುವ ಭಯದಿಂದ ನೇರವಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕೆನ್ನುವ ಸಂದರ್ಭ ಬಂದಿತ್ತು. ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ 75 ಕೋಟಿ ರೂಪಾಯಿ ಜವಹರ್ ರೋಜ್‌ಗಾರ್ ಯೋಜನೆ ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ಮಂಡಲ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಹಣವನ್ನು ಬೇರೆ ಬಾಬಿಗೆ ಖರ್ಚು ಮಾಡುವಂತಹ ಅಧಿಕಾರವನ್ನು ನಿಮಗೆ ಯಾರು ಕೊಟ್ಟರು ? ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೆ ಇಲ್ಲ. ತಕ್ಷಣ 75 ಕೋಟಿ ರೂಪಾಯಿಗಳನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದರೊಳಗೆ ಅದರ ವ್ಯವಸ್ಥೆಯನ್ನು ಮಾಡಿ ಸದನಕ್ಕೆ ಬರಬೇಕು. ಯಡಿಯೂರಪ್ಪನವರೇ ನೀವು ಹೇಳುವುದು ಸರಿಯಲ್ಲವೆಂದು ಹೇಳಲಿ. ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಬೇಕು. ಅವರು ನೀವು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದೀರಿ ಎಂದು ಹೇಳಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ:– ಕಳೆದ ವಾರ ಹಣ ಬಿಡುಗಡೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗೆ ಇದ್ದರೆ ನಾನು ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತೇನೆ. ಎಲ್ಲಿ ಆಗಿದೆ ಸ್ವಾಮಿ ? ನೀವು ಯಾರು ? ಸಂಬಂಧಪಟ್ಟ ಮಂತ್ರಿಗಳು ಹೇಳಲಿ. ನೀವು ಹೇಳುವ ಮಾತಿಗೆ ಏನು ಬೆಲೆ ಇದೆ ? ನಮಗೆ ಬಂದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:– ನಮಗೆ ಕೊಟ್ಟಿಲ್ಲವೆಂದು ಹೇಳಿ. ಎಲ್ಲರಿಗೂ ಕೊಟ್ಟಿಲ್ಲವೆಂದು ಹೇಳಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಕಾಂಗ್ರೆಸ್‌ನವರು ಹಂಚಿಕೊಂಡಿರಬಹುದು ನಮಗೆ ಬಂದಿಲ್ಲ. 75 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದಂಥ ಜವಹರ್ ರೋಜ್‌ಗಾರ್ ಯೋಜನೆಯ ಹಣವನ್ನು ಈ ನಿಮಿಷದವರೆಗೆ ಬಿಡುಗಡೆ ಮಾಡಿಲ್ಲವೆಂದು ಸಾಕ್ಷ್ಯಾಧಾರ ಮತ್ತು ದಾಖಲೆಗಳೊಂದಿಗೆ ಸರ್ಕಾರದ ಮೇಲೆ ನಾನು ಚಾರ್ಜ್ ಮಾಡುತ್ತಿದ್ದೇನೆ. ಬೇಕಾದರೆ ಅಂಕಿ

ಅಂಶಗಳನ್ನು ತರಿಸಿ ನೋಡಿ. ನಿಮಗೆ ಜನ ಕೊಟ್ಟಂತಹ ತೆರಿಗೆ ಹಣವನ್ನು ಅವರ ಅಭಿವೃದ್ಧಿಗಾಗಿ ಖರ್ಚು ಮಾಡುವುದಕ್ಕೆ ಪೊಲಿಟಿಕಲ್ ವಿಲ್ ಇಲ್ಲ. ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನೂ ಸಹ ಬೇರೆ ಬಾಬುಗಳಿಗೆ ಖರ್ಚು ಮಾಡಿ ಅಕ್ಷಮ್ಯ ಅಪರಾಧ ಮಾಡುತ್ತಿದ್ದೀರಿ. ತಕ್ಷಣ 75 ಕೋಟಿ ರೂಪಾಯಿ ಹಣವನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಹೊಸ ಹೊಸ ಬಣ್ಣದ ಘೋಷಣೆಗಳನ್ನು ಮಾಡಿದ್ದೀರಿ. ಅಕ್ಷಯ ಯೋಜನೆ. ಅಕ್ಷಯ ಯೋಜನೆಯಡಿಯಲ್ಲಿ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ಈ ನಾಲ್ಕು ತಿಂಗಳು ದಿನಕ್ಕೆ ಒಂದು ರೂಪಾಯಿಯಂತೆ ಮಕ್ಕಳಿಗೆ ಕೊಟ್ಟರೆ 80 ಪರ್ಸೆಂಟ್ ಅಟೆಂಡೆನ್ಸ್ ಸಿಗಲಿಯೆನ್ನುವ ಉದ್ದೇಶದಿಂದ ಈ ಯೋಜನೆಯನ್ನು ಘೋಷಣೆ ಮಾಡಿದ್ದೀರಿ. ಕಳೆದ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ಈಗ ಫೆಬ್ರವರಿಯಲ್ಲಿದ್ದೇವೆ. ಈ ಇಲಾಖೆಯಲ್ಲಿ ಹಂಚುತ್ತೇವೆಂದು ಹೇಳಿದ್ದರು. ಈ ನಿಮಿಷದವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು. ಜನರಿಗೆ ಹೊಸ ಹೊಸ ಯೋಜನೆಗಳನ್ನು ಘೋಷಣೆ ಮಾಡಿ ಹೇಳಿದರು. ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಈ ಯೋಜನೆ ಇದೆಯೋ ಇಲ್ಲವೋ ಅದನ್ನು ಸ್ಪಷ್ಟ ಮಾಡಬೇಕು. ಯಾವ ತರಹ ಅಪರಾಧ ನಿಮ್ಮದು ? ನೀವೇ ಉತ್ತರ ಕೊಟ್ಟಿದ್ದೀರಿ. ರಸಗೊಬ್ಬರದ ಬಗ್ಗೆ ಕೇಂದ್ರ ಸರ್ಕಾರ 1992–93ನೇ ಸಾಲಿಗೆ ಮಾಡಿರುವಂತಹ 36 ಕೋಟಿ ರೂಪಾಯಿಗಳಲ್ಲಿ ಒಂದು ಪೈಸೆ ಸಹ ರೈತನ ನೆರವಿಗೆ ಖರ್ಚು ಮಾಡಲಿಲ್ಲ. ಆ ಹಣವನ್ನು ನೀವು ಇಟ್ಟು ಕೊಂಡಿದ್ದೀರಿ. ನೀವೇ ಕೊಟ್ಟಿರುವ ಉತ್ತರದಲ್ಲಿ 17 ಕೋಟಿ ರೂಪಾಯಿಗಳಲ್ಲಿ 11 1/2 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಇದರ ಬಾಬ್ತು ಉಳಿದ 5 1/2 ಕೋಟಿ ಹಣವನ್ನು ರಿಲೀಸ್ ಮಾಡಲಿಲ್ಲ. ಖರ್ಚು ಸಹ ಮಾಡಲಿಲ್ಲ. ನಿಮ್ಮ ಸರ್ಕಾರ ಬದುಕಿದೆಯೇ ರೈತನ ಪಾಲಿಗೆ. ಹೇಗೆ ಕುಳಿತು ಕೊಂಡಿದ್ದೀರಿ ಅಲ್ಲಿ ? ರೈತನ ಬಗ್ಗೆ ಮತ್ತು ಬಡವರ ಬಗ್ಗೆ ನೀತಿ ಹೇಳಿಕೊಂಡು, ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟಂತಹ ಈ ನಾಡಿನ ಜನರಿಗೆ ದ್ರೋಹ ಮಾಡಿಕೊಂಡು, ಗ್ರಾಮೀಣ ಜನರ ಅಭಿವೃದ್ಧಿಯನ್ನು ಸಂಪೂರ್ಣ ಮರೆತು, ನೆರೆ ಹಾವಳಿಗೆ ಸಿಕ್ಕಿ ರೈತನ ಬೆಳೆ ನಾಶವಾಗಿರುವಾಗ ರೈತನಿಗೆ ಪರಿಹಾರ ರೂಪದಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವಂತಹ ಹಣವನ್ನು ಖರ್ಚು ಮಾಡದೆ ಅದನ್ನೂ ಬೇರೆ ಬಾಬಿಗೆ ಖರ್ಚು ಮಾಡುವ ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಧಿಕ್ಕಾರವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂಕಿಅಂಶಗಳ ಜೊತೆಗೆ ಹೊರಗೆ ಬನ್ನಿ, ಜನ ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದು ನಿಮ್ಮ ಮೋಜಿಗೋಸ್ಕರವೇ ನಿಮ್ಮ ಸ್ವಾರ್ಥಕ್ಕೋಸ್ಕರವೇ, ನೀವು ಅಧಿಕಾರ ದುರುಪಯೋಗ ಮಾಡುವುದಕ್ಕೋಸ್ಕರವಲ್ಲ.

ನಿಮ್ಮ ಕಚ್ಚಾಟವನ್ನು ಇಲ್ಲಿ ಚರ್ಚೆ ಮಾಡುವುದಿಲ್ಲ. ಮಂತ್ರಿಮಂಡಲದಲ್ಲಿ ಯಾರು ರಾಜೀನಾಮೆ ಕೊಟ್ಟಿದ್ದಾರೆ. ಮತ್ತೊಬ್ಬರು ಬರುತ್ತಾರೆ ಇದರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಎಲ್ಲಿಯವರೆಗೆ ಸರ್ಕಾರ ಬದುಕಿದೆ ಎಂದು ನಿಮಗೆ ಅನ್ನಿಸುತ್ತದೆಯೋ, ಅಲ್ಲಿಯವರೆಗೆ ರಾಜ್ಯದ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿಮ್ಮ ಮಂತ್ರಿಮಂಡಲದಲ್ಲಿ ಪರಸ್ಪರ ವಿಶ್ವಾಸ ಇದೆಯೇ ಯಾರನ್ನಾದರೂ ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರಾ ? ಅಧಿಕಾರಿಗಳ ಜೊತೆಗೆ ಸೇರಿಕೊಂಡು ಜನ ಆಯ್ಕೆ ಮಾಡಿ ಕಳಿಸಿದ ನಿಮ್ಮ ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿದ್ದೂ ಸಲಹೆ ಕೊಡುವಂಥ ಶಕ್ತಿ ಇರುವಂಥ ಮಂತ್ರಿಗಳು ಇದ್ದರೆ ಅವರ ಸಲಹೆ ತೆಗೆದುಕೊಳ್ಳದೆ ಇವತ್ತು ಒಂದು ಅಂಧಕಾರದಂಥ ವಾತಾವರಣ ರಾಜ್ಯದಲ್ಲಿ ಏನಿದೆ, ಕಳೆದ 45 ವರ್ಷಗಳಿಂದ ನಡೆಯುತ್ತಿರುವ ನಿಮ್ಮ ಕರ್ಮಕಥೆ ಏನಿದೆ, ಅಧಿಕಾರ ದಾಹಕ್ಕೋಸ್ಕರ ಬಡಿದಾಡಿ ಕಚ್ಚಾಡಿ ಜನಹಿತ ಮರೆತು ಇಂತಹ ಪರಿಸ್ಥಿತಿ ಬಂದಿರುವಾಗ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೃಷ್ಣಾರವರು ಈ ಸ್ಥಾನಕ್ಕೆ ಬಂದಿದ್ದಾರೆ. ನೋಡಿದರೆ ಬಹಳ

ಸಂಕಟವಾಗುತ್ತದೆ. ಎಂತಹ ದುಸ್ಥಿತಿಯಲ್ಲಿ ನೀವು ಉಪಮುಖ್ಯಮಂತ್ರಿಯಾಗಿದ್ದೀರಿ ? ನನಗನ್ನಿಸುತ್ತದೆ, ಉಸಿರು ಕಟ್ಟುವ ಈ ವಾತಾವರಣದಲ್ಲಿ ನೀವಂತೂ ಅಲ್ಲಿ ಜಾಸ್ತಿಕಾಲ ಇರಬಾರದು. ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ರಾಜಕಾರಣಕ್ಕೋಸ್ಕರ ಈ ಮಾತನ್ನು ಹೇಳುತ್ತಿಲ್ಲ. ನಿಮಗೆ ಸಮಾಧಾನವಾಗುವುದಕ್ಕೆ ಸಾಧ್ಯವೇ ಇಲ್ಲ. ಈ ಪರಿಸ್ಥಿತಿಯನ್ನು, ನೀವೇ ಸಾಧ್ಯವಾದರೆ ಸರಿಪಡಿಸಿ, ನಾನು ಒಂದು ಪಕ್ಷದ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಅಂಕಿಅಂಶಗಳನ್ನು ಗೊತ್ತಿಲ್ಲದೇನೆ ಕೇವಲ ಆಪಾದನೆ ಮಾತನಾಡುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿಲ್ಲ ಆ ರೀತಿ ತಾವು ತಿಳಿದುಕೊಂಡರೆ, ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆದರೆ ಹಣ ಬಂದಿದ್ದನ್ನು ಖರ್ಚು ಮಾಡದೆ, ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ನೇರವಾಗಿ ತಲುಪಿಸದಂಥ ನೀವು ಇವತ್ತು ಫೆಬ್ರವರಿ ತಿಂಗಳು ಕಳೆಯುತ್ತಾ ಬಂದು, ಬೇಸಿಗೆ ಬೆಳೆ ನಾಟಿಯಾಗಿ ಮುಗಿಯುತ್ತಾ ಬಂದಿದ್ದರೂ ಕೂಡ 36 ಕೋಟಿ ರೂಪಾಯಿಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ ಎನ್ನುವುದಾದರೆ ಈ ಸದನದಲ್ಲಿ ನಾವು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ? ಇದು ಅರಣ್ಯ ರೋಧನ ಅಲ್ಲದೆ ಮತ್ತೇನು ? ಸನ್ಮಾನ್ಯ ಅಧ್ಯಕ್ಷರೇ, ನಾವು ರಾಜ್ಯಪಾಲರ ಭಾಷಣಕ್ಕೆ ಮುಂಚೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೆವು. ಇದು ಬರೀ ಯಡಿಯೂರಪ್ಪನವರ ಪ್ರಶ್ನೆ ಅಲ್ಲ. ಈ ಸದನದಲ್ಲಿ ಚರ್ಚೆಯಾಗಿ ಒಪ್ಪಿಕೊಂಡಿರುವ ಪ್ರಕಾರ ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ, ಕೇಂದ್ರ ಸರ್ಕಾರ ಕೊಟ್ಟ ಭರವಸೆಯಂತೆ 2.10.89ಕ್ಕೆ ಮುಂಚೆ ಇರುವಂಥ ರೈತನ ಸಾಲ ಮನ್ನಾ ಬಗ್ಗೆ ಈ ಸರ್ಕಾರವೇ ತಡೆಯಾಜ್ಞೆಯನ್ನು ಕೊಟ್ಟಿತ್ತು. ಪ್ರಧಾನಮಂತ್ರಿಗಳ ಹತ್ತಿರ ಸಹ ನಮ್ಮನ್ನು ಕರೆದುಕೊಂಡು ಹೋದರು. ಪತ್ರಿಕೆಯವರು ಇತ್ತೀಚೆಗೆ ಬರೆಯುವುದನ್ನು ಬಿಟ್ಟಿದ್ದಾರೆ. ಬಹುಶಃ ಇದು ಆಗಲಿಕ್ಕಿಲ್ಲ ಎನ್ನುವ ತೀರ್ಮಾನಕ್ಕೆ ಅವರೂ ಬಂದಿರಬಹುದು. ಆದರೆ ನಾನು ನಿಮ್ಮನ್ನು ಕೇಳುತ್ತೇನೆ, ಆ ಸಮಯದಲ್ಲಿ ಸ್ಪಷ್ಟ ಭರವಸೆಯನ್ನು ಕೊಟ್ಟಿರಿ. ಈ ಸದನದಲ್ಲೂ ಚರ್ಚೆಯಾಯಿತು. ಈ ಒಂದು ರಾಜ್ಯಪಾಲರ ಭಾಷಣದಲ್ಲಿ ರೈತನಿಗೆ ನೆರವು ಕೊಡುವಂಥ ಸ್ಪಷ್ಟವಾದ ನಿರ್ಧಾರವನ್ನು ನೀವು ತೆಗೆದುಕೊಳ್ಳಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ರೈತನ ಸಾಲ ಮನ್ನಾ ಮಾಡುವ ಬಗ್ಗೆ ಏನೂ ಇಲ್ಲ. ಇವತ್ತು ಹತ್ತು ಸಾವಿರ ಸಾಲಕ್ಕೆ ಹತ್ತು ಸಾವಿರ ರೂಪಾಯಿ ಬಡ್ಡಿಯಾಗಿದೆ. ಇದರ ಬಗ್ಗೆ ಯಾವುದೇ ಒಂದು ಕಾರ್ಯಕ್ರಮವನ್ನು ರೂಪಿಸಿಲ್ಲದಿರುವುದು ರೈತವಿರೋಧಿ ನೀತಿಯಾಗಿದೆ. ಯಾವುದಾದರೂ ಪರಿಹಾರವನ್ನು ರೈತನಿಗೆ ಕೊಡಬೇಕು. ಹತ್ತು ಸಾವಿರ ರೂಪಾಯಿ ಸಹಕಾರ ಸಂಘದ ಸಾಲವನ್ನು ಮನ್ನಾ ಮಾಡುವಂಥ ನಿರ್ಧಾರವನ್ನು ಸರ್ಕಾರ ಮಾಡಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನು ಹರಿಜನ–ಗಿರಿಜನ ಬಗ್ಗೆ ಭಗವಂತನೇ ಕಾಪಾಡಬೇಕು. ಅವರ ಹೆಸರು ಹೇಳಿ ಅಧಿಕಾರಕ್ಕೆ ಬಂದಂಥ ಜನ ನೀವು. ಇವತ್ತು ಅವನ ಪರಿಸ್ಥಿತಿ ಏನಾಗಿದೆ ? ಊರ ಹೊರಗಡೆ ನೀರು ಇಲ್ಲದೆ, ಕೈಗೆ ಕೆಲಸ ಇಲ್ಲದೆ ಅವನು ಸಾಯುತ್ತಿದ್ದಾನೆ. ನೀವೇ ತಾನೇ ಹೇಳಿದ್ದುದು ? ಅಂಬೇಡ್ಕರ ಶತಮಾನೋತ್ಸವ ಮಾಡುವಂಥ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೆ ನೂರು ಮನೆಗಳನ್ನು ಕೊಡುತ್ತೇವೆ ಎಂದು. ನೀವೇ ಕೊಟ್ಟಿರುವ ಉತ್ತರದಂತೆ 12 ಮನೆಗಳನ್ನು ಇಡೀ ರಾಜ್ಯದಲ್ಲಿ ಕೊಟ್ಟಿದ್ದೀರಿ ಎಂದರೆ ನೀವು ಯಾವ ಸ್ಥಿತಿಗೆ ಬಂದು ಮುಟ್ಟಿದ್ದೀರಿ ?

ಮಹಾನುಭಾವ ಅಂಬೇಡ್ಕರ್ ಭವನ ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಕಟ್ಟುತ್ತಿದ್ದೀರಾ ? ಕೇವಲ ಕಳಕಳಿಯ ಮಾತನಾಡುವುದರಿಂದ ರೈತರ, ಹರಿಜನ ಗಿರಿಜನರ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರಾಮಾಣಿಕವಾಗಿ ಆ ದಿಕ್ಕಿನಲ್ಲಿ ಹೆಜ್ಜೆ ಇಡುವಂಥ ದೃಢ ನಿರ್ಧಾರವನ್ನು ಮಾಡಬೇಕಾಗುತ್ತದೆ. ಈ ದೃಢ ನಿರ್ಧಾರ ಮಾಡತಕ್ಕಂಥ ನೈತಿಕ ಶಕ್ತಿಯನ್ನು ನೀವು ಕಳೆದುಕೊಂಡಿದ್ದೀರಿ. ಇದು ನಿಮಗೂ ಗೊತ್ತಾಗಿದೆ ಮತ್ತು ಜನರಿಗೂ ಗೊತ್ತಾಗಿದೆ ನನಗನ್ನಿಸುತ್ತದೆ, ಇಲ್ಲಿ ಎಲ್ಲರೂ ಏಕೆ ಬಂದಿಲ್ಲ ? ಕೊನೆಯ

ದಿವಸ ಹತ್ತಿರ ಬರುತ್ತಿದೆಯೆಂದು ಇದರಿಂದ ಸ್ಪಷ್ಟವಾಗಿದೆ. ಏಕೆಂದರೆ ಹಳ್ಳಿಗೆ ಹೋದರೆ ಜನರು ನಿಮ್ಮ ನೀತಿಯಿಂದ, ನಿಮ್ಮ ಪರಿಸ್ಥಿತಿಯಿಂದ ನಿಮ್ಮನ್ನು ಸೇರಿಸುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಈ ರೈತ, ಕೃಷಿ ಕಾರ್ಮಿಕರು ನಿಮಗೆ ಓಟು ಕೊಟ್ಟಿದ್ದಾರೆ. ಐದು ವರ್ಷ ಸ್ವಂತಕ್ಕೆ ಉಪಯೋಗ ಮಾಡಿಕೊಂಡು ಬಿಡೋಣ ಎಂದು ನಿರ್ಧಾರವನ್ನು ಕೆಲವರು ತಾವು ಮಾಡಿದ್ದರೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಗೆ ಭರವಸೆ ಕೊಟ್ಟು ಇಲ್ಲಿ ಬಂದು ಕುಳಿತು, ಈ ರೀತಿ ಜನಹಿತವನ್ನು ಸಂಪೂರ್ಣವಾಗಿ ಮರೆಯುವಂಥಾದ್ದು ಅಕ್ಷಮ್ಯ ಅಪರಾಧ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಅದಕ್ಕೋಸ್ಕರ ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ದಯ ಮಾಡಿ ಇವತ್ತಿನ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರವನ್ನು ತಾವು ಹೊರಡಿಸಬೇಕು.

ಫೆಬ್ರವರಿ ಕೊನೆಯಲ್ಲಿದ್ದೇವೆ, ವರ್ಷದ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂಥ ತೀವ್ರಗತಿಯಲ್ಲಿ, ಅಭಿವೃದ್ಧಿ ಕಾರ್ಯಗಳು ನೀರಾವರಿ ಯೋಜನೆ ಮತ್ತೆ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಬೇರೆ ಬೇರೆ ಕಾರ್ಯಗಳು ನಡೆಯಬೇಕಾದ ಈ ಸಮಯದಲ್ಲಿ ರಾಜ್ಯದ ಎಲ್ಲಾ ಕಡೆ ನೀವು ಎಲ್.ಒ.ಸಿ.ಯನ್ನು ಬಿಡುಗಡೆ ಮಾಡದೇ ಹಣಕಾಸಿನ ತೊಂದರೆಯಿಂದ ಕೆಲಸ ಕಾರ್ಯಗಳು ಸ್ಥಗಿತವಾಗಿದೆ. ಸರ್ಕಾರಿ ನೌಕರರಿಗೆ ಸುಮ್ಮನೆ ಸಂಬಳ ಕೊಡುವಂಥ ಪರಿಸ್ಥಿತಿ ಬಂದಿದೆ. ಕಂಟ್ರಾಕ್ಟರು ನಿಮ್ಮ ಇಲಾಖೆಯ ಹತ್ತಿರ ಬರುವುದಕ್ಕೆ ಸಿದ್ಧ ಇಲ್ಲ. ಸುಮಾರು 40 ಕೋಟಿ ರೂಪಾಯಿ ನೀರಾವರಿ ಇಲಾಖೆ ಪಿ.ಡಬ್ಲ್ಯು.ಡಿ. ಇಲಾಖೆಗೆ ಏನು ಬಿಲ್ಲುಗಳು ಬಾಕಿ ಇದೆ. ಎಲ್.ಓ.ಸಿ. ಬಿಡುಗಡೆ ಮಾಡಿಲ್ಲ. ಈ ಒಂದು ವಿಚಿತ್ರವಾದ ಪರಿಸ್ಥಿತಿ ಫೆಬ್ರವರಿ ತಿಂಗಳಲ್ಲಿ ನಿಮ್ಮ ಸರ್ಕಾರದಲ್ಲಿ ಇದೆಯೆನ್ನುವುದಾದರೆ, ಹಣಕಾಸಿನ ಪರಿಸ್ಥಿತಿ ಬಗ್ಗೆ ಸ್ಪಷ್ಟವಾದಂಥ ವೈಟ್ ಪೇಪರ್‌ನ್ನು ಹೊರಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಇವತ್ತು ಯಾವ ಸ್ಥಿತಿ ನಮ್ಮದು ? ಸರ್ಕಾರಿ ನೌಕರರಿಗೋಸ್ಕರ, ಉದ್ಯೋಗ ಕೊಡುವುದಕ್ಕೋಸ್ಕರ ಸರ್ಕಾರ ನಡೆಸುತ್ತಿದ್ದೇವೆಯೇ. ಒಳ್ಳೆಯ ಸಂಬಳ ಕೊಟ್ಟು, ಆ ಜವಾಬ್ದಾರಿ ಸ್ಥಾನದ ಮೇಲೆ ಅವರನ್ನು ಕೂರಿಸಿದ ಮೇಲೆ, ಅವರಿಗೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡಿ, ಜನಹಿತ ಮಾಡುವುದಕ್ಕಾಗಿ ಈ ಸರ್ಕಾರಿ ಕಚೇರಿಗಳು, ಈ ವ್ಯವಸ್ಥೆ ಇರುವುದು. ಇವತ್ತು ಏನಾಗಿದೆ. ಸರ್ಕಾರಿ ನೌಕರರು ಸಂಬಳ, ಟಿ.ಎ., ಡಿ.ಎ., ನಾವು ತಂದಿರುವಂಥ ಸಾಲಕ್ಕೆ ಬಡ್ಡಿ, ನಮ್ಮ ಆದಾಯದಲ್ಲಿ ಶೇಕಡ 53 ಭಾಗ ಈ ಬಾಬಿಗೆ ಖರ್ಚಾಗುತ್ತಿದೆ. ಕೇವಲ ಒಂದು ಅನ್ ಪ್ರೊಡಕ್ಟೀವ್ ಐಟಂಗೆ, ಏನು ನಾನ್-ಡೆವಲಪ್‌ಮೆಂಟ್ ಐಟಂ ಇದೆ, ಇದಕ್ಕೆ ಶೇಕಡ 53 ಭಾಗ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಉಳಿದ 47 ಭಾಗದಲ್ಲಿ ಈ ರಾಜ್ಯದ ಸರ್ವಾಂಗೀಣ ಉನ್ನತಿಯಾಗಬೇಕು; ಅಭಿವೃದ್ಧಿ ಕಾರ್ಯಗಳಾಗಬೇಕು. ಬಹುಶಃ ಅಲ್ಲಿರುವಂತವರಿಗೆ ಗೊತ್ತಿದೆ. ಈ 47 ಪರ್ಸೆಂಟ್‌ನಲ್ಲಿ ಎಷ್ಟು ಪರ್ಸೆಂಟ್ ಕಮೀಷನ್ ತೆಗೆಯೋಣ, ಲಂಚ ರುಷುವತ್ತುಗಳಿಗ ತೆಗೆಯೋಣ. 10 ಪರ್ಸೆಂಟ್ ತೆಗೆಯಬಹುದೇ, 10 ಪರ್ಸೆಂಟ್ ತೆಗೆದರೆ, ಇನ್ನು ಉಳಿಯುವ 37 ಪರ್ಸೆಂಟ್ ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗಬೇಕು. ಆ ಕಡೆ ಇರುವಂಥ ಸನ್ಮಾನ್ಯ ಹಿರಿಯರಾದಂಥ ಉಪ ಮುಖ್ಯಮಂತ್ರಿಗಳಾದ ಕೃಷ್ಣರವರನ್ನು ಉದ್ದೇಶಿಸಿ ಏಕೆ ಮಾತನಾಡುತ್ತಿದ್ದೇನೆಂದರೆ, ಅಲ್ಲಿ ಗಂಭೀರವಾಗಿ ಕುಳಿತು, ಅನೇಕ ಸಾರಿ ಇದನ್ನು ಕೇಳಿದವರು; ಅನುಭವ ಇರುವಂತಹವರು. ನಿಮ್ಮ ಕಾಲದಲ್ಲಾದರೂ ಸಹ ಈ ಕೊಳೆಯನ್ನು ತೊಳೆಯುವುದಕ್ಕೆ ಸಾಧ್ಯವಾದರೆ, ಒಂದು ಟ್ರ್ಯಾಕಿಗೆ ನಿಮ್ಮಿಂದ ತರುವುದಕ್ಕೆ ಸಾಧ್ಯವಾದರೆ, ಮುಲಾಜು ಬೇಡಿ, ಎಷ್ಟು ದಿವಸ ಇರುತ್ತೀರೋ, ಇದರ ಬಗ್ಗೆ ಚಿಂತೆಯಿಲ್ಲ. ಮುಲಾಜಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂಥ ಧೈರ್ಯ ಮಾಡಿದರೆ, ಬಹುಶಃ ಕ್ಯಾನ್ಸರ್ ಎಂಬ ರೋಗ ಏನು ನಿಮಗೆ ಬಂದಿದೆ, ನಿಮ್ಮ ಪಕ್ಷಕ್ಕೆ, ನಿಮ್ಮ ಆಡಳಿತಕ್ಕೆ ಅದು ರಿಪೇರಿಯಾಗಬಹುದು ಎಂಬ ದೃಷ್ಟಿಯಿಂದ, ಖಾರವಾಗಿ ಈ ಮಾತನ್ನು ಉದ್ದೇಶಪೂರಕವಾಗಿ ಸನ್ಮಾನ್ಯ ಉಪ

ಮುಖ್ಯಮಂತ್ರಿಗಳಿಗೆ ಸಿಟ್ಟು ಬರಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಯಾವುದೋ ನಮ್ಮ ಪುಣ್ಯ ಎಂದು ಕಾಣುತ್ತದೆ, ತಾವು ಕುಳಿತಿದ್ದೀರಿ. ನಮಗೂ ಮಾತನಾಡಲು ಉತ್ಸಾಹ ಬರುತ್ತಿದೆ. ಅದಕ್ಕಾಗಿ ಕೆಣಕಿ ಈ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರ ಕೊಡುವಂಥ ಸವಲತ್ತು ಏನಿದೆ, ವೇಸ್ ಅಂಡ್ ಮೀನ್ಸ್ ಬಾಬ್ತು ಸುಮಾರು 55 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ನಿಮಗೆ ಅವಕಾಶ ಇದೆ. ಅದು ಪೂರ್ಣ ಉಪಯೋಗ ಮಾಡಿಕೊಂಡಿದ್ದೀರಿ. ಇನ್ನು ನಿಮ್ಮ ಹಣಕಾಸಿನ ಪರಿಸ್ಥಿತಿ ಅಂದರೆ, ಓವರ್ ಡ್ರಾಫ್ಟ್‌ಗೆ ಕೈ ಹಾಕುವ ಪರಿಸ್ಥಿತಿಗೆ ಫೆಬ್ರವರಿ ತಿಂಗಳಿಗೆ ಬಂದು ಮುಟ್ಟಿದ್ದೀರಿ. ತಾವು ಹೇಳಿದಿರಿ, ಎಂಟ್ರಿ ಟ್ಯಾಕ್ಸ್ ಮೂಲಕ ಈ ವರ್ಷ 280 ಕೋಟಿ ರೂಪಾಯಿ ಸಂಗ್ರಹ ಮಾಡಬಹುದು ಎಂದು. ಆ ಅಂಕಿಅಂಶ ತಮಗೆ ಗೊತ್ತಿದೆಯೇ ಎಂಟ್ರಿ ಟ್ಯಾಕ್ಸ್ ಮೂಲಕ 280 ಕೋಟಿ ಸಂಗ್ರಹ ಮಾಡಬಹುದು ಎಂದು ತಿಳಿದವರು, ಇವತ್ತು ಅದು 140 ಕೋಟಿ ದಾಟಿಲ್ಲ. ಅಂದರೆ ಡಿಫಿಸಿಟ್ ಈ ವರ್ಷ ಸುಮಾರು 140 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ್ದು ಬರಲಿಲ್ಲ. ಏಕೆ ಬರಲಿಲ್ಲ, ಎಲ್ಲಿ ಸೋರಿ ಹೋಯಿತು ಸರಿಯಾಗಿ ಮಾನಿಟರ್ ಮಾಡುತ್ತಾ ಇಗ್ದೀರಾ ? ಸರಿಪಡಿಸುವುದರ ಬಗ್ಗೆ ಯೋಚನೆ ಮಾಡುತ್ತಾ ಇದ್ದೀರಾ ? ಇನ್ನು ಎಕ್ಸೈಸ್ ಬಗ್ಗೆ ಸ್ವಾಮಿ, ನೀವೇನು ಹೇಳಿದ್ದೀರಿ. ಸೋರಿ ತೋಗುವುದರ ಬಗ್ಗೆ ನಾನು ಮಾತನಾಡುತ್ತಿಲ್ಲ. ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದರು. ನೀವು ಹೇಳಿದಂತೆ, ನಿಮ್ಮ ನಿರೀಕ್ಷೆಯಂತೆ ಈ ವರ್ಷ ಸುಮಾರು 60 ಕೋಟಿ ರೂಪಾಯಿ ಕಡಿಮೆಯಾಗಿದೆ. ಇದು 60 ಕೋಟಿ ಮತ್ತು ಎಂಟ್ರಿಟ್ಯಾಕ್ಸ್‌ನಲ್ಲಿ 140 ಕೋಟಿ, ಒಟ್ಟಿಗೆ 200 ಕೋಟಿ ಕಡಿಮೆಯಾಯಿತು. ಓವರ್ ಡ್ರಾಫ್ಟ್ ತೆಗೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದೀರಿ. ವೇಸ್ ಅಂಡ್ ಮೀನ್ಸ್‌ನಲ್ಲಿ 55ಕೋಟಿ ರೂಪಾಯಿ ದುರುಪಯೋಗ ಮಾಡಿಕೊಂಡಾಗಿದೆ. ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ 75 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಡದೇ, ಬೇರೆ ಕಡೆಗೆ ಉಪಯೋಗ ಮಾಡಿಕೊಳ್ಳಲಾಗಿದೆ.

ಅಂದರೆ, ಈ ಪರಿಸ್ಥಿತಿಯಲ್ಲಿ, ಹಣಕಾಸಿನ ಸ್ಪಷ್ಟ ಚಿತ್ರವನ್ನು, ಜನರ ಮುಂದೆ ಇಡದೇ ಇದ್ದರೆ, ಬಹುಶಃ ಈ ನಾಡಿನ ಜನರನ್ನು ವಂಚನೆ ಮಾಡಿದ ಹಾಗೆ ಆಗುತ್ತದೆ. ಇವತ್ತು ಸ್ಪಷ್ಟವಾಗಿ ನೀವೇನು ಮಾಡುತ್ತೀರಿ. ಏನಾಗಿದೆ, ಹಣಕಾಸಿನ, ಇವತ್ತಿನ ಈ ದುರ್ಗತಿಗೆ, ಈ ದುಸ್ಥಿತಿಗೆ ಕಾರಣ ಏನು, ಇದಕ್ಕೆ ಸರಿಯಾದಂಥ ಪರಿಹಾರ ಹುಡುಕಬೇಕಾಗಿದೆ. ಇದರ ಬಗ್ಗೆ ಸ್ಪಷ್ಟ ಚಿತ್ರವನ್ನು ಈ ನಾಡಿನ ಜನರಿಗೆ ಕೊಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ನಾವು ಸಬ್ಸಿಡಿಗಳನ್ನು ಬೇರೆ ಬೇರೆ ರೂಪದಲ್ಲಿ ಕೊಡಬೇಕು. ಖಾದಿ ಗ್ರಾಮೋದ್ಯೋಗ ಇಲಾಖೆಗೆ ಕೊಡಬೇಕಾದಂತಹ ಮೂರು ಕೋಟಿ ರೂಪಾಯಿಗಳನ್ನು ನೀವು ಇದುವರೆಗೂ ಒಂದು ಪೈಸೆ ಕೊಟ್ಟಿಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಈ ಪಿಎಲ್ ಮೂಲಕ ನೀವು ಏನು ಸುಮಾರು 5 ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕಾಗಿತ್ತು. ಅದನ್ನು ಬಡ್ಡಿ ಬಾಬ್ತು ಇದುವರೆಗೂ ಬಿಡುಗಡೆ ಮಾಡಿಲ್ಲ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ, ಅದನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದಂತಹವರು. ಅದಕ್ಕೆ ಬೇಕಾದಂತಹ ಸಬ್ಸಿಡಿ ಹಣ ಒಂದು ಪೈಸೆ ಕೂಡ ನೀವು ಇವತ್ತು ಕೊಟ್ಟಿಲ್ಲ. ಸ್ವಾಮಿ, ಆಶ್ರಯ ಯೋಜನೆಯಲ್ಲಿ, ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವಂತಹ ಈ ಸಂದರ್ಭದಲ್ಲಿ, ಅಭಿವೃದ್ಧಿ ಕಾರ್ಯಕ್ಕೆ ಹಣ ಇಲ್ಲದೆ ಇರುವಂತಹ ಸಂದರ್ಭದಲ್ಲಿ, ಕೆಲಸ ಮಾಡಿರುವಂತಹ ನಿಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ, ಪಿಡಬ್ಲ್ಯೂಡಿಗೆ ದುಡ್ಡು ಕೊಡುವುದಕ್ಕೆ ಆಗದೇ ಇರುವಂತಹ ಸಂದರ್ಭದಲ್ಲಿ, ಅವರ ಬಂಧು ಬಳಗದವರಿಗೆ, ಬೇಕಾದಂತವರಿಗೆ 24 ಕೋಟಿ ರೂಪಾಯಿ ಕೊಟ್ಟು ಈ ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಿಬಿಟ್ಟಿದ್ದೀರಲ್ಲ. ತಾವು ಯಾರಿಗೆ ಕೊಟ್ಟಿದ್ದೀರಿ ಅವರುಗಳ ಅಡ್ರೆಸ್ಸೇ ಇಲ್ಲವಲ್ಲ. ಆ 240 ಕೋಟಿ ರೂಪಾಯಿಗೆ ಬಡ್ಡಿ ಎಷ್ಟು ಆಯಿತು, ಅದನ್ನು ಅಭಿವೃದ್ಧಿ ಕಾರ್ಯಕ್ಕೆ ಉಪಯೋಗ ಮಾಡಿಕೊಂಡಿದ್ದರೆ ಒಂದು ರೀತಿ ಒಳ್ಳೆಯ ಕೆಲಸ ಆಗುತ್ತಾ ಇತ್ತು. ನಿಮ್ಮನ್ನು

ಈ ನಾಡಿನ ಜನ ನಂಬಿದ್ದಾರೆ. ಜನ ಕೊಟ್ಟ ತೆರಿಗೆ ಹಣವನ್ನು ನಿಮ್ಮ ಬಂಧುಬಳಗದವರಿಗೆ ಬೇಕಾದ ಹಾಗೆ ಕೊಟ್ಟ ಹಾಗೆ ಮಾಡಿ, ಆ ಕೈಯಿಂದ ವಾಪಸ್ಸು ತೆಗೆದುಕೊಳ್ಳುವಂತಹ ಒಂದು ಹೀನ ಪ್ರವೃತ್ತಿ ಹಿಂದೆ ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ನಡೆದುಹೋಯಿತು ಎಂದು ಹೇಳುವುದಾದರೆ, ಬಹುಶಃ ಇದು ನನಗೆ ಅನ್ನಿಸುತ್ತದೆ, ಚುನಾಯಿತ ಪ್ರತಿನಿಧಿಗಳಾಗಿ, ಜನ ಪ್ರತಿನಿಧಿಗಳಾಗಿ ಜನತೆಗೆ ಒಂದು ದೊಡ್ಡ ಮಹಾದ್ರೋಹವನ್ನು ಮಾಡುತ್ತಿದ್ದೇವೆಂದು; ತಮಗೆ ತಾವೇ ಈ ಪ್ರಶ್ನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇದು ನಮ್ಮ ದೌರ್ಭಾಗ್ಯ. ನಾಡಿನ ಜನ ನಂಬಿ ಅಜೀರ್ಣ ಆಗುವಷ್ಟು ಬಹುಮತವನ್ನು ನಿಮಗೆ ಕೊಟ್ಟರು. ಇಲ್ಲಿ ಕುಳಿತಿರುವವರ ಬಗ್ಗೆ ನೀವು ಯೋಚನೆ ಮಾಡುತ್ತೀರ? ಯಡಿಯೂರಪ್ಪನವರೇ, ಏನು ಕೂಗುತ್ತೀರಿ, ಇಲ್ಲಿ ಕುಳಿತಿರುವವರು ನಾಲ್ಕೇ ಜನ, ನೀವು ಎಷ್ಟು ಮಾತನಾಡುತ್ತೀರಿ ಎನ್ನುತ್ತೀರ? ನಮ್ಮ ಜನತಾ ದಳದ ಸ್ನೇಹಿತರು ಮಾತನಾಡುವಂತಹ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ. ಅವರು ಪರಸ್ಪರ ಕಚ್ಚಾಟ, ಬಡಿದಾಟದಲ್ಲಿ ತಲ್ಲೀನರಾಗಿದ್ದಾರೆ. ಇವತ್ತು ಆಡಳಿತ ಪಕ್ಷ ಯಾವಾಗ ಸರಿ ಆಗುತ್ತಾ ಇತ್ತು. ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಎಷ್ಟೊಂದು ಸವಲತ್ತುಗಳು ಇದೆ. ಸರ್ಕಾರ ತಪ್ಪು ಹೆಜ್ಜೆ ಇಟ್ಟಾಗ ಅಂಕಿ ಅಂಶಗಳನ್ನು ತರಿಸಿಕೊಂಡು ಚಾವಟಿಯಲ್ಲಿ ಬಡಿದಿದ್ದರೆ, ತಪ್ಪು ಹೆಜ್ಜೆ ಇಡದಂತೆ ನೋಡಿಕೊಳ್ಳುವುದರಲ್ಲಿ ನಮ್ಮ ಈ ಕಡೆಯ ಸ್ನೇಹಿತರು. ಮಾನ್ಯ ಸಿಂಧ್ಯಾರವರು ವಿರೋಧ ಪಕ್ಷದ ನಾಯಕರಾಗಿದ್ದರೆ ಬೇರೆ ಆಗುತ್ತಿತ್ತು. ಅವರು ಬಿಗಿ ಮಾಡುತ್ತಾ ಇದ್ದರು. ಬಿಗಿ ಮಾಡುತ್ತೀರಿ ಎಂದು ನಿಮ್ಮನ್ನು ಕೂರಿಸುವುದಿಲ್ಲ. ಇದು ದೌರ್ಭಾಗ್ಯ. ನಾನು ಈಗ ಏನು ಹೇಳಬೇಕೆಂದು ಇದ್ದೇನೆಂದರೆ ಈ ಕಡೆಯಿಂದ ಚಾವಟಿಯನ್ನು ಇಟ್ಟುಕೊಂಡು ಆಡಳಿತ ಪಕ್ಷಕ್ಕೆ ಮಣಿಯದೆ ಸರಿ ಹೆಜ್ಜೆಯಲ್ಲಿ ತೆಗೆದುಕೊಂಡು ಹೋಗುವುದರಲ್ಲಿ ನೀವು ಯಶಸ್ವಿಯಾಗಿದ್ದರೆ, ಗಟ್ಟಿಯಾದಂತಹ ಜನ ಇಲ್ಲಿ ಕುಳಿತಿದ್ದರೆ ಇವತ್ತು ಮನ ಬಂದಂತೆ ಅಧಿಕಾರವನ್ನು ನಡೆಸುವುದಕ್ಕೆ ಅವರಿಂದ ಆಗುತ್ತಾ ಇರಲಿಲ್ಲ ಎನ್ನುವಂತಹ ಮಾತನ್ನು ನಾನು ವಿರೋಧ ಪಕ್ಷದ ನಾಯಕರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅಧ್ಯಕ್ಷರೆ, ಪಾಪ ಈಗ ಮಾನ್ಯ ಯಡಿಯೂರಪ್ಪನವರು ನನ್ನ ಬಗ್ಗೆ ವೈಯುಕ್ತಿಕವಾಗಿ ಒಳ್ಳೆಯ ಮಾತನ್ನು ಹೇಳುವುದಕ್ಕೆ ಹೋಗಿ ನನ್ನನ್ನು ಪಾತಾಳಕ್ಕೆ ತುಳಿಯುವುದಕ್ಕೆ ಏನೇನು ಮಾಡಬೇಕು ಅನ್ನೆಲ್ಲಾ ಮಾಡುತ್ತಿದ್ದಾರೆ. ಈಗ ನಾನು ಎರಡನೇ ಸ್ಥಾನದಲ್ಲಿ ಇದ್ದೇನೆ. ನನ್ನನ್ನು ಆ ಕಡೆ ಎಲ್ಲೊ ಕೂರಿಸಬೇಕು ಎಂದು ಪಿತೂರಿ ಇದು. ನಾವು ಈಗ ಕಾಂಗ್ರೆಸ್ (ಐ)ನ್ನು ಟೀಕೆ ಮಾಡುವುದರಲ್ಲಿ ಅಥವಾ ಆಡಳಿತ ಪಕ್ಷದ ತಪ್ಪುಗಳನ್ನು ಹೊರಗಡೆ ಎಳೆಯುವುದರಲ್ಲಿ ಯಾರಿಗೂ ಕಡಿಮೆ ಏನಿಲ್ಲ. ಆದರೆ ದೇಶದಲ್ಲಿ ವಿಚಿತ್ರವಾದಂತಹ ಒಂದು ಪರಿಸ್ಥಿತಿ ಇದೆ. ಈಗ ಅವರನ್ನು ಹೊರಗಡೆ ತೆಗೆಯುವುದಕ್ಕಿಂತ ಹೆಚ್ಚಾಗಿ ನಿಮ್ಮನ್ನು ಬಯಲಿಗೆಳೆಯುವಂತಹ ಒಂದು ದೊಡ್ಡ ಸಮಸ್ಯೆ ದೇಶಕ್ಕೆ ಆಗಿ ಕುಳಿತಿದೆ. ಅದು ನಮಗೆ ಬಂದಿರುವ ತೊಂದರೆ, ಅದರಿಂದ ನೀವು ಏನು ಮಾಡುತ್ತೀರ ಹೇಳಿ. ವಿಚಿತ್ರವಾದಂತಹ ಒಂದು ಸನ್ನಿವೇಶವಾಗಿದೆ ನಮ್ಮದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ಮಾನ್ಯ ಸಿಂಧ್ಯಾರವರು ಹೇಳಿರುವುದು ಒಂದು ತರಹ ಹೊಟ್ಟೆಯಲ್ಲ ಕಿವುಚಿಕೊಳ್ಳುವಂತಹ ಪರಿಸ್ಥಿತಿ. ಅದು ಆಪರೇಟ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಏನಾಗಿದೆಯೆಂದರೆ ರೋಗ ಉಲ್ಬಣವಾಗಿಬಿಟ್ಟಿದೆ. ಆಡಳಿತ ಪಕ್ಷದವರಾಗಿ ಇತ್ತ ವಿರೋಧ ಪಕ್ಷ ಎಂದು ಕರೆದುಕೊಂಡು ಈ ಕಡೆ ಕುಳಿತು ಅವರ ತಪ್ಪನ್ನು ಹೇಳುವುದಕ್ಕೆ ಆಗದೇ ಇರುವಂತಹ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕಿರುವವರಿಗೆ ನಾನು ಏನು ಹೇಳಬೇಕು? ಅವರು ಬಹಳ ಸ್ಪಷ್ಟವಾಗಿ ಹೇಳುತ್ತಾರೆ, ಸ್ವಾಮಿ ನಿಮ್ಮದು ಜಾತಕ ಗೊತ್ತಿಲ್ಲವ ಎಂದು ತಕ್ಷಣ ನೀವು ಏನು ಹೇಳುತ್ತೀರಿ? ಇಲ್ಲ,ನಾವು ತಪ್ಪು ಮಾಡಿಲ್ಲ ಎಂದು ಹೇಳುವುದಿಲ್ಲ. ನಮ್ಮ ಜಾತಕ ಗೊತ್ತು, ಅದಕ್ಕೆ ಜನ ನಮ್ಮನ್ನು ಇಲ್ಲಿ ಕೂರಿಸಿದರು, ಈಗ ನಿಮ್ಮದನ್ನು ಹೇಳಿ ಎಂದು, ನಮ್ಮ ದೇಶದ್ದು ಎಂತಹ ಪರಿಸ್ಥಿತಿ ಸ್ವಾಮಿ.

ನಿಜವಾಗಿಯೂ ನಮ್ಮ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇಲ್ಲಿ ಕುಳಿತುಕೊಂಡು ವಿರೋಧ ಪಕ್ಷದ ಬಗ್ಗೆ ಟೀಕೆಯನ್ನು ಮಾಡಿದಾಗ ಒಂದು ಅಪರಾಧ ಅಥವಾ ಒಂದು ತಪ್ಪನ್ನು ತೋರಿಸಿ ಎಂದು ಹೇಳುವಂತಹ ನೈತಿಕ ಹಕ್ಕನ್ನು ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ನಮ್ಮ ಸ್ನೇಹಿತರು ಉಳಿಸಿಕೊಂಡಿದ್ದರೆ, ನಮ್ಮ ರಾಜ್ಯದ ಜನತೆಗೆ ಈ ರೀತಿಯ ಒಂದು ದುಸ್ಥಿತಿ ಬರುತ್ತಾ ಇರಲಿಲ್ಲ. ಈಗ ನಾನು ಏನು ಹೇಳುವುದಕ್ಕೆ ಹೊರಟದ್ದೇನೆಂದರೆ ಇಂದಿನ ರಾಜಕೀಯ ಈ ಒಂದು ದುಸ್ಥಿತಿಗೆ ಮತ್ತು ಪರಿಸ್ಥಿತಿಗೆ ಹಾಗೂ ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿರುವುದಕ್ಕೆ, ಹಣಕಾಸಿನ ಪರಿಸ್ಥಿತಿ ಪೂರ್ಣವಾಗಿ ಹದಗೆಟ್ಟಿರುವುದಕ್ಕೆ, ಆ ಕಡೆ ಕುಳಿತಿರುವಂತಹ ಆಡಳಿತ ಪಕ್ಷದ ನಮ್ಮ ಸ್ನೇಹಿತರು ಎಷ್ಟು ಜವಾಬ್ದಾರರೋ, ಅದೇ ರೀತಿ ಈ ಕಡೆ ಕುಳಿತಿರುವಂತಹ ವಿರೋಧ ಪಕ್ಷದಲ್ಲಿ ಇರುವ ಮಾನ್ಯ ಸಿಂಧ್ಯಾರವರ ಸ್ನೇಹಿತರುಗಳು ಮತ್ತು ಜವಾಬ್ದಾರಿ ಹೊತ್ತಿರುವಂತಹ ವಿರೋಧ ಪಕ್ಷದವರೂ ಸಹ ಇದರಲ್ಲಿ ಸರಿ ಸಮಾನವಾಗಿ ಪಾಲುದಾರರು. ಇವತ್ತಿನ ಈ ಪರಿಸ್ಥಿತಿಗೆ ನೀವು ಸಹ ಅಷ್ಟೇ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ಬಹಳ ಸರಿಯಾಗಿದೆ ನಿಮಗೆ ಏನು ಇರುವುದು ರಾಜ್ಯದ ಜನರ ಹಿತ ಅಲ್ಲ. ನಮ್ಮ ಅಪರಾಧಗಳಿಂದ ಭಾರತೀಯ ಜನತಾ ಪಾರ್ಟಿ ಎಲ್ಲಿ ಅಧಿಕಾರಕ್ಕೆ ಬರುತ್ತದೆಯೋ ಅದು ಬರದಂತೆ ಯಾರ ಜೊತೆ ಸೇರಿದರೂ ಪರವಾಗಿಲ್ಲ. ಬಿ.ಜೆ.ಪಿ. ಮಾತ್ರ ಬೆಳೆಯಬಾರದು ಅಂತ ನೀವು ಹೇಳುತ್ತೀರಿ. ಕೆಲವರ ಮಾತನ್ನು ನಾವು ಕೇಳುತ್ತಿದ್ದೇವೆ. ನೀವು ಮಾತೆತ್ತಿದರೆ ಏನು ಹೇಳುತ್ತೀರಿ. ನಮ್ಮ ಸಂಸ್ಥೆ ಕೋಮು ಸಂಸ್ಥೆ ಎಂದು ಭೂತವನ್ನುಂಟು ಮಾಡಿ ನೀವು ಬೆಳೆಸಿದವರು ಎಂದು ಕಾಂಗ್ರೆಸ್‌ನವರಿಗೆ ಹೇಳುತ್ತಾರೆ. ನೀವು ಬೆಳೆಸಿದವರು ಎಂದು ಜನತಾ ದಳದವರು ಹೇಳುತ್ತಾರೆ, ಸ್ವಾಮಿ ನೀವಿಬ್ಬರು ಅಲ್ಲ. ಸ್ವಾಮಿ ನಮ್ಮ ಮಾಲೀಕರ ಜನ ಅವರು ಅಲ್ಲಿದ್ದಾರೆ. ಏಕೆ ಹೀಗೆ ಹೇಳಿ ಅಪರಾಧ ಮಾಡುತ್ತಿದ್ದೀರಿ. ಯಾರನ್ನು ಅಧಿಕಾರಕ್ಕೆ ತರಬೇಕು ಯಾರನ್ನು ತರಬಾರದು ಆ ಒಂದು ಪ್ರಜ್ಞೆ 45 ವರ್ಷಗಳಲ್ಲಿ ಸಾಮಾನ್ಯ ಮತದಾರರಿಗೆ ಬಂದಿದೆ. ಜನ ಕಾಂಗ್ರೆಸ್ ನೋಡಿದರು, ಜನತಾ ದಳವನ್ನು ನೋಡಿದರು. ಇವತ್ತು ಜನ ನಿಶ್ಚಯ ಮಾಡಿದ್ದಾರೆ. ಎಷ್ಟು ಬೇಗ ಇವರ ಅಧಿಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಈ ರಾಜ್ಯದ ಮತದಾರನಿಗೆ, ಈ ದೇಶದ ಮತದಾರನಿಗೆ ಗೊತ್ತಾಗಿದೆ ಎನ್ನುವುದು ನಿಮಗೂ ಗೊತ್ತಾಗಿದೆ. ಬಿ.ಜೆ.ಪಿಯವರು ಅಧಿಕಾರಕ್ಕೆ ಬರುವುದು ಎಷ್ಟು ನಿಧಾನವಾಗುತ್ತೋ ಅಷ್ಟು ಒಳ್ಳೆಯದು. ನೀವು ಬರುವುದನ್ನು ಇಷ್ಟು ದಿನ ತಡೆದೆವಲ್ಲಾ- ಎಂಬ ಸಮಾಧಾನವನ್ನು ನಮ್ಮ ಸ್ನೇಹಿತರಾದ ಸಿಂಧ್ಯಾರವರು ಹೇಳಿದರು. ಅವರು ಸತ್ಯ ಹೇಳಿದ್ದರಿಂದ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ನಮ್ಮ ಗರಡಿಯಲ್ಲಿ ಬೆಳೆದವರು. ಸತ್ಯಸಂಗತಿಗಳು ಏನು ಎಂದು ಅವರಿಗೆ ಗೊತ್ತಿದೆ. ರಾಜಕಾರಣದಲ್ಲಿ ಯಾರ್‍ಯಾರೋ ಎಲ್ಲೆಲ್ಲೋ ಇರುತ್ತಾರೆ. ಅವರು ನಂಬಿರುವಂತಹ ತತ್ವ ಸಿದ್ಧಾಂತ ತಪ್ಪೇನು ಇಲ್ಲ. ಒಂದು ಮಾತು ಹೇಳುತ್ತೇವೆ. 45 ವರ್ಷದಲ್ಲಿ ಈ ನಾಡಿನ ಜನ ನಿಮ್ಮನ್ನು ನಂಬಿ ಅಪರಾಧ ಮಾಡಿದ್ದೇವೆ. ಎನ್ನುವಂತಹ ಅರಿವು ಅವರಿಗೆ ಮೂಡುತ್ತಿದೆ. ಇವತ್ತು ಭಾರತೀಯ ಜನತಾ ಪಾರ್ಟಿ ನೀತಿ ಸಿದ್ಧಾಂತಗಳು ಏನಿವೆ ಅವೇ ಈ ದೇಶಕ್ಕೆ ಸರಿಯಾದಂತಹ ಔಷಧಿ ಎನ್ನುವಂತಾದ್ದು ಜನರಿಗೆ ಮನದಟ್ಟು ಆಗುತ್ತಿದೆ. ಇದು ನಮ್ಮ ಸಿಂಧ್ಯಾರವರಿಗೆ ಆ ಕಡೆ ಕುಳಿತಿರುವವರಿಗೆ ಈ ಕಡೆ ಕುಳಿತಿರುವವರಿಗೆ ನಮ್ಮ ಸ್ನೇಹಿತರಿಗೆ ಮನದಟ್ಟು ಆಗಿರಬಹುದು. ಎನ್ನತಕ್ಕಂಥ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಇನ್ನು ನೀರಾವರಿ, ಇದು ಜನರ ಜೀವಾಳ. ಅವನ ಬದುಕಿನ ಅಳಿವು ಉಳಿವಿನ ಪ್ರಶ್ನೆ. ಮಾನ್ಯ ರಾಮಯ್ಯನವರು ಹೇಳಿದರು, ಸಾಕಷ್ಟು ಅನುಭವ ಇರುವಂತಹ ಸ್ನೇಹಿತರು ಈ ಕಡೆ ಇದ್ದಾರೆ, ನಾನು ಕೇಳುತ್ತೇನೆ. ಸ್ವಾಮಿ. 2 ಸಾವಿರ ಎ.ಡಿ.ಯಲ್ಲಿ ಕಾವೇರಿ ಜಲಾನಯನ ಪ್ರದೇಶ ಅಲ್ಲಿರತಕ್ಕಂಥ ನೀರಿನ ಪೂರ್ಣ ಉಪಯೋಗ ಮಾಡಿಕೊಳ್ಳಬೇಕಲ್ಲ ನಾವು. ಸನ್ಮಾನ್ಯ ಉಪ ಮುಖ್ಯಮಂತ್ರಿ ಕೃಷ್ಣರವರು

ಅಲ್ಲಿರದಿದ್ದರೆ ಬೇರೆ ಯಾರೂ ಸತ್ಯ ಹೇಳುತ್ತಿರಲಿ ಅವರು ಸತ್ಯ ಹೇಳಿದರು. ಕಳೆದ ಇಷ್ಟು ವರ್ಷಗಳಲ್ಲಿ ನಾವು ಮಾಡಿರುವ ಸಾಧನೆಯಿಂದ ಕೇವಲ ಶೇಕಡ 30 ಪರ್ಸೆಂಟ್ ಮಾತ್ರ ನೀರಾವರಿ ಮಾಡಿಕೊಳ್ಳುವುದಕ್ಕೆ ನಮಗೆ ಆಗಿದೆ ಎಂದು. ಅವರ ಅಂದಾಜಿನ ಪ್ರಕಾರ, ನಾನು ಹೇಳಿಲ್ಲ. ಅಲ್ಲಿಗೆ ತಲುಪಬೇಕಾದರೆ 6 ಸಾವಿರ ಕೋಟಿ ಬೇಕಾಗಬಹುದು ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಏನು ಚರ್ಚೆ ಮಾಡೋಣ, ಸ್ವಾಮಿ ಇಷ್ಟು ವರ್ಷ ನಿಮಗೆ ಅವಕಾಶ ಕೊಟ್ಟಾಗ ಅತ್ಯಂತ ಕಡಿಮೆ ಹಣದಲ್ಲಿ ಈ ಯೋಜನೆಗಳನ್ನು ಪೂರ್ಣ ಮಾಡುವಂತಹ ಸಂದರ್ಭ ಬಂದಾಗ ಅಣೆಕಟ್ಟುಗಳನ್ನು ಕಟ್ಟಿ ಆಗಿದ್ದರೂ ಸಹ ಕಾಲುವೆಗಳನ್ನು ತೆಗೆದು ನೀರು ಕೊಡುವಂತಹ ಯೋಗ್ಯತೆ ಇಲ್ಲ ಎಂದು ಹೇಳಲಾ ಶಕ್ತಿ ಇಲ್ಲ ಎಂತ ಹೇಳಲೇ ಕಳಕಳಿ ಇಲ್ಲ ಅಂತ ಹೇಳಲೇ, ಅಥವಾ ನೀರು ಕೊಟ್ರೆ ಜನ ಬುದ್ಧಿವಂತರಾಗಿ ನಮಗೆ ಓಟು ಕೊಡುವುದಿಲ್ಲ ಅಂತ ಹೇಳಿ ಅವರನ್ನು ಅದೇ ಸ್ಥಿತಿಯಲ್ಲಿಟ್ಟಿದ್ದೀರಾ ಎಂದು ಹೇಳಲೇ, ಇಷ್ಟು ಅಂತು ಸತ್ಯ 2 ವರ್ಷಗಳಲ್ಲಿ ನಿಮ್ಮ ಕಾಲದಲ್ಲಿ ಆ ಒಂದು ಕೃಷ್ಣಾ ಜಲಾನಯನ ಪ್ರದೇಶದ ನೀರನ್ನು ಪೂರ್ಣ ಉಪಯೋಗ ಮಾಡಿಕೊಂಡು ನೀರನ್ನು ಕೊಡುವಂತಹ ಆ ಪೊಲಿಟಿಕಲ್ ವಿಲ್ ಇಲ್ಲ, ಆ ಕೆಲಸ ಮಾಡುವುದಕ್ಕೆ ನಿಮ್ಮ ಕಡೆಯಿಂದ ಸಾಧ್ಯ ಇಲ್ಲ ಎಂದು ಒಪ್ಪಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ನಿಮ್ಮನ್ನು ಉದ್ದೇಶಪೂರ್ವಕವಾಗಿ ಗೊಂದಲ ಇರುವಂತಹ ಇಲಾಖೆ ಕೊಟ್ಟಿದ್ದಾರೆ. ಉಪಮುಖ್ಯಮಂತ್ರಿಗಳು ಏನು ಭ್ರಮೆಯಲ್ಲಿದ್ದಾರೆ ಈ ನಾಡಿನ ರೈತರಿಗೆ ಸಂಬಂಧಪಟ್ಟಂತಹ ಬಹುತೇಕ ಜನರಿಗೆ ಸಂಬಂಧಪಟ್ಟಂಥ ವಿದ್ಯುತ್ ಇಲಾಖೆ ನೀರಾವರಿ ಇಲಾಖೆ ನಮಗೆ ಸಿಕ್ಕಿದೆ ಎಂದು ತಿಳಿದು ಕೊಂಡಿದ್ದಿರಿ. ನೀವೇ ಅಪೇಕ್ಷೆಪಟ್ಟು ಇದನ್ನು ರಿಪೇರಿ ಮಾಡಬೇಕೆಂದು ತೆಗೆದುಕೊಂಡಿದ್ದರೆ ವೀರಪ್ಪ ಮೊಯ್ಲಿಯವರು ಹೇಳಿದಂತೆ ಮೇಜರ್ ಸರ್ಜರಿ ಮಾಡಬೇಕೆಂದು ಇದ್ದರೆ, ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇಲ್ಲಿ ಯಾವ ಇಲಾಖೆಯನ್ನು ಸರಿಪಡಿಸುವುದಕ್ಕೆ ಸಾಧ್ಯ ಇಲ್ಲವೋ ಎಂದು ಸ್ಪಷ್ಟವಾಗಿ, ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುವುದಕ್ಕೆ ಏನಾದರೂ ಈ ಇಲಾಖೆ ಕೊಟ್ಟಿದ್ದಾರೋ ಏನೋ ಎನ್ನುವಂತಹ ಭಯ ನನಗೆ ಇದೆ. ನಾನು ಮಂಡ್ಯ ಜಿಲ್ಲೆಯವನು. ನಿಮ್ಮ ಜಿಲ್ಲೆಯವನು. ನಿಮ್ಮಂಥ ಕಳಕಳಿ ಇರುವಂತಹವರಿಗೆ ಈ ಇಲಾಖೆ ಸಿಕ್ಕಿದಾಗ ಇದಕ್ಕೆ ಬೇಕಾದಂತಹ ದುಡ್ಡು ತೆಗೆದುಕೊಳ್ಳುತ್ತೀರಾ ಸ್ವಾಮಿ. ತೆಗೆದುಕೊಳ್ಳುತ್ತೀರಾ ? ಇವತ್ತು ಕೃಷ್ಣಾ ಜಲಾನಯನ ಪ್ರದೇಶ ಮುಗಿಸುವುದಕ್ಕೆ 6 ಸಾವಿರ ಕೋಟಿ ರೂಪಾಯಿಗಳು ಬೇಕು .2 ಸಾವಿರ ವರ್ಷದಲ್ಲಿ ಎಂದು ಹೇಳುತ್ತೀರಲ್ಲ, ಅದಕ್ಕೆ ಯಡಿಯೂರಪ್ಪನವರೇ ನಮ್ಮ ಕಾಲದಲ್ಲಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ, ಮಾನಿಟರ್ ಮಾಡುತ್ತೇನೆ ನನ್ನ ಜೊತೆ ಇರುವಂತಹ ಇನ್ನೊಬ್ಬ ಉಪಸಚಿವನನ್ನು ಅಲ್ಲಿ ತೆಗೆದುಕೊಂಡು ಹೋಗಿ ಹಾಕುತ್ತೇನೆಂದು ಹೇಳಿ. ಸ್ವಾಮಿ ಯಾರ್ಯಾರನ್ನೋ ಮಂತ್ರಿ ಮಾಡಿಬಿಟ್ಟರು ನಿಮ್ಮ ಮುಖ್ಯಮಂತ್ರಿಗಳು. ಯಾವ್ಯಾವುದೋ ಬಾಬಿಗೆ. ಯಾವ್ಯಾವುದೋ ಇಲಾಖೆಗೆ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಆಗದೇ ಇರತಕ್ಕಂಥ ಇಲಾಖೆಗೆ ಒಬ್ಬ ಮಂತ್ರಿಯನ್ನು ನಾನು ಕೇಳುತ್ತೇನೆ ಸ್ವಾಮಿ ಈ ನಿಮ್ಮ ಮುಖ್ಯಮಂತ್ರಿಗಳಿಗೆ ನೀರಾವರಿ ಯೋಜನೆ ಬಗ್ಗೆ ಕಳಕಳಿ ಇದ್ದಿದ್ದರೆ ಆ ಕೃಷ್ಣ ಜಲಾನಯನ ಪ್ರದೇಶವನ್ನು ನೋಡಿಕೊಳ್ಳುವುದಕೋಸ್ಕರ ಒಬ್ಬ ಮಂತ್ರಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆ ಭಾಗದಲ್ಲಿರುವಂಥ, ಅಲ್ಲೇ ಇದ್ದು ಪ್ರತಿನಿತ್ಯ ಅಲ್ಲಿ ಓಡಾಟ ಮಾಡಿ. 2 ಸಾವಿರ ವರ್ಷದಲ್ಲಿ ಮಿಗಿಸುವುದಕ್ಕೋಸ್ಕರ ಅದಕ್ಕೆ ಬೇಕಾದ ಹಣವನ್ನು ತೆಗೆದುಕೊಂಡು ಬೇಕಾದ ತೀರ್ಮಾನ ತೆಗೆದುಕೊಂಡು ಪೂರ್ಣ ಮಾಡುತ್ತೇನೆ ಎನ್ನುವ ಕಳಕಳಿ ಇತ್ತೇನು ಸ್ವಾಮಿ ನಿಮ್ಮ ಮುಖ್ಯಮಂತ್ರಿಗಳಿಗೆ. ತಾವು ಹೋಗಿ ಬಂದಿರಿ, ಪರಿಸ್ಥಿತಿಯನ್ನು ನೋಡಿದ್ದೀರಿ ತಮ್ಮ ನೋವನ್ನು ಅಳಲು ತೋಡಿಕೊಂಡಿದ್ದೀರಿ ? ಆದರೆ ನಾನು ವಿನಂತಿ ಮಾಡುತ್ತೇನೆ ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಈಗಲಾದರೂ ದಿಟ್ಟ ಹೆಜ್ಜೆ ಇಡಿ. ಹೇಳಿ ಯಡಿಯೂರಪ್ಪನವರೇ ಮ್ಯಾಗ್ಸಿಮಮ್ ಹಣ ಆದರಲ್ಲಿ

ನಾವು ತೊಡಗಿಸುತ್ತೇವೆ. ಆಕ್ವಿಜಿಷನ್, ಸಂಬಳ ಸಾರಿಗೆ ಮತ್ತೊಂದು ಮಗದೊಂದು ಲೂಟಿ ಇದಕ್ಕೆ 70 ಪರ್ಸೆಂಟ್ ಖರ್ಚಾಗಿದೆ ಅಂಕಿಅಂಶಗಳನ್ನು ನೋಡಿದರೆ ಗಾಬರಿ ಆಗಿಬಿಡಬಹುದು. ತುಕ್ಕು ಹಿಡಿದು ಹೋಗಿದೆ. ರಿಪೇರಿ ಮಾಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿ ಬಂದಿದೆ. ನಿಮ್ಮ ಕಾಲದಲ್ಲಿ ನೀವು ಇದುವವರೆಗೂ ಒಬ್ಬ ಅಧಿಕಾರಿಯನ್ನು ಅಲ್ಲಿ ಹಾಕಿ ನಿಮಗೆ ಯಾರು ಬೇಕೋ ಅವರನ್ನು ಕನಿಷ್ಟ ಒಂದು 500 ಕೋಟಿ ರೂಪಾಯಿ ಖರ್ಚು ಮಾಡಿ.

ರೈತರ ಹೆಸರು ಹೇಳುತ್ತೀರಿ. ಕೃಷಿ ಕಾರ್ಮಿಕರ ಹೆಸರು ಹೇಳುತ್ತೀರಿ, ಬಡವರ ಹೆಸರು ಹೇಳುತ್ತೀರಿ, ಹರಿಜನ ಗಿರಿಜನರ ಹೆಸರು ಹೇಳುತ್ತೀರಿ ಆದರೆ ಅವರ ಅಭಿವೃದ್ಧಿಗೆ ಕಳೆದ 45 ವರ್ಷಗಳಿಂದ ಮಾಡಿದಂಥ ಸಾಧನೆ ಏನು ? ಸ್ವಾಮಿ, ನೀವು ಕೊಟ್ಟಿರತಕ್ಕಂಥ ಅಂಕಿ ಅಂಶ ನೋಡಿದ್ದೀರಿನು ? ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಲಿಫ್ಟ್ ಇರಿಗೇಷನ್, 87ರಲ್ಲಿ ಪ್ರಾರಂಭವಾಯಿತು. ಈ ಲಿಫ್ಟ್ ಇರಿಗೇಷನ್ ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಿ ತಂದಿರಿ, ತುಂಬಾ ಸಂತೋಷ. ಆದರೆ ಇವತ್ತಿನವರೆಗೆ 86–87ರಿಂದ ನಿಮ್ಮ ಅಧಿಕಾರದಲ್ಲಿ ಹಿಂದೆ ಇದ್ದವರೂ, ಈಗ ಇರುವವರೂ ಒಪ್ಪಿಕೊಂಡಿದ್ದೀರಿ, ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಸ್ವಾಮಿ ನೀವೇ ಕೊಟ್ಟಿರತಂಕ್ಕಂಥ ಅಂಕಿ ಅಂಶದ ಪ್ರಕಾರ 86–87ರಲ್ಲಿ ಈ ಕೃಷ್ಣಾ ಜಲಾನಯನ ಪ್ರದೇಶಕ್ಕೆ ನೀವು ಬಿಡುಗಡೆ ಮಾಡಿದಂಥ 8 ಕೋಟಿ ರೂಪಾಯಿಗಳಲ್ಲಿ 6 ಕೋಟಿ 9 ಲಕ್ಷ ರೂಪಾಯಿಗಳನ್ನು ಅಲ್ಲಿರುವಂಥ ಸಿಬ್ಬಂದಿಗೆ ಖರ್ಚು ಮಾಡಿದ್ದೇವೆಂದು ನೀವೇ ಅಂಕಿ ಅಂಶ ಕೊಟ್ಟು ಒಪ್ಪಿಕೊಂಡಿದ್ದೀರಿ. ಇದು ಎಂಥಾ ಪರಿಸ್ಥಿತಿ ಸ್ವಾಮಿ ? ಒಂದು ಲಿಫ್ಟ್ ಇರಿಗೇಷನ್ ನಿಗಮವನ್ನು ರಚನೆ ಮಾಡಿ 86–87ರಿಂದ ಆ ಮೂಲಕ ಯಾವುದೇ ಲಿಫ್ಟ್ ಇರಿಗೇಷನ್ ಮಾಡದೆ 8 ಕೋಟಿ ರೂಪಾಯಿ ಬಜೆಟ್‌ನಲ್ಲಿ 6 ಕೋಟಿ 9 ಲಕ್ಷ ರೂಪಾಯಿ ಹಣವನ್ನು ಸಿಬ್ಬಂದಿಗೇ ಖರ್ಚು ಮಾಡುತ್ತೇವೆಂದು ಹೇಳುವಂಥ ಜನ, ನೀವು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ನೈತಿಕ ಹಕ್ಕು ಇದೆಯೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸ್ವಾಮಿ ಇದರ ಯೋಜನೆ ಏನು ಈ ಲಿಫ್ಟ್ ಇರಿಗೇಷನ್ ಮೂಲಕ ಆ ಕೃಷ್ಣಾ ಜಲಾನಯನದಲ್ಲಿ ನೀರನ್ನು ಎತ್ತದೇ ಇದ್ದರೆ ರೈತನ ಗತಿ ಏನು ಸ್ವಾಮಿ ? ಈ ರಾಜ್ಯದ ರೈತ ಅನ್ನ ಕೊಟ್ಟನಲ್ಲ, ನಮ್ಮನ್ನು ನಿಮ್ಮನ್ನು ಇಲ್ಲಿಗೆ ಕಳುಹಿಸುವುದಕ್ಕೆ ಅವಕಾಶ ಮಾಡಿಕೊಟ್ಟನಲ್ಲ, ಅದು ಅವನ ಅಪರಾಧ ಆಯಿತೇನು ? ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಎತ್ತುವುದಕ್ಕೆ ಬೇಕಾದ ಖರ್ಚನ್ನು ರೈತ ಕೊಡಬೇಕಂತೆ ಸ್ವಾಮಿ ? ಎಲ್ಲಿದೆ ಅವನ ಹತ್ತಿರ ಹಣ ? ಬಿತ್ತನೆ ಬೀಜಕ್ಕೆ ಅವನ ಹತ್ತಿರ ಹಣ ಇಲ್ಲ, ದುಡಿಯುವ ಕೈಗಳಿಗೆ ಕೆಲಸ ಇಲ್ಲ. ಅವನು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಇಲ್ಲ. ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಅವನ ಹೊಲಕ್ಕೆ ಕೊಟ್ಟು ಬೇಕಾದಂಥ ತೆರಿಗೆಯನ್ನು ಹಾಕಿ. ಅವನನ್ನು ಉಳಿಸಬೇಕಾದಂಥ ನೀವು ರೈತನಿಂದ ದುಡ್ಡನ್ನು ಸಂಗ್ರಹ ಮಾಡಿ ಲಿಫ್ಟ್ ಇರಿಕೇಷನ್ ಮಾಡುತ್ತೇವೆಂದು ಹೇಳುವಂಥ ರೈತನ ಕಣ್ಣಿಗೆ ಮಣ್ಣು ಎರಚುವಂಥ ಷಡ್ಯಂತರದ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದೀರಿ ಕಳೆದ 45 ವರ್ಷಗಳಲ್ಲಿ. ಭಗವಂತ ಕೊಟ್ಟಂಥ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡದೆ ಭಾರತೀಯ ಜನತಾ ಪಾರ್ಟಿ ಬಗ್ಗೆ ಟೀಕೆ ಮಾಡುತ್ತೀರ ! ನಮ್ಮನ್ನು ತೆಗೆದುಕೊಂಡು ನೀವು ಏನು ಮಾಡುತ್ತೀರಿ ಸ್ವಾಮಿ ? ನಿಮ್ಮದು ಹಳೇ ಕಥೆ. ಇವತ್ತು ಲಿಫ್ಟ್ ಇರಿಗೇಷನ್ ನಿಗಮವನ್ನು ರದ್ದು ಮಾಡುವಂಥ ಪ್ರಯತ್ನ ಏನು ಮಾಡುತ್ತಿದ್ದೀರಿ ? ಅದರ ಬಗ್ಗೆ ನಾನು ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಯಾವುದೋ ಆವೇಶದಲ್ಲಿ ಆ ಲಿಫ್ಟ್ ಇರಿಗೇಷನ್ ನಿಗಮವನ್ನು ಹತೋಟಿಗೆ ತರುವುದಕ್ಕೆ ಆಗದೆ ಈ ರೀತಿ ಮಾಡಬೇಡಿ. ಯಾರೂ ಅದರ ಬಗ್ಗೆ ಗಮನ ಕೊಡದೇ ಇದ್ದುದರಿಂದ ಈ ಪರಿಸ್ಥಿತಿಗೆ ಬಂದಿದೆಯೇ ಹೊರತು ಬೇರೆ ಏನಿಲ್ಲ. ಆದ್ದರಿಂದ ದಯಮಾಡಿ ಕಾವೇರಿ ಮತ್ತು ಕೃಷ್ಣಾ ಬೇಸಿನ್‌ನಲ್ಲಿರುವ ಲಿಫ್ಟ್ ಇರಿಗೇಷನ್ ನಿಗಮವನ್ನು ರದ್ದು ಮಾಡಬೇಡಿ. ರೈತನ ಮೇಲೆ ಯಾವ ಷರತ್ತುಗಳನ್ನು ಹಾಕಬೇಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ನಿಗಮಗಳನ್ನು ರದ್ದುಪಡಿಸಬೇಡಿ ಎಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ. 86ನೇ ಇಸವಿಯಲ್ಲಿ ಈ ನಿಗಮಗಳನ್ನು ಒಳ್ಳೆಯ ಉದ್ದೇಶದಿಂದ ರಚನೆ ಮಾಡಿದ್ದರೂ ಅಲ್ಲಿಂದ ಇಲ್ಲಿಯವರೆಗೆ ಅದಕ್ಕೆ ಖರ್ಚು ಮಾಡಿರುವ ಹಣ 8 ಕೋಟಿ, ಆದರೆ 1 ಎಕರೆಯೂ ನೀರಾವರಿಯಾಗಿಲ್ಲ. ಅದಕ್ಕಾಗಿ ಅಂದಾಜು ಸಮಿತಿಯಿಂದ ವರದಿಗಳನ್ನು ತರಿಸಿ ಇಲ್ಲಿ ಯಾವ ರೀತಿಯಿಂದ ನೌಕರರನ್ನು ನೇಮಕ ಮಾಡಿದ್ದಾರೆ ? ಯಾವ ರೀತಿ ಇಲ್ಲಿ ಅಕ್ರಮಗಳು ನಡೆದಿವೆ ? ಯಾವ ಸದುದ್ದೇಶಕ್ಕೆ ನಿಗಮಗಳನ್ನು ರಚನೆ ಮಾಡಲಾಗಿತ್ತೋ ಅದರ ವಿರುದ್ಧ ಕೆಲಸ ಆಗಿದೆ. ಇದು ಬಿಳಿ ಆನೆಯಾಗಿ ಸಾರ್ವಜನಿಕರ ದುಡ್ಡನ್ನು ಕೊಳ್ಳೆಯಾಗಿದೆ. ಅದನ್ನು ರದ್ದು ಪಡಿಸಬೇಕೆಂದು ನಾವು ಸರ್ಕಾರಕ್ಕೆ ತಿಳಿಸಿದ್ದೇವೆ. ಆ ನಿಗಮಗಳು ಯಾವುದೇ ಕೆಲಸ ಮಾಡಿಲ್ಲ. ಇವುಗಳು ಬಿಳಿ ಆನೇ ಆಗುವುದು ಬೇಡ. ಇಂಥ ನಿಗಮಗಳನ್ನು ರದ್ದು ಮಾಡಬೇಕೆಂದು ನಮಗನಿಸುತ್ತದೆ.

ಶ್ರೀ ಯಡಿಯೂರಪ್ಪ:- ಯಾವುದೇ ಒಂದು ಮಂಡಳಿಗಳನ್ನು ರದ್ದು ಮಾಡುವುದೇ ಒಂದು ಪರಿಹಾರವಲ್ಲ. ಹಾಗಾದರೆ ನೀವು ಏಕೆ ಬಿಟ್ಟಿದ್ದೀರಿ ? 1987ರಿಂದ ಅಜೀರ್ಣವಾಗುವಷ್ಟು ಎಲ್ಲರೂ ತಿಂದು ತೇಗಿದ ಮೇಲೆ, ಈಗ ನಿಮಗೆ ಖುಷಿ ಬಂದ ಹಾಗೆ ಎಕ್ಸ್‌ಪೆರಿಮೆಂಟ್ ಮಾಡಿ, ರದ್ದು ಮಾಡುವುದಕ್ಕೆ ಹೊರಟಿದ್ದೀರಿ. ನೀವೇ ಇರಬೇಕಲ್ಲ ? ಮುಂದೆ ಬರುವ ನಮ್ಮ ಗತಿ ಏನಾಗಬಹುದು ? ಆದ್ದರಿಂದ ದಯ ಮಾಡಿ ಈ ಒಂದು ಪರಿಸ್ಥಿತಿಗೆ ನಮ್ಮನ್ನು ತರಬೇಡಿ.

ಶ್ರೀ ವಾಟಾಳ್ ನಾಗರಾಜ್:- ಎಲ್ಲರೂ ದಯವಿಟ್ಟು ಎದ್ದು ನಿಲ್ಲಬಾರದು, ಹಾಗೆ ನಿಂತರೆ ಒಂದು ಗಂಟೆ ಕಾಲ ವ್ಯಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಅಂದರೆ ಈ ನಾಡಿನ ಜನರು ಯಾರನ್ನು ಆಯ್ಕೆ ಮಾಡಿ ಕಳುಹಿಸುತ್ತಾರೆ ಅವರು. ಒಂದು ವೇಳೆ ನಾವು ಬದುಕಿರುವವರೆಗೆ ವಿರೋಧ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಬೇಕೆಂದು ಜನರು ಅಣತಿ ಮಾಡಿದರೆ ಅದನ್ನು ಶಿರಸಾ ವಹಿಸಿ ಮಾಡುತ್ತೇವೆ. ಇವೊತ್ತು ನಾವು ಜನರಿಂದ ಆಯ್ಕೆಯಾದಂಥ ಪ್ರತಿನಿಧಿಗಳು ಕೇವಲ ಜನರ ಮೇಲೆ ಹೊಸ ಹೊಸ ಪ್ರಯೋಗಗಳನ್ನು ಮಾಡುವುದಕ್ಕಿಂತ ಮೊದಲು, ನಿಗಮಗಳನ್ನು ರಚನೆ ಮಾಡಿ, ಅನಂತರ ಕಾರ್ಯರೂಪಕ್ಕೆ ತರುವಂತ ಕಳಕಳಿ, ಆ ಒಂದು ಪೊಲಿಟಿಕಲ್ ವಿಲ್ ನಿಮ್ಮಲ್ಲಿ ಇಲ್ಲ ಎಂದು ನಾನು ಹೇಳುತ್ತಿದ್ದೇನೆ, ಅದನ್ನು ತಾವುಗಳು ಯೋಚನೆ ಮಾಡಬೇಕು.

ಇನ್ನು ಶಿಕ್ಷಣಕ್ಕೆ ಆದ್ಯತೆ ಎಂದು ಹೇಳಿದ್ದೀರಿ. ಯಾವ ಶಿಕ್ಷಣಕ್ಕೆ ನಿಮ್ಮ ಆದ್ಯತೆ ಸ್ವಾಮಿ ? ಪ್ರೈಮರಿ ಶಾಲೆಗಳ ಅಭಿವೃದ್ಧಿ ಬಗ್ಗೆ ತಾವುಗಳು ಹೇಳಿದ್ದೀರಿ. ಈ ನಿಮ್ಮ 'ಅಕ್ಷರತುಂಗ' ಯೋಜನೆ ಬಗ್ಗೆ ಸಾಮಾನ್ಯ ಹುಡುಗರು ಮಾತನಾಡುವಂಥೆ ಆಗಿದೆ. ಅಕ್ಷರ ತುಂಗಾ ಯೋಜನೆಯಲ್ಲಿ ಮೂರು ಕೋಟಿ ನುಂಗಲಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಭರಾಟೆಯ ಒಂದು ಪ್ರಚಾರ, ನಿಮಗೆ ಅಧಿಕಾರ ಬಂದು 45 ವರ್ಷಗಳು ಕಳೆದು ಹೋದುವು. ಆದರೆ ಇವೊತ್ತು ಆ ಪ್ರೈಮರಿ ಶಿಕ್ಷಣವನ್ನು ಕೊಡದೇನೆ, ಅವರನ್ನು ಕೈಬಿಟ್ಟು ಹೆಬ್ಬೆಟ್ಟು ಒತ್ತುವವರನ್ನು ಕರೆದುಕೊಂಡು ಬಂದು, ಅಮ್ಮ ಅಪ್ಪ, ರಾಮ, ಬೋರ ಎಂದು ಹೆಸರು ಬರೆಸುತ್ತೇವೆ ಎಂದು ಕೈಹಿಡಿದುಕೊಂಡು ಹೊರಟಿದ್ದೀರಲ್ಲ ? ಆದರಿಂದ ಯಾವ ಸಾಧನೆಯನ್ನು ಮಾಡುತ್ತೀರಿ ? ಅದನ್ನು ಮಾಡಿ, ಬೇಡ ಎನ್ನುವುದಿಲ್ಲ. ಆದರೆ ನಾಳೆಯಿಂದ ಇಲ್ಲಿರುವ ಪ್ರತಿಯೊಂದು ಮಗುವಿಗೂ ಅಕ್ಷರ ಜ್ಞಾನವನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳುತ್ತೀರಾ ? ಆ ಬಗ್ಗೆ ಹೆಜ್ಜೆ ಇಡುತ್ತೀರಾ ? ಆಗ ನಿಮ್ಮ ಕಳಕಳಿಯನ್ನು ನಾವು ಮೆಚ್ಚಿಕೊಳ್ಳುತ್ತೇವೆ. 1991ರಲ್ಲಿ ನಮ್ಮಲ್ಲಿ ಕಪ್ಪು ಹಲಗೆ ಯೋಜನೆಯೊಂದು ಜಾರಿಗೆ ಬಂತು. 6700 ಹೊಸ ಶಾಲೆಗಳನ್ನು ಇದರ ಕೆಳಗೆ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಅದರಲ್ಲಿ ಎಷ್ಟು ಪೂರ್ಣವಾಗಿದೆ ಎಂದು ಕೇಳಿದ

ಪ್ರಶ್ನೆಗೆ 1585 ಶಾಲೆಗಳು ಪೂರ್ಣವಾಗಿವೆ, ಉಳಿದವುಗಳು ಕೆಲಸ ನಡೆಯುತ್ತಿವೆ ಎಂದು ಹೇಳಿದರು. ಆಗ 6761 ಶಾಲೆಗಳು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರು ಆದರೆ,ಅದರಲ್ಲಿ 1585 ಶಾಲೆಗಳು ಪೂರ್ಣವಾಗಿವೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ಕೆಲಸವಾದರೂ ಪ್ರಾರಂಭವಾಗಿದ್ದರೆ ನನಗೆ ದುಃಖವಾಗುತ್ತಿರಲಿಲ್ಲ, ಶಿಕ್ಷಣ ಸಚಿವರು ಬಂದರೆ ನಾನು ನಿಜ ಪರಿಸ್ಥಿತಿಯನ್ನು ತೋರಿಸಿಕೊಡುತ್ತೇನೆ. ಇವೊತ್ತು ಸದನದಲ್ಲಿ ಕೇಳಿದರೆ ಮಾಡುತ್ತೇವೆ ಎಂದು ಹೇಳುತ್ತೀರಿ. ಕೇಂದ್ರ ಸರಕಾರದ ಸಹಾಯವನ್ನು ಪಡೆದು ಕೆಲಸವನ್ನು ಪೂರ್ತಿ ಮಾಡುತ್ತೇವೆ ಎಂದು ಹೇಳುತ್ತೀರಿ. ಅಲ್ಲಿ ಯಾವುದಾದರೂ ಕಟ್ಟಡವಾದರೂ ಇದೆಯೇ? ಕೇವಲ ಪಾಯ ತೆಗೆದು ಹಣ ತೆಗೆದುಕೊಂಡು ಹೋದವರು ಎಷ್ಟೋ ಜನರು ಇದ್ದಾರೆ. ಹೆಂಚುಗಳನ್ನು ಮಾರಿಕೊಂಡರವರು ಎಷ್ಟೋ ಜನರು ಇದ್ದಾರೆ. ಇವೊತ್ತು ಕಾಂಗ್ರೆಸ್‌ನವರು ಬರಬಹುದು, ನಾಳೆ ಇನ್ನೊಂದು ಸರಕಾರ ಬರಬಹುದು. ನಮ್ಮ ಹೆಸರು ಕೆಡಿಸಿ, ಅಧಿಕಾರವನ್ನು ಮಾಡಿ ಆ ಅಧಿಕಾರಿಗಳ ಮುಷ್ಟಿಯಲ್ಲಿ ಸಿಕ್ಕಿ, ಒದ್ದಾಡುತ್ತಿರುವ ಒಂದು ಪರಿಸ್ಥಿತಿಯು ಇವೊತ್ತೂ ಇದೆಯೇ ವಿನಹ ಇದನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಯಾರಿಗೆ ಬಿಡುವು ಇದೆ? ಎರಡು ವರ್ಷಗಳಿಂದ ಪರಸ್ಪರ ಕಚ್ಚಾಟ, ಬಡಿದಾಟದಲ್ಲಿ ತಲ್ಲಿನರಾಗಿರಬೇಕಾದರೆ, ಯಾರಿಗೆ ಈ ಬಗ್ಗೆ ಸಮಯ ಇದೆ? ಒಬ್ಬ ಉಪಮುಖ್ಯಮಂತ್ರಿಗಳಿಗೆ, ಒಬ್ಬ ಮಂತ್ರಿಗಳಿಗೆ, ಯಾವ ಕ್ಷಮಯದಲ್ಲಿ ಯಾರು ಕಾಲು ಎಳೆಯುತ್ತಾರೋ ಗೊತ್ತಿಲ್ಲ, ಪಕ್ಕದಲ್ಲಿ ಕುಳಿತಿರುವವನು ಯಾವಾಗ ಚೂರಿ ಹಾಕುತ್ತಾನೋ ಎನ್ನುವುದು ಗೊತ್ತಿರದೇ ಇರುವ ಪರಿಸ್ಥಿತಿ ಇಂಥ ಒಂದು ದೊಡ್ಡ ಪಕ್ಷಕ್ಕೆ ಬಂದಿದೆ ಅಂದರೆ, ಇಂಥ ದುಸ್ಥಿತಿಯಲ್ಲಿ ಅದು ಇದ್ದರೆ, ಇನ್ನು ಜನಸಾಮಾನ್ಯರ ಕಷ್ಟ ಪರಿಹಾರವನ್ನು ಮಾಡಲು, ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇವರಿಗೆ ಸಮಯ ಇದೆಯೆ?

ಈ ರೀತಿಯಾದ ರಾಜಕೀಯ ಅಸ್ಥಿರತೆ ಏನಿದೆ ಇದನ್ನು ಕೊನೆ ಮಾಡದಿದ್ದರೆ ಇದು ಶಾಲಾ ಕಟ್ಟಡಗಳ ಕಪ್ಪು ಹಲಗೆ ಯೋಜನೆಯಾಗುವುದಿಲ್ಲ. ಮಾನ್ಯ ಶಿಕ್ಷಣ ಸಚಿವರು, ಮಾನ್ಯ ಮುಖ್ಯಮಂತ್ರಿಗಳು, ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಈ ಶಾಲೆಗಳನ್ನು ಪೂರ್ಣ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ರೂಪಿಸಿದ್ದೀರಿ ಅದರ ಬಗ್ಗೆ ಸ್ಪಷ್ಟವಾದಂಥ ಒಂದು ಅಂಕಿಅಂಶಗಳನ್ನು ಕೊಡಬೇಕು. ಈ ಇಲಾಖೆಗೆ ಸಂಬಂಧಪಟ್ಟಂಥ ಅಕ್ಷಯ ಯೋಜನೆಗೆ ಕ್ಷಯ ಹಿಡಿದಿದೆ. 4–5 ತಿಂಗಳಿನಿಂದ ಬಡ ಮಕ್ಕಳಿಗೆ ಶೇಕಡ 80ರಷ್ಟು ಅಟೆಂಡ್‌ಡೆನ್ಸ್ ಇದ್ದರೆ ಅವರಿಗೆ ಒಂದು ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಕೊಟ್ಟಿಲ್ಲ. ಅದರ ಬಗ್ಗೆ ಸ್ಪಷ್ಟ ಮಾಹಿತಿ ಬೇಕು. ಅದಕ್ಕಾಗಿ ನಾನು ಪುನರಾವರ್ತನೆ ಮಾಡುತ್ತಿದ್ದೇನೆ. ನಿಮ್ಮ ಯೋಜನೆ ಕಾರ್ಯರೂಪಕ್ಕೆ ಬಂದಿದೆಯೋ ಇಲ್ಲವೋ ನಿಮಗೆ ಇದರ ಬಗ್ಗೆ ಕಳಕಳಿ ಇದೆಯೋ ಇಲ್ಲವೊ ಎಂಬುದನ್ನು ತಿಳಿಸಿ. ಮನೆಯಲ್ಲಿದ್ದವರಿಗೆ ಏನೇನೂ ಕೊಡುತ್ತೇವೆಂದು ಬಡಿದೆಬ್ಬಿಸಿದ್ದೀರಿ. ಮಾನ್ಯ ವೀರಪ್ಪಮೊಯಿಲಿಯವರು ಕುಳಿತಲ್ಲಿ ನಿಂತಲ್ಲಿ ಕುಡಿಯುವುದಕ್ಕೆ ನೀರು ಸಿಕ್ಕದೆ ಇದ್ದರೂ ಬಾರ್‌ಗಳನ್ನು ತೆಗೆದಿದ್ದಾರೆ. ಬಡ ಮಕ್ಕಳ ಕೈಗೆ ಉದ್ಯೋಗ ಕೊಡಲಿಲ್ಲ. ಬಾರ್‌ಗಳನ್ನು ತೆಗೆದು ಹೆಂಡ ಕುಡಿಯುವಂಥ ಅಭ್ಯಾಸ ಮಾಡಿಸಿದ್ದೀರಿ. ಯುವಕರಿಗೆ ಕುಡಿಯುವ ಅಭ್ಯಾಸ ಬೆಳೆಸಿದ್ದೀರಿ. ನಿರುದ್ಯೋಗಿ ಯುವಕರಿಗೆ ಬೇರೆ ಉದ್ಯೋಗ ಕೊಟ್ಟು ಗೌರವದಿಂದ ಬದುಕುವಂತಹ ಕಾರ್ಯಕ್ರಮ ಏನಾದರೂ ರೂಪಿಸುತ್ತೀರೇನು? ಅದರ ಬಗ್ಗೆ ಕಾರ್ಯಕ್ರಮವೇನಾದರೂ ಇದೆ ಏನು? ಕೇವಲ ಹೊಸ ಹೊಸ ಘೋಷಣೆಗಳನ್ನು ಮಾಡುವುದರಿಂದ ಯಾವುದೇ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಹರಿಜನ ಗಿರಿಜನರ ಅಭಿವೃದ್ಧಿ ಬಗ್ಗೆ ನೀವು ಮಾಡಿದ್ದು ಏನು? ವಿಶ್ವವಿದ್ಯಾನಿಲಯದಿಂದ ಹೊರಬಂದು ಎಸ್.ಸಿ., ಎಸ್.ಟಿ., ಮೆರಿಟ್ ಸ್ಟೂಡೆಂಟ್ಸ್‌ಗೆ ಉತ್ತಮವಾದ ಉದ್ಯೋಗವಕಾಶಗಳನ್ನು ಕೊಡುತ್ತೇನೆಂದು ಹೇಳಿದವರು ನೀವೇ ತಾನೆ, ಈಗ ನೀವು ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ? ಎಷ್ಟು ಜನರನ್ನು ಗೆಜೆಟೆಡ್ ಆಫೀಸರ್ ಮಾಡಿದ್ದೀರಿ? ಅವರ ಬಾಯಿಗೆ, ತುಟಿಗೆ ತುಪ್ಪ ಹಚ್ಚಿ

ನಿಮ್ಮನ್ನು ಉದ್ಧಾರ ಮಾಡುವ ರಕ್ಷಕರು ನಾವು ಎಂದು ಹೇಳಿಕೊಂಡು, ಅವರಿಗೆ ವಂಚನ ಮಾಡುವುದರಲ್ಲೀ ಯಶಸ್ವಿಯಾಗಿದ್ದೀರಿ. ಅವರಿಗೆ ಪ್ರಾಮಾಣಿಕವಾಗಿ ನ್ಯಾಯವನ್ನು ಒದಗಿಸುವಂಥ ಪ್ರಯತ್ನವನ್ನು ಇದುವರೆಗೂ ಮಾಡಿಲ್ಲ. ಡಾ।। ಅಂಬೇಡ್ಕರ್ ಭವನದ ಸ್ಥಿತಿ ಏನಾಗಿದೆ. ಇದನ್ನು ಯಾರಾದರೂ ಮಂತ್ರಿಮಂಡಲದ ಸಭೆಯಲ್ಲಿ ಕೇಳಿದ್ದೀರಾ ?

ಎಸ್.ಸಿ. ಜನಾಂಗದಿಂದ ಮಂತ್ರಿ ಸ್ಥಾನ ಸಿಕ್ಕ ಮೇಲೆ ಆ ಮಕ್ಕಳ ಅಭಿವೃದ್ಧಿ ಬಗ್ಗೆ ಎಂದಾದರೂ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಾ ? ಡಾ।। ಅಂಬೇಡ್ಕರ್ ಶತಾಬ್ದಿಯ ಸಂದರ್ಭದಲ್ಲಿ ಅವರ ಜ್ಞಾಪಕಾರ್ಥವಾಗಿ 100 ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇನ್ನು ಆ ಮನೆಗಳನ್ನು ಕಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು 20 ಮನೆಗಳು ಕಟ್ಟಿದ್ದೇವೆಂದು ಉತ್ತರ ಕೊಡುತ್ತಾರೆ. ಪ್ರತಿ ತಾಲ್ಲೂಕಿಗೆ 100 ಮನೆಗಳನ್ನು ಕೊಡಬೇಕಾಗಿತ್ತು. 175 ತಾಲ್ಲೂಕುಗಳಿಗೆ ತಲಾ ನೂರು ಮನೆಗಳು ಎಂದರೆ ಎಷ್ಟಾಗಬೇಕಾಗಿತ್ತು? ನಾವು ಫೆಬ್ರವರಿ ಎಂಡ್‌ನಲ್ಲಿ ಬಂದಿದ್ದೇವೆ. 20 ಮನೆಗಳನ್ನು ಕಟ್ಟಿದ್ದಾರೆ. ಹರಿಜನರ ಬಗ್ಗೆ ಬಡವರ ಬಗ್ಗೆ ಕಾರ್ಯಕ್ರಮಗಳು ಇವೆ ಏನು ? ಆಶ್ರಯ ಯೋಜನೆಯಲ್ಲಿ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿ ಕೊಡಿ ಎಂದು ನಾವು ಹೇಳಿದ್ದೇವೆ ನಿಮ್ಮ ಹತ್ತಿರ ಹಣ ಇಲ್ಲವೆಂದರೆ ಏಕೆ ಹೇಳಿದ್ದೀರಿ ? ಶಾಸಕರಾದ ನಮ್ಮನ್ನು ಕರೆದುಕೊಂಡು ಸಮಿತಿ ಮಾಡಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಸಾವಿರ ಜನರ ಬೆನಿಫಿಷಿಯರ್ ಪಟ್ಟಿ ಮಾಡಿದೆವು. ಇದನ್ನು ಜಿಲ್ಲಾ ಅಧಿಕಾರಿಗಳು ಕಳುಹಿಸಿ ವರ್ಷವಾಯಿತು. ಅವರು ಗುಡಿಸಲು ಕಿತ್ತುಕೊಂಡು ಮನೆಗಳು ಆಗುತ್ತದೆಂದು ಕಾಯುತ್ತಿದ್ದಾರೆ. ಈಗ 500 ಮನೆಗಳನ್ನು ಕೊಡಿ ಎಂದು ಹೇಳುತ್ತೀರಾ ಹೇಗೆ 500 ಮನೆಗಳ ಪಟ್ಟಿಯನ್ನು ಕೊಡುವುದು. ಒಂದು ಹೇಳಿದ ಮೇಲೆ ಅದನ್ನು ಪೂರ್ಣ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಇಲ್ಲದಿದ್ದರೆ ಈ ವರ್ಷ ದುಡ್ಡು ಇಲ್ಲ ಒಂದು ಮನೆಯನ್ನು ಕಟ್ಟುವುದಿಲ್ಲ, ಮ್ಯಾಗ್‌ಸಿಮಮ್ ಈ ವರ್ಷ ಸರ್ಕಾರ ಮನೆಗಳನ್ನು ಕಟ್ಟಿದೆ ಎಂದು ಹೇಳಬೇಕಾಗಿತ್ತು. ನಾವು ಶಿಕಾರಿಪುರ ತಾಲ್ಲೂಕಿನಲ್ಲಿ ಸಾವಿರ ಜನರ ಬೆನಿಫೀಸಿಯರ್ ಲಾಟರಿ ಎತ್ತಿ 500 ಜನರನ್ನು ತೆಗೆದುಕೊಟ್ಟ ನಮ್ಮ ಶಾಸಕರು ಅಧ್ಯಕ್ಷರು ನಮ್ಮ ತಾಲ್ಲೂಕು ಪಂಚಾಯಿತಿಯ ಸಮಿತಿಗಳಲ್ಲಿ ಆಶ್ರಯ ಯೋಜನೆಗೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಪ್ರತಿ ತಾಲ್ಲೂಕಿಗೆ ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದಾಗ ಬೆನಿಫೀಷಿಯರ್ ಪಟ್ಟಿ 2 ವರ್ಷಗಳದ್ದು ಕೊಟ್ಟೆವು. ಈ ವರ್ಷದ್ದು ಮತ್ತು ಹೋದ ವರ್ಷದ್ದು. ಮತ್ತೆ ಬಂಗಾರಪ್ಪನವರು ಒಂದು ಸುತ್ತೋಲೆಯನ್ನು ಅವರು ಅಧಿಕಾರವನ್ನು ಬಿಟ್ಟು ಕೊಡುವ ಕಾಲದಲ್ಲಿ ಕಳುಹಿಸಿದರು. ಈ ವರ್ಷದ್ದು, ಮುಂದಿನ ವರ್ಷದ್ದು, ಸಾವಿರ ಜನರ ಬೆನಿಫಿಸಿಯರ್ ಪಟ್ಟಿಯನ್ನು ತರಬೇಕೆಂದು ಹಳ್ಳಿಹಳ್ಳಿಗೂ ಹೋದೆವು. ಸಮಿತಿಯ ಸದಸ್ಯರು ಹೋದ ವರ್ಷದ್ದು ಸಾವಿರ ಜನರದ್ದು, ಈ ವರ್ಷದ ಸಾವಿರ ಜನರದ್ದು ಮನೆಗಳ ಪಟ್ಟಿಯನ್ನು ಕೊಟ್ಟರು. ಇದರಲ್ಲಿ ಅವರವರೇ ಕಮೀಷನ್ ವ್ಯಾಪಾರದಲ್ಲಿ ಅದನ್ನು ಹಂಚಿಕೊಂಡಿದ್ದಾರೆ. ಅದಕ್ಕೆ ನಾನು ಹೋಗುವುದಿಲ್ಲ, ಯಾರನ್ನೂ ಟೀಕೆ ಮಾಡುವುದಕ್ಕೆ ನಾನು ಇಚ್ಛಿಸುವುದಿಲ್ಲ. ಮುಖ್ಯಮಂತ್ರಿಗಳು 2 ಲಕ್ಷದ 35 ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಕೊಟ್ಟಿರುವಂಥದ್ದು 1,579 ಮನೆಗಳು ಮಾತ್ರ. ಅಕ್ಷಯ ಯೋಜನೆಯಲ್ಲಿ ಬೇಕು ಬೇಕಾದವರಿಗೆ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ ಬೇಕಾಗಿರುವವರಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಆ ಹಣವನ್ನು ಹಾಗೆ ಕೊಟ್ಟು ಹೀಗೆ ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ನಾಗರಾಜು ಎಂಬುವನು ಇದ್ದಾರೆ. ಅವನು ಹೇಳುತ್ತಾನೆ ಇವನಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾನೆ. ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:- ಅದು ಸಿ.ಬಿ.ಐ. ಅಲ್ಲ. ಸಿ.ಓ.ಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಿ.ಓ.ಡಿ ಹಾಗಾದರೆ ಅದು ಓ.ಓ.ಡಿ. ಆಗುತ್ತದೆ. ಅಕ್ಷಯ ಯೋಜನೆಯಲ್ಲಿ ಯಾರಿಗೆ ಅಡ್ವಾನ್ಸ್ ಕೊಟ್ಟಿದ್ದಾರೆ. ಅವರ ಅಡ್ರೆಸ್ ಸಹ ಸಿಗುತ್ತಿಲ್ಲ. ಕೆಲಸ ಮಾಡಿ ವರ್ಷಗಳಾದರೂ ಕಂಟ್ರಾಕ್ಟ್‌ರ್‌ಗಳಿಗೆ ದುಡ್ಡು ಸಿಗುತ್ತಿಲ್ಲ. ಮನೆಗಳನ್ನು ಕಟ್ಟುವುದಕ್ಕೆ ಮುಂಚೆಯೇ 26 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಶಸ್ತ್ರ ಚಿಕಿತ್ಸೆ ಮಾಡುತ್ತೇವೆ, ಮೇಜರ್ ಶಸ್ತ್ರಚಿಕಿತ್ಸೆ ಮಾಡುತ್ತೇವೆ ಎಂದು ಹೇಳಿ, ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಕೊನೆಗೂ ಅವರು ಒಂದನ್ನಾದರೂ ಮೆಚ್ಚಿಕೊಂಡು ಬಿಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿದೆ ಅವರೇ ಈ ಕಂಟ್ರಾಕ್ಟರ್‌ಗಳನ್ನು ಕರೆದರು, 15 ಸಾವಿರದಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲ. 20 ಸಾವಿರ ಬೇಕು ಎಂದು ಅರ್ಜಿಗಳನ್ನು ತರೆಸಿಕೊಂಡರು. ಎಂಥಹ ನಾಚಿಕೆಗೇಡಿನ ಸ್ಥಿತಿ, ಬೇಕು ಬೇಕಾದವರಿಗೆ ದುಡ್ಡು ಕೊಟ್ಟು ಆ ದುಡ್ಡನ್ನು ಹಿಂಬಾಗಿಲಿನಿಂದ ತೆಗೆದುಕೊಂಡರು. ನಮ್ಮ ಕೆ.ಎಸ್.ಆರ್.ಟಿ.ಸಿ. ಸಚಿವರು ಬರುತ್ತಿದ್ದಾರೆ, ಮಂತ್ರಿಗಳಾದ ತಕ್ಷಣ ಹೊಸ ಬಾಡಿಗೆ ಕಟ್ಟುವುದಕ್ಕೆ ವಾಸಿಗಳು ಬಂದ ತಕ್ಷಣ ಮುವತ್ತರಿಂದ ಮೂವತ್ತೈದು ಸಾವಿರಕ್ಕಿಂತ ಹೆಚ್ಚು ಟೆಂಡರ್ ಕರೆದು ಯಾರ್‍ಯಾರಿಗೆ ಒಳಗೆ ಕೊಟ್ಟು ಬಿಟ್ಟಿದ್ದಾರೆ, ಅದನ್ನು ರದ್ದು ಮಾಡಿದ್ದೇನೆ ಎಂದು ಹೇಳಿದರು. ಅದನ್ನು ರದ್ದು ಮಾಡಿದರೆ ಆಯಿತಾ ? ಜಾಸ್ತಿ ಕೊಟ್ಟಂತವರ ಕೈ ಕತ್ತರಿಸುತ್ತೀರಾ ? ಪನಿಷ್ ಮಾಡುತ್ತೀರೇನು. ಸ್ವಾಮಿ ರಾಜಕೀಯ ಅಪರಾಧಿಗಳಿಗೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಎಲ್ಲಿಯವರೆಗೆ ಶಿಕ್ಷೆ ಆಗುವುದಿಲ್ಲ ತಪ್ಪು ಯಾವನೇ ಮಾಡಿರಲಿ ಅವನ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುವಂತ ವ್ಯವಸ್ಥೆ ಎಲ್ಲಿಯವರೆಗೆ ಬರುವುದಿಲ್ಲ ಅಲ್ಲಿಯವರೆಗೆ ಚುನಾಯಿತ ಪ್ರತಿನಿಧಿಯೆಂದು ಹೇಳಿಕೊಂಡು ಜನರ ರಕ್ತ ಹೀರುವ ಪ್ರವೃತ್ತಿ ಏನು ಇದೆ. ಅದು ಮುಂದುವರೆದುಕೊಂಡು ಹೋಗುತ್ತದೆ. ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ, ದೊಡ್ಡ ದೊಡ್ಡ ಭಾಷಣ ಮಾಡುತ್ತೇವೆ. ಮಾತನಾಡುತ್ತೇವೆ, ಒಬ್ಬ ಮುಖ್ಯಮಂತ್ರಿಯನ್ನು ಮಾಡಿದರೆ ಅವನ ಕಾಲು ಎಳೆಯುವ ಪ್ರಯತ್ನ ಮಾಡುತ್ತೇವೆ. ಇದ್ದಾಗ ಒಂದು ತರಹ ಬಿಟ್ಟಾಗ ಒಂದು ತರಹ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಿಮಗೆ ಏನಾಗಿದೆ ಎಂದರೆ ನೀವು ಯಾವಾಗಲೂ ವಿರೋಧಪಕ್ಷದಲ್ಲಿ ಇದ್ದೀರ ನೋಡಿ ನಿಮಗೆ ಆಡಳಿತ ಪಕ್ಷದ್ದು ಗೊತ್ತಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದು ನಿಜ. ನಮಗೆ ಗೊತ್ತಾಗುವುದೂ ಬೇಡ. ನಿಮ್ಮ ಪರಿಸ್ಥಿತಿ ನೀವು ಹೇಳುತ್ತೀರ. ಸತ್ಯ ಹೇಳಿದರೆ ನಾನು ಯಾಕೆ ಬೇಸರ ಮಾಡಿಕೊಳ್ಳಲಿ. ಆದರೆ ಸಿಂಧ್ಯರವರೇ, ಆ ಕಡೆ ಇರುವ ಉಪ ಮುಖ್ಯಮಂತ್ರಿಗಳು ಮರೆಯಬಾರದು. ಕರ್ನಾಟಕದಲ್ಲಿ 3ನೇ ಮುಖ್ಯಮಂತ್ರಿಗಳು ಅವರು. ಯಾವುದಾದರೂ ಒಂದು ರಾಜ್ಯದಲ್ಲಿ ಒಬ್ಬ ಮುಖ್ಯಮಂತ್ರಿ 5 ವರ್ಷ ಇದ್ದವರನ್ನು ಹೇಳುತ್ತೀರಾ ? ನಾವು ನಾಲ್ಕು ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದೇವು. ಮಂತ್ರಿಗಿರಿಗೆ ಕಚ್ಚಾಡಿದ್ದು ನೋಡಿದ್ದೀರ ? ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಿದ್ದು ನೋಡಿದ್ದೀರ ? ಸ್ವಾಮಿ ಎಲ್ಲಿಯವರೆಗೆ ಒಬ್ಬ ಮುಖ್ಯಮಂತ್ರಿ ಸ್ವತಂತ್ರವಾಗಿ 4–5 ವರ್ಷ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಬದಲಾವಣೆ ಆಗಬಾರದೆಂದು ನಾನು ಹೇಳುವುದಿಲ್ಲ ಒಂದು ವ್ಯವಸ್ಥೆ ಇದ್ದರೆ ಬೇಡ ಎಂದು ಹೇಳುವುದಿಲ್ಲ. ಆದರೆ ಅಪರಾಧ ಮಾಡಿದ ಎಂದು ಅವರನ್ನು ಬದಲಾಯಿಸಿ ಇನ್ನೊಬ್ಬರನ್ನು ತರುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿದೆ. ಇದೊಂದೇ ಅಲ್ಲ ಸ್ವಾಮಿ, ಒರಿಸ್ಸಾದಲ್ಲಿ ಮುಖ್ಯಮಂತ್ರಿ ಜೊತೆಗೆ ಕಾಂಗ್ರೆಸ್ ಅಧ್ಯಕ್ಷರ ಬಡಿದಾಟ ಪ್ರಾರಂಭವಾಯಿತು. ಮಹಾರಾಷ್ಟ್ರದಲ್ಲಿ ವಸಂತ್‌ದಾದಾ ಪಾಟೀಲ್, ಶರದ್ ಪವಾರ್, ಸುಧಾಕರ್ ನಾಯಕ್ ಆಯಿತು. ಈಗ ಇರುವವರು ರಾಜೀನಾಮೆ ಕೊಟ್ಟು ಆಯಿತು. ಇನ್ನು ಯಾರು ಬರುತ್ತಾರೋ, ಯಾರು ಹೋಗುತ್ತಾರೋ ಗೊತ್ತಿಲ್ಲ. ಆಂಧ್ರದಲ್ಲಿ ಚೆನ್ನಾರೆಡ್ಡಿ

ಆಯಿತು. ಜನಾರ್ಧನ ರೆಡ್ಡಿ ಆಯಿತು ವಿಜಯ ಭಾಸ್ಕರ ರೆಡ್ಡಿ ಬಂದಿದ್ದಾರೆ. ಇನ್ನು ಯಾರು ಬರುತ್ತಾರೋ ಗೊತ್ತಿಲ್ಲ. ಗುಜರಾತ್‌ನಲ್ಲಿ ಜನತಾ ದಳದ ನಮ್ಮ ಸ್ನೇಹಿತರು ಮುಖ್ಯಮಂತ್ರಿಗಳಾಗಿದ್ದರು. ಸಿಂಧ್ಯಾರವರೇ, ಚಿಮನ್‌ಬಾಯಿ ಪಾಟೀಲ್ ಕಾಂಗ್ರೆಸ್‌ನಲ್ಲಿ ಇದ್ದರು. ಇಲ್ಲಿ ಬಂದರು ಮುಖ್ಯಮಂತ್ರಿ ಆದರು ಅವರನ್ನು ಕಾಂಗ್ರೆಸ್‌ಗೆ ಹೊತ್ತುಕೊಂಡು ಹೋಗಿ ಬಿಟ್ಟರು ನಿಮ್ಮವರು. ಆ ಪರಿಸ್ಥಿತಿ ಅಲ್ಲಿದೆ ಸ್ವಾಮಿ. ಭಾರತೀಯ ಜನತಾ ಪಾರ್ಟಿಯ ಬಗ್ಗೆ ಟೀಕೆ ಮಾಡುತ್ತಿರಲ್ಲ. ನಮ್ಮ ನೀತಿ ಸಿದ್ದಾಂಥಗಳ ಬಗ್ಗೆ ಕೇಳುತ್ತೀರಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ನಾವೇನು ಸತ್ಯ ಹರಿಶ್ಚಂದ್ರರು ಎಂದು ಹೇಳುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಒಪ್ಪಿಕೊಳ್ಳುತ್ತೇನೆ. ಚಿಮಣ್‌ಬಾಯಿ ನಮ್ಮ ಪಕ್ಷದಲ್ಲಿದ್ದರು. ಮತ್ತೊಂದು ಪಕ್ಷ ಮಾಡಿದರು ಮತ್ತು ಕಾಂಗ್ರೆಸ್‌ನಲ್ಲಿ ಸೇರಿದರು ನಾನು ನಿಮಗೆ ಕೇಳುತ್ತೇನೆ. ಉತ್ತರ ಪ್ರದೇಶದಲ್ಲಿ ನಿಮ್ಮ ಸರ್ಕಾರ ಇತ್ತು. ಮಧ್ಯಪ್ರದೇಶದಲ್ಲಿ ಇತ್ತು. ಈ ಎರಡು ರಾಜ್ಯದಲ್ಲಿ ನಿಮ್ಮ ಪಕ್ಷದಲ್ಲಿ ಕಚ್ಚಾಟ ಇರಲಿಲ್ಲವೆ, ಅಧಿಕಾರದ ಸಲುವಾಗಿ ಗಲಾಟೆ ಆಗಿಲ್ಲವೆ, ಮುಖ್ಯಮಂತ್ರಿಗಳ ಮೇಲೆ ನಿಮ್ಮ ಶಾಸಕರು ಅಪಾದನೆ ಮಾಡಲಿಲ್ಲವೆ, ಏಕೆ ಮಾಡಲಿಲ್ಲ? ಅವರು ಅಧಿಕಾರದ ಸಲುವಾಗಿ ಮಾಡಿದರು. ಹಾಗಾಗಿ ನೀವು ಈ ಮಾತನ್ನು ಹೇಳುವುದಕ್ಕೆ ಹೋಗಬೇಡಿ ನಿಮ್ಮವರು, ನಿಮ್ಮವರು ಎಂದು, ಮೊದಲಿಗೆ ನಿಮ್ಮ ಮನೆ ಸರಿಪಡಿಸಿಕೊಳ್ಳಿ, ನಿಮ್ಮ ಮನೆ ಸರಿಪಡಿಸಿಕೊಂಡು ನಮ್ಮ ಮನೆಯಲ್ಲಿ ಇಂಥ ಯಾವುದೇ ಗಲಾಟೆ ಇಲ್ಲವೆಂದು ಹೇಳಿ, ಹಾಗಾಗಿ ಯು.ಪಿ.ನಲ್ಲಿ ಏನಾಯಿತು, ನಿಮ್ಮ ಮುಖ್ಯಮಂತ್ರಿಗಳು ಏಕೆ ಚಾರ್ಜಸ್ ಮಾಡಿದರು. ರಾಜಾಸ್ಥಾನದಲ್ಲಿ ಎಷ್ಟು ಜನರನ್ನು ಸೇರಿಸಿಕೊಂಡಿರಿ? ಮೊನ್ನೆ ಅಸೆಂಬ್ಲಿ ಡಿಸಾಲ್ವ್ ಆದ ನಂತರ ಕೆಲವು ಕಾಂಗ್ರೆಸ್ ಜನತಾದಳ ಏಕೆ ಜನರನ್ನು ಸೇರಿಸಿಕೊಂಡಿರಲ್ಲ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ದೇಶದಲ್ಲಿ ಪ್ರಾಥಮಿಕವಾಗಿ ರಾಜಕೀಯ ಮಾಡಿ ಜನಹಿತ ಮಾಡತಕ್ಕಂತಹ ಕಳಕಳಿ ಇರುವಂತಹ ವ್ಯಕ್ತಿಗಳು ಆ ಕಡೆಗೆ ಯಾರು ಇದ್ದಾರೆ, ಈ ಕಡೆಗೆ ಯಾರು ಇದ್ದಾರೆ ಅವರು ಭಾರತೀಯ ಜನತಾ ಪಕ್ಷಕ್ಕೆ ಬರಲೇಬೇಕು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನೀವು ಹೇಳುವುದರಲ್ಲಿ ಸತ್ಯ ಇದೆ. ಇವೊತ್ತು ಭಾರತೀಯ ಜನತಾ ಪಕ್ಷ ಉತ್ತಮವಾಗಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ದೇಶಪಾಂಡೆಯುವರಿಗೆ ಸಮಾಧಾನವಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ:- ರಾಜ್ಯಪಾಲರ ಭಾಷಣದ ವಿಷಯದ ಮೇಲೆ ಮಾತನಾಡದೆ, ಬರೀ ರಾಜಕೀಯ ಭಾಷಣ ಮಾಡುತ್ತಾ ಹೋದರೆ ನಮಗೆ ಅವಕಾಶ ಸಿಗುತ್ತದೆಯೋ ಇಲ್ಲವೋ, ನಿನ್ನೆ ಪ್ರಾರಂಭವಾಗಿದ್ದುದು ಇನ್ನೂ ಮುಗಿದಿಲ್ಲ. ಆದ್ದರಿಂದ ತಾವು ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ, ನಮಗೂ ಮಾತನಾಡುವುದಕ್ಕೆ ಒಂದಿಷ್ಟು ಅವಕಾಶ ಸಿಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ ಆಯಿತು ಬೇಗ ಮುಗಿಸುತ್ತೇನೆ. ಕೊನೆಯದಾಗಿ ಇನ್ನು ನಾಲ್ಕೈದು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇಶಪಾಂಡೆಯವರೇ ನೀವು ಹೇಳಿರುವುದು ನಿಜ. 45 ವರ್ಷಗಳಲ್ಲಿ ರಾಜಕಾರಣಿಗಳು ಎಷ್ಟು ಕುಲಗೆಡಿಸಿಬಿಟ್ಟಿದ್ದಾರೆಂದರೆ, ಅವನು ಎಲ್ಲಿ ಬಂದರೂ ಕುರ್ಚಿಗೋಸ್ಕರ ಬಡಿದಾಡುವಂತಹ ಒಂದು ವಿಚಿತ್ರವಾದಂತಹ ಪರಿಸ್ಥಿತಿಗೆ ತಂದಿರುವಂತಹ ಶ್ರೇಯಸ್ಸು ನಿಮ್ಮಿಬ್ಬರಿಗೆ ಹೋಗಬೇಕಾಗಿದೆ.

(ಗೊಂದಲ)

ನಮ್ಮಲ್ಲಿಯೂ ಗಲಾಟೆ ಇದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ ನಮ್ಮಲ್ಲಿ ಆ ಗಲಾಟೆಯನ್ನು ಜೀರ್ಣ ಮಾಡಿಕೊಳ್ಳುವಂತಹ ಶಕ್ತಿ ಇದೆ ಎಂಬುದನ್ನು ತಾವು ಒಪ್ಪುತ್ತೀರೇನು?

ಮುಖ್ಯಮಂತ್ರಿಗಳ ಜೊತೆಗೆ ಎಳೆದಾಡಿದರು ಎಂದು ಹೇಳಿದಿರಿ, ನಾನು ಇಲ್ಲ ಅಂತ ಹೇಳುವುದಿಲ್ಲ, ಮುಂದೆ ಬರುವುದಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಕೊನೆಯ ಪಕ್ಷ ನಾವು ಮೇಜರ್ ಸರ್ಜರಿ ಮಾಡುತ್ತೇವೆ ಎಂದು ಹೇಳಿದರು ವೀರಪ್ಪ ಮೊಯಿಲಿಯವರು, ಅವರ ಕೈಯಲ್ಲಿ ಏನಾಗುತ್ತದೆ ನಾವು ಮಾಡಿರುವುದು. ಸಂದರ್ಭ ಬಂದಾಗ ಅವನು ಎಷ್ಟೇ ದೊಡ್ಡವನಿರಬಹುದು. ಸಂಘಟನೆ ಮುಖ್ಯ, ತತ್ವ, ನೀತಿ, ಸಿದ್ಧಾಂತಗಳನ್ನು ಒಪ್ಪಿಕೊಳ್ಳದೇ ಕುರ್ಚಿಗಾಗಿ ಹೊಡೆದಾಡುವಂತಹ ವ್ಯಕ್ತಿ ಅವನು ಎಷ್ಟೇ ದೊಡ್ಡವನಿದ್ದರೂ ಸಹ ಇನ್ನು 5 ವರ್ಷ ಹಿಂದೆ ಹೋದರೂ ಪರವಾಗಿಲ್ಲ ಅವನು ಅದನ್ನು ಟಾಲರೇಟ್ ಮಾಡುವಂತಹ ಪ್ರಯತ್ನ ಮಾಡುತ್ತಿಲ್ಲ. ಅವರಲ್ಲೂ ಇರಬಹುದು ವಿಶೇಷವಾಗಿ, ನಾನು ಬಿಜೆಪಿಯವರು ಸತ್ಯಹರಿಶ್ಚಂದ್ರರು ಎಂದು, ಸತ್ಯವಾಗಿ ಈ ಮಾತನ್ನು ಹೇಳುತ್ತಿಲ್ಲ. ನಮ್ಮಲ್ಲೂ ಅನೇಕ ಕೊರತೆಗಳಿವೆ. ಇವೊತ್ತಿನ ಅಗತ್ಯಕ್ಕೆ ತಕ್ಕಂತೆ ಸರಿಪಡಿಸಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನ ನಾವೆಲ್ಲರೂ ಮಾಡಬೇಕಾಗುತ್ತದೆ. ಏನು ತಪ್ಪಿಲ್ಲ, ನಾವು ತಪ್ಪೇ ಮಾಡಿಲ್ಲ ಎನ್ನುವ ಈ ಮಾತನ್ನು ಎಂದೂ ಹೇಳಿಲ್ಲ, ಹೇಳುವುದಿಲ್ಲ, ಹೇಳುವುದಕ್ಕೆ ಸಾಧ್ಯವಿಲ್ಲ. ಇಷ್ಟು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಈ ಕಾಂಗ್ರೆಸ್ ಪಕ್ಷಕ್ಕೆ ಒಂದು ಆರ್ಥಿಕ ನೀತಿ 45 ವರ್ಷಗಳಲ್ಲಿ ಇಲ್ಲ ಎಂದು ಕಾಣುತ್ತದೆ. ಕೇವಲ ಒಂದು ಪ್ರಯೋಗ ಮಾಡಿಕೊಂಡು ಇವೊತ್ತು ಒಂದು ರೀತಿಯಿಂದ ದೇಶವನ್ನು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಸುವಂಥ ಪ್ರಯತ್ನ ಮಾಡಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಈ ವಿದೇಶಿ ಬಟ್ಟೆಗಳನ್ನು ಸುಟ್ಟು ಹಾಕುವುದರ ಮೂಲಕ ಈ ಸ್ವದೇಶಿ ವಿಚಾರಕ್ಕೆ ಹೆಚ್ಚು ಮಹತ್ವ ಕೊಟ್ಟರು, ಖಾದಿಗೆ ಪ್ರಾಮುಖ್ಯತೆಯನ್ನು ಕೊಟ್ಟರು. ಆದರೆ ನೀವು ಸಮಾಜವಾದದ ಹೆಸರಿನಲ್ಲಿ ನಡೆದುಕೊಂಡು ಬಂದ ರೀತಿ ಏನು ? ಏನಾದರೂ ಸ್ಪಷ್ಟವಾದಂತಹ, ಯಾವುದಾದರೊಂದು ಚಿತ್ರ ಇದೆಯೇ ನಿಮಗೆ ? ಸಾರ್ವಜನಿಕ ಉದ್ಯಮಗಳ ಬಗ್ಗೆ ಖಾಸಗೀಕರಣ ಮಾಡಬೇಕು ಅಥವಾ ರಾಷ್ಟ್ರೀಕರಣ ಮಾಡಿರುವುದು ಮುಂದುವರಿಯಬೇಕೋ ? ಎನ್ನುವ ದ್ವಂದ್ವದಲ್ಲಿದ್ದೀರಿ. ಈಗ ಲಿಬರಲೈಸೇಶನ್ ಪಾಲಿಸಿ ಇದೆ, ಅದು ಏನು ಎಂದು ಗೊತ್ತಿಲ್ಲ, ಸ್ಪಷ್ಟವಾಗಿಲ್ಲ, ನಿಮಗೆ ಒಂದು ಉದಾಹರಣೆ ಕೊಡುತ್ತೇನೆ. ಕೆ.ಎಸ್.ಆರ್.ಟಿ.ಸಿ.ಯ ನಿಮ್ಮ ಸಚಿವರು ಇಲ್ಲಿದ್ದಾರೆ. ಸ್ವಾಮಿ ಪ್ರೈವೆಟ್‌ಓನರ್ಸ್ ನಮ್ಮ ಮಕ್ಕಳು ಮರಿಯ ಮದುವೆ, ಮುಂಜಿಗಳಿಗೆ ಅವರು ಬಸ್ಸುಗಳನ್ನು ಕಳುಹಿಸುತ್ತಿದ್ದರು. ಅದನ್ನು ರದ್ದು ಮಾಡಿದ್ದೀರಿ. ಪ್ರವಾಸಿಗರಿಗೆ ತೊಂದರೆ ಮಾಡಿದ್ದೀರಿ. ನಿಮಗೆ ಬಸ್ ಕೊಡುವಂತಹ ಶಕ್ತಿ ಇಲ್ಲ. ಆ ವ್ಯವಸ್ಥೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಅದನ್ನ ನಮಗೆ ಬೇಕು ಎಂದು ವಹಿಸಿಕೊಂಡಿದ್ದೀರಿ, ಈಗ ಅದರಲ್ಲಿ ವಿಫಲರಾಗುತ್ತಾ ಇದ್ದೀರಿ. ಈಗ ಮತ್ತೇ ಸಾರ್ವಜನಿಕರಿಗೆ ಮತ್ತು ಪ್ರೈವೆಟ್ ಓನರ್ಸ್‌ರವರಿಗೆ ಕೊಡಬೇಕು ಎಂದು ತಾವು ಯೋಚನೆ ಮಾಡುತ್ತಾ ಇದ್ದೀರಿ ಅಂದರೆ ನೀವು ಏನು ಮಾಡುತ್ತ ಇದ್ದೀರಿ ಅದು ಸರಿಯೋ, ತಪ್ಪೋ ಎಂಬು ತೀರ್ಮಾನ ಮಾಡುವುದಕ್ಕೆ 45 ವರ್ಷವಾಯಿತು. ಇನ್ನೂ ಸ್ಪಷ್ಟವಾಗಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:-- ಮಾನ್ಯ ಅಧ್ಯಕ್ಷರೇ ನಮ್ಮ ದೇಶದಲ್ಲಿ ಮತ್ತು ವೆಸ್ಟರ್ನ್ ದೇಶದಲ್ಲಿ ವ್ಯತ್ಯಾಸ ಏನೆಂದರೆ ನಾವು ಮೊದಲು ಮಾಡುತ್ತೇವೆಂದು ಹೇಳುತ್ತೇವೆ, ಇನ್ನು ವಿಚಾರ ಮಾಡುತ್ತ ಇರುತ್ತೇವೆ. ಅವರು ವಿಚಾರ ಮಾಡಿ ಮಾಡುತ್ತಾರೆ ಅವರು 10 ವರ್ಷದ ನಂತರ ಏನಾಗುತ್ತದೆಂದು ವಿಚಾರ ಮಾಡಿಕೊಂಡು ಮಾಡುತ್ತಾರೆ. ಇದು ನಮ್ಮದೂ ನಿಮ್ಮದೂ ಗತಿಯಲ್ಲ ಇಡೀ ದೇಶದ ಗತಿ.

ಶ್ರೀ ಬಿ.ಎಸ್. ಯಡಿಯೂರಪ್ಪ:-- ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಗ್ರಾಮಗಳಿಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು ಸೆಲ್ಫ್ ಸಫಿಸಿಯಂಟ್ ಮಾಡಿ, ಅಗ್ರೋ ಬೇಸ್ಡ್ ಇಂಡಸ್ಟ್ರೀಗೆ ವಿಶೇಷವಾದಂತಹ ಮಹತ್ವವನ್ನು ಕೊಟ್ಟು ಆ ಗ್ರಾಮೀಣ ಜನರು ನಗರಗಳಿಗೆ ವಲಸೆ ಬರದ ಹಾಗೆ ವಿಶೇಷವಾದ ಮಹಾತ್ಮಾ ಗಾಂಧೀಜಿಯವರ ಮಾತೇನಿದೆ ಆ ಕಡೆ ವಿಶೇಷ ಗಮನ ಕೊಟ್ಟು ಮಾಡುವುದಕ್ಕೆ ಪ್ರಾರಂಭ ಮಾಡಿ ಎಂದ ಹೇಳುತ್ತಿದ್ದೇನೆ. ಈ 45 ವರ್ಷಗಳಲ್ಲಿ ಅದನ್ನು ಮಾಡಿಲ್ಲ,

ಅದು ತಪ್ಪಾಯಿತ್ತು, ಬರೇ ಅದನ್ನೇ ಕೂಗುವುದರಿಂದ ಏನೂ ಚರ್ಚೆಯಾಗುವುದಿಲ್ಲ. ಅದು ತಪ್ಪು ಎಂದು ಗೊತ್ತಾದ ಮೇಲೆ ತಾವು ಇದರ ಕಡೆಗೆ ಒಂದು ವಿಶೇಷವಾದ ಗಮನ ಕೊಡಬೇಕೆಂದು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಲೂಟಿ ನಡೆಯುತ್ತ ಇದೆ., ಜನರು ಕೊಟ್ಟಂತಹ ತೆರಿಗೆಯಲ್ಲಿ ಸಾವಿರಾರು ಕೋಟಿ ತಾವು ಹಾಕಿದರೆ ಎಷ್ಟು ಲಾಭದಾಯಕವಾಗಿ ನಡೆಯುತ್ತಿವೆ. ಅಲ್ಲಿ ಸರಿಯಾಗಿ ನೋಡಿ ಕೊಳ್ಳುವುದಕ್ಕೆ ಆಗಿದೆಯೇ ? ಮೈಸೂರು ಸ್ಯಾಂಡಲ್ಸ್ ಸೋಪು ನಾವು ತಯಾರು ಮಾಡುತ್ತೇವೆ, ಎಷ್ಟೊಂದು ಡಿಮ್ಯಾಂಡ್ ಇದೆ ಎಂದರೆ ಕೋಟ್ಯಾಂತರ ರೂಪಾಯಿ ಲಾಸ್ ಆಗುತ್ತಿದೆ. ಎನ್‌ಜಿಎಫ್ ಯಾವಾಗ ಮಾರುತ್ತೇವೆಯೋ ಗೊತ್ತಿಲ್ಲ. ಭದ್ರಾವತಿ ಪ್ಯಾಕ್ಟರಿಯನ್ನು ಕೊಟ್ಟಾಯಿತು.

ನಿಮಗೆ ಕಳಕಳಿ ಇಲ್ಲದೆ ಇರುವುದರಿಂದ ಅದನ್ನು ಸೂಪರ್‌ವಿಷನ್ ಮಾಡುವ ಕಡೆಗೆ ವಿಶೇಷ ಗಮನ ಕೊಡದೆ ಇರುವುದರಿಂದ ಇವೊತ್ತು ಎಲ್ಲಾ ಕಡೆ ಸರ್ವನಾಶದ ಕಡೆಗೆ ಹೋಗುತ್ತಾ ಇದೆ. ಆದ್ದರಿಂದ ಆ ಕಡೆಗೆ ತಾವು ವಿಶೇಷವಾದ ಗಮನ ಕೊಟ್ಟು ಇನ್ನೂ ಈ ದುಸ್ಥಿತಿ ಮುಂದುವರಿಯದಂತೆ ತಾವು ನೋಡಿಕೊಳ್ಳಬೇಕು. ನಮ್ಮ ವಿದ್ಯುಚ್ಛಕ್ತಿ ಇಲಾಖೆಯನ್ನು ಹಿರಿಯ ಸಚಿವರು, ಉಪ ಮುಖ್ಯಮಂತ್ರಿಗಳು ವಹಿಸಿಕೊಂಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ತಾವು ಹೇಳಿದ್ದೀರಿ. ರಾಜ್ಯ ವಿದ್ಯುತ್ ವಿಚಾರದಲ್ಲಿ ಯುದ್ಧದೋಪಾದಿಯಲ್ಲಿ ವಿಶೇಷವಾದ ಗಮನ ಕೊಡುವುದೇ ಪ್ರಯತ್ನ ಮಾಡುತ್ತಿದ್ದೇವೆಂದು. 4 ವರ್ಷದ ನಿಮ್ಮ ಭಾಷಣದಲ್ಲಿ ಹೇಳಿದ್ದೇನು ? ಇದರಲ್ಲಿ ಖಾಸಗಿಯವರ ಸಹಭಾಗಿತ್ವದ ಮಾತು ಹೇಳಿದರು. ಮಿನಿ ಹೈಡೆಲ್ ಸ್ಕೀಮ್‌ಗಳನ್ನು ತಕ್ಷಣ ಅನುಷ್ಠಾನ ತರುವುದಾಗಿ ಹೇಳಿದ್ದಾರೆ. ಥರ್ಮಲ್ ಸ್ಕೀಮ್‌ಗಳನ್ನು ಖಾಸಗಿಯವರಿಗೆ ವಹಿಸಿಕೊಡುವುದನ್ನೂ ಹೇಳಿದ್ದೀರಿ. ತಮಗೆ ಜ್ಞಾಪಕ ಇದೆಯೇ ? ಬೊರೊಕಾದವರು 9ಮೆಗಾವ್ಯಾಟಿನ ಒಂದು ಥರ್ಮಲ್ ಪ್ಲಾಂಟ್ ಮಾಡಿದರು. ಅವರಿಗೆ ಯಾವ ಸ್ಥಿತಿ ಬಂತು ? ಹೊರಗಡೆಯವರು ನಿಮ್ಮ ಸರ್ಕಾರ ನಂಬಿ ಹೇಗೆ ಮಾಡುತ್ತಾರೆ ? ಈ ವಿದ್ಯುತ್‌ಗೆ ಲಿಂಕ್ ಮಾಡಿಕೊಡಿ ಎಂದು ವಿನಂತಿ ಮಾಡುವುದಕ್ಕೆ ಪ್ರಧಾನಿಯವರಿಂದ ಲೆಟರ್ ತರಬೇಕಾಯಿತು. ಕಮಿಷನ್ ವ್ಯವಹಾರ ಏಕೆ ತೆಗೆಸಿಕೊಡಿ. ರಿಕಾರ್ಡ್ಸ್ ಎಷ್ಟು ಡಿಲೆ ಮಾಡಿದಿರಿ ? ಒಳವ್ಯವಹಾರ ಕುದುರಲಿಲ್ಲ ಎಂದು ಅನುಮತಿ ಕೊಡಲಿಲ್ಲ. ಈಗ ವೀರಪ್ಪ ಮೊಯ್ಲಿಯವರು ಬಂದ ಮೇಲೆ ಅದು ಒಪ್ಪಿಗೆಯಾಗಿ ಅನುಷ್ಠಾನಕ್ಕೆ ಬಂದಿರುವುದು ನನಗೆ ಗೊತ್ತಿದೆ. ಆದರೆ ಯಾವ ರೀತಿ ಡಿಲೇ ಆಯಿತು, ಈ ಪರಿಸ್ಥಿತಿ ಇದ್ದರೆ ಹೊರಗಡೆಯವರು ಬರುತ್ತಾರೆಯೇ, ಇನ್‌ವೆಸ್ಟ್ ಮಾಡುತ್ತಾರೇ ? ನಮಗೆಷ್ಟು ಲಾಭ ಆಗುತ್ತದೆ ಎನ್ನುವ ಚಿಂತೆಯೇ ಹೊರತು, ಹೊರಗಿನಿಂದ ಬರುವವರಿಗೆ ಆದ್ಯತೆ ಕೊಡಬೇಕೆನ್ನುವ ಕಳಕಳಿ ಸರ್ಕಾರದಲ್ಲಿರಲಿಲ್ಲ, ಇದನ್ನು ಸರಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅಧ್ಯಕ್ಷರೇ , ತಮಗೆ ಗೊತ್ತಿದೆ, ಪೆಸ್ಟಿಸೈಡ್ಸ್ ಸರಿ ಇಲ್ಲದೆ ಗುಲ್ಬರ್ಗದಲ್ಲಿ ತೊಗರಿಬೇಳೆ ಸಂಪೂರ್ಣ ನಾಶವಾಯಿತು. ಅವರಿಗೆ ನೆರವು ಕೊಡುತ್ತೇವೆ ಎಂದು ಹೇಳಿದ್ದಿರಿ ಆದರೆ ಇದುವರೆಗೆ ಒಂದು ಪೈಸೆ ಅವರಿಗೆ ಕೊಟ್ಟಿಲ್ಲ, ಆ ಕಡೆ ವಿಶೇಷವಾದ ಪ್ರಯತ್ನ ಮಾಡಬೇಕು. ನೂರು ದಿವಸಗಳ ಆಡಳಿತದ ಹೊಸ ಪುಸ್ತಕ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಾದಾಗ ಮೊಯ್ಲಿಯವರಿಗೆ ಏನೋ ಮಾಡಿಬಿಡ್ತೇನೆ ಎನ್ನುವ ಕಳಕಳಿ, ಏನೋ ಒಂದು ರೀತಿಯ ಭ್ರಮೆ ವೀರಪ್ಪ ಮೊಯ್ಲಿಯವರನ್ನು ಕೇಳುತ್ತೇನೆ, ನೂರು ದಿವಸವಾದ ಮೇಲೆ ರಾಮಾಯಣ ಮಹಾಭಾರತ ಭಗವದ್ಗೀತೆ ಹೇಳಿದ್ದಾರೆ, ಕರ್ನಾಟಕದಲ್ಲಿ ಯಾವುದೇ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದೆ ಇರುವುದಿಲ್ಲ, ಎಲ್ಲಾ ಭರ್ತಿ ಮಾಡುತ್ತೇವೆ. ಮಾಡಿ ಸಂತೋಷ ಪಡುತ್ತೇವೆ, ಮತ್ತೆ ಅಧಿಕಾರಕ್ಕೆ ಬನ್ನಿ. ನಮಗೇನು ಚಿಂತೆ ಇಲ್ಲ. ಆದರೆ ಆ ಕಳಕಳಿ ಇದೆಯೇನು ? ಶಿಕಾರಿಪುರದಿಂದ ನಾನು ಬಂದವನು. ಜೂನಿಯರ್ ಕಾಲೇಜಿಗೆ ಕಳೆದ ಆರೇಳು ತಿಂಗಳಿಂದ ಪಿಸಿಎಂಬಿಗೆ ಮೇಷ್ಟ್ರಿಲ್ಲ ನೂರು ಬಾರಿ ಅಧಿಕಾರಿಗಳಿಗೆ ಹೇಳಿದ್ದೇನೆ. ಪರೀಕ್ಷೆ ಹತ್ತಿರ ಬಂತು, ಆಸ್ಪತ್ರೆಯಲ್ಲಿ ಡಾಕ್ಟರಿಲ್ಲ, ಔಷಧಿ ಇಲ್ಲ. ಗ್ರಾಮೀಣ ಜನರ ಬಗ್ಗೆ ಇದು ನಿಮ್ಮ

ಕಳಕಳಿ. ದಯ ಮಾಡಿ ಈ ಪರಿಸ್ಥಿತಿಯನ್ನು ಸುಧಾರಿಸಲು ತಾವು ಪ್ರಾಮಾಣಿಕ ಪ್ರಯತ್ನ ತಾವು ಮಾಡಬೇಕು. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಬಗ್ಗೆ, ಬಹಳ ಕೆಲಸ ಮಾಡುತ್ತೇವೆಂದು ಹೇಳಿಕೊಂಡು ಬಂದಿರಿ. ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ನಾನು ಅದರ ಬಗ್ಗೆ ನೀಲಿ ನಕಾಶೆ ತಯಾರು ಮಾಡಿ ಅಲ್ಲಿರುವ ಲೋಪದೋಷ ಸರಿಪಡಿಸಿ ನಿಜವಾದ ಅದರ ಉದ್ದೇಶ ಸಫಲವಾಗುವಂತಹ ಪ್ರಯತ್ನ ಮಾಡಿ ಎಂದು ಹೇಳಿದ್ದೆವು. ನಿಮ್ಮಿಂದಾಗಲಿಲ್ಲವೆಂದು ಗೊತ್ತಾದ ಮೇಲೆ ನಮ್ಮ ಪಕ್ಷದವರಿಗೆ ಹೇಳಿ ಒಂದು ಸಮಿತಿ ಮಾಡಿದ್ದೆ. ಸನ್ಮಾನ್ಯ ಬಸವರಾಜ ಪಾಟೀಲ್ ಮತ್ತು ಡಾ।। ತಂಗಾ ಎಂಎಲ್‌ಸಿಗಳು ಕಮಿಟಿ ಮಾಡಿ, ಒಂದು ಬ್ಲೂಪ್ರಿಂಟ್ ಸರ್ಕಾರಕ್ಕೆ ಮಾಡಿಕೊಡಿ. ಅವರು ಪರಸ್ಪರ ಕಚ್ಚಾಟದಲ್ಲಿದ್ದಾರೆ, ಅವರಿಗೆ ಬಿಡುವಾಗುವುದಿಲ್ಲ ಎಂದು ಹೇಳಿ, ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಮಾಡಬೇಕಾದ್ದೇನು, ಯಾವುದಕ್ಕೆ ಪ್ರಾಧಾನ್ಯತೆ ಸಿಕ್ಕಬೇಕೆಂಬ ವಿವರಣೆಯನ್ನು ತಮಗೆ ಕಳಿಸಿಕೊಡಲು ಪ್ರಯತ್ನ ಮಾಡಿದ್ದೇವೆ. ಶಿಕ್ಷಣ ಸಾರಿಗೆ ಕೃಷಿ ಉದ್ದಿಮೆ ಉದ್ಯೋಗಾವಕಾಶ ಬೇರೆ ಜಿಲ್ಲೆಗಳೊಡನೆ ಸ್ಪರ್ಧೆ ಮಾಡುವ ರೀತಿಯಲ್ಲಿ ನೀವು ಕಾರ್ಯ ಮಾಡಬೇಕೆಂಬ ದೃಷ್ಟಿಯಿಂದ ಒಂದು ನೀಲಿನಕಾಶೆ ಕೊಟ್ಟಿದ್ದೇವೆ, ಅದನ್ನು ಅಭ್ಯಾಸ ಮಾಡಿ ಅದನ್ನು ಪೂರ್ಣ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಬೇಕು ತಾವು. ನಮ್ಮ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಹೊಸ ಕಾರ್ಯಕ್ರಮಗಳ ಘೋಷಣೆ, ಎಷ್ಟು ಆನಂದವಾಗಿತ್ತು, ಎಷ್ಟು ಚಂದಾಗಿತ್ತು? ಇವನ್ನು ಕಾರ್ಯರೂಪಕ್ಕೆ ತಂದಿರಾ? ಶುಶ್ರೂಷೆ, ಆಶ್ರಯ, ಆರಾಧನಾ, ಅಕ್ಷಯ ಅದಕ್ಕೆಲ್ಲ ಅಕ್ಷಯ ಹಿಡಿದುಹೋಯಿತು, ಅದನ್ನು ಕಾರ್ಯರೂಪಕ್ಕೆ ತರುವ ಒಂದು ಮಾತು ನಿಮ್ಮ ಶಬ್ದ ಬಂಡಾರದಿಂದ ನಮಗೆ ಕಾಣುತ್ತಿಲ್ಲ. ಶುಶ್ರೂಷೆ ಬಗ್ಗೆ ಏನು ಹೇಳಿದ್ದೀರಿ? ಇಡೀ ರಾಜ್ಯದ ಜನರ ಆರೋಗ್ಯ ಸರಿ ಇದೆಯೋ ಇಲ್ಲವೋ ಎಂದು ತಪಾಸಣೆ ಮಾಡುತ್ತೇವೆಂದು ಹೇಳಿದಿರಿ. 91–92ನೇ ಸಾಲಿನಲ್ಲಿ ನೀವು ಮಾಡಿರುವುದೆಷ್ಟು? 29, 71,921 ಜನ ಮತ್ತು ಶಾಲಾಮಕ್ಕಳಿಗೆ ತಪಾಸಣೆ ಮಾಡಿ, ನೀವು ಖರ್ಚು ಮಾಡಿರೋದು 5.86 ಕೋಟಿ. 92–93ರಲ್ಲಿ ವಾಪಸ್ ಬಂದುಬಿಟ್ಟಿರಿ. ಕೇವಲ 7,95,283 ಜನರಿಗೆ ಆರೋಗ್ಯ ತಪಾಸಣೆ, ಮಾಡಿದಿರಿ ಖರ್ಚಾಗಿರುವುದು 3 ಕೋಟಿ 27 ಲಕ್ಷ. ಇದಕ್ಕೆ ನೀವು ಖರ್ಚು ಮಾಡಿರುವ ಹಣವೆಷ್ಟು ಹೇಳಿದಂಥ ಮಾತೇನು? ಭರವಸೆ ಏತಕ್ಕೆ ಕೊಟ್ಟಿರಿ? ರಾಜ್ಯದ ಪ್ರತಿಯೊಂದು ಹಳ್ಳಿಹಳ್ಳಿಗೆ ಹೋಗಿ ಪ್ರತಿಯೊಬ್ಬ ವ್ಯಕ್ತಿಯನ್ನು ನೋಡಿ ಆರೋಗ್ಯ ತಪಾಸಣೆ ಮಾಡಿ ಅವನಿಗಿರುವಂಥ ರೋಗರುಜಿನಗಳನ್ನು ಗುರುತು ಮಾಡಿ ಪರಿಹಾರ ನಾವು ಮಾಡುತ್ತೇವೆ ಎಂದು ಹೇಳಿ, ಇರುವ ಆಸ್ಪತ್ರೆಗಳಲ್ಲಿಯೇ ಡಾಕ್ಟರುಗಳು ಇಲ್ಲ. ಇರುವ ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ. ಆ ರೀತಿಯ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿದಿರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಅವರ ಆರೋಗ್ಯವೇ ಸರಿ ಇಲ್ಲ. ಇನ್ನು ಜನರ ಆರೋಗ್ಯವನ್ನು ಏನು ಸುಧಾರಿಸುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಶ್ರಯ ಯೋಜನೆಯ ಬಗ್ಗೆ ಏನು ಹೇಳೋಣ ಸ್ವಾಮಿ.

ಶ್ರೀ ಶಿವಾನಂದ ಎಚ್. ಕೌಜಲಗಿ:– ಈ ಆರೋಗ್ಯ ತಪಾಸಣೆ ಜನರದಲ್ಲ., ಮಂತ್ರಿಗಳದು, ಮಂತ್ರಿಗಳ ಆರೋಗ್ಯ ತಪಾಸಣೆಯನ್ನು ವರ್ಷದಲ್ಲಿ ಎರಡು ಸಾರಿ ಮಾಡಬೇಕು ಎನ್ನತಕ್ಕಂಥದ್ದು ಇವರ ಕಾರ್ಯಕ್ರಮ.

ಶ್ರೀ ಬಿ.ಎಸ್. ಯಡಿಯೂರಪ್ಪ:– 'ವಿಶ್ವ' ಯೋಜನೆಯಲ್ಲಿ ಉದ್ಯೋಗ ಕೊಡುತ್ತೇವೆ. ಉದ್ಧಾರ ಮಾಡುತ್ತೇವೆ ಎಂದು ಹೇಳಿ ಆ 'ವಿಶ್ವ' ಯೋಜನೆ ಇದೆಯೋ ಸತ್ತಿದೆಯೋ ಬದುಕಿದೆಯೋ ಎಂದು ಯಾರಿಗೂ ಗೊತ್ತಿಲ್ಲ. 'ಆರಾಧನ' ಯೋಜನೆ, ಗ್ರಾಮಾಂತರ ಪ್ರದೇಶದಲ್ಲಿ ಹರಿಜನ ಗಿರಿಜನರ ಬಸದಿಗಳಿಗೆ ದೇವಸ್ಥಾನಗಳನ್ನು ಕಟ್ಟತಕ್ಕಂಥ ಯೋಜನೆ. ಅದನ್ನು ಕಾರ್ಯರೂಪಕ್ಕೆ ತರುವಂಥ ಒಂದು

ಪ್ರಾಮಾಣಿಕ ಪ್ರಯತ್ನ ನೀವು ಮಾಡಬೇಕಾಗಿದೆ. 'ಅಕ್ಷಯ' ಯೋಜನೆ ಏನು ಆಗಿದೆ ಎನ್ನುವುದರ ಬಗ್ಗೆ ನಾನು ಸಾಕಷ್ಟು ವಿವರವನ್ನು ತಿಳಿಸುವಂಥ ಒಂದು ಪ್ರಯತ್ನವನ್ನು ಮಾಡಿದ್ದೇನೆ. ಈ ರೀತಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ, ಕೊನೆಯದಾಗಿ ತಮ್ಮ ಗಮನಕ್ಕೆ ತರಬೇಕಾದಂಥ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಒಂದು ಸಾರಿ ದಯ ಮಾಡಿ ಆ ಭದ್ರಾ ಬಲದಂಡೆ ನಾಲೆ ಪರಿಸ್ಥಿತಿಯನ್ನು ನೋಡುವುದಕ್ಕೆ ತಾವು ನಮ್ಮ ಜೊತೆ ಬರಬೇಕು. 18–9–91ರಲ್ಲಿ ಆ ಒಂದು ಭದ್ರಾ ಬಲದಂಡೆ ನಾಲೆ ಒಡೆದುಹೋಯಿತು. 2 ಲಕ್ಷದ 32 ಸಾವಿರ ಎಕರೆ ಬೇಸಿಗೆ ಬೆಳೆ ಹೋದ ವರ್ಷ ಸಂಪೂರ್ಣ ನಾಶವಾಯಿತು. ಈಗ ಗುಡ್ಡದ ಪಕ್ಕದಲ್ಲಿ ಬೇರೆ ಒಂದು ಛಾನಲ್ ಮಾಡಿ ಟೆಂಪೊರರಿ ಆಗಿ ನೀರನ್ನು ನಾವು ಕೊಡುತ್ತಿದ್ದೇವೆ. ಇವತ್ತು 110 ಅಡಿ 115 ಅಡಿಯವರೆಗೆ ನೀರನ್ನು ನಾವು ಕೊಡುತ್ತಿದ್ದೆವು. ಇವತ್ತು 140 ಅಡಿಗೆ ಬಂದು ಬಿಟ್ಟರೆ ಮಟ್ಟ ಒಂದು ಹನಿ ನೀರು ಕೊಡುವುದಕ್ಕಾಗುವುದಿಲ್ಲ. ಇನ್ನು ಒಂದು ಲಕ್ಷ ಹೆಕ್ಟೇರ್‌ಗೆ ನೀರು ಕೊಡುವುದು ತಪ್ಪಿ ಹೋಗುತ್ತದೆ ಸ್ವಾಮಿ. ಈ ನಿಮಿಷದವರೆಗೆ ಮಾಡಿಲ್ಲ. ಜನ ಹೇಳುತ್ತಾರೆ, ತಜ್ಞರು ಹೇಳುತ್ತಾರೆ, ಬಾಳೆಕುಂದ್ರಿಯವರು ಬಂದಾಗ ನಾನು ಅವರ ಮನೆಯಲ್ಲಿ ಕುಳಿತು ಚರ್ಚೆ ಮಾಡಿದಾಗ ಹೇಳುತ್ತಾರೆ. ಟೆಂಪ್ರೊರಿಯಾಗಿ ನಾವು ಏನು ಛಾನಲ್ ಮಾಡಿದ್ದೇವೆ. ಆದರಿಂದ ಮೂಲ ಡ್ಯಾಮ್‌ಗೆ ಹೊಡೆತ ಆಗುವಂಥ ಒಂದು ಸಂದರ್ಭ. ಇದು ಒಡೆದು ಹೋದದ್ದು 18.9.91ರಿಂದಲೇ ಹೋದರೂ ಸಹಾ ಇವತ್ತಿನವರೆಗೂ ಆ ಮೂಲ ಡ್ಯಾಮನ್ನು ಒಡೆದಿರುವಂಥ ಭದ್ರಾ ಬಲದಂಡೆ ನಾಲೆ ರಿಪೇರಿ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಅದಕ್ಕೆ ಎಕ್ಸ್‌ಪರ್ಟ್ಸ್ ಕಮಿಟಿ ಆಯಿತು. ತಜ್ಞರು ಬಂದರು. ವರದಿಯನ್ನು ಕೊಡುತ್ತೇವೆ, ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಎಂಟು ತಿಂಗಳಿಂದ ಹೇಳಿಕೊಂಡು ಬಂದರು. ಸತ್ಯಾಗ್ರಹ, ಚಳುವಳಿ ರೈತ ಸಂಘದವರು ನಾವು ಮಾಡಿ ಮಾಡಿ ಸುಸ್ತಾದೆವು. ಸ್ವಾಮಿ ನಿಮ್ಮ ಕಾಲದಲ್ಲಾದರೂ ಈ ಬಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ತಾವು ಹೋಗಿ ಬನ್ನಿ. ಈಗಾಗಲೇ ಸಾಕಷ್ಟು ಸಿದ್ದತೆಗಳಾಗಿದೆ, ಮೂಲ ಡ್ಯಾಮ್‌ಗೆ ಹೊಡೆತವಾಗಬಹುದು. ಇದು ರಾಜಕಾರಣದ ಪ್ರಶ್ನೆಯಲ್ಲ. ಇದು ಯಾವುದೋ ಜಿಲ್ಲೆಯ ಪ್ರಶ್ನೆಯಲ್ಲ. ಯಾರೋ ಕಷ್ಟಪಟ್ಟು ಮಾಡಿರುವಂಥದ್ದು. ರೈತಾಪಿ ಜನರಿಗೆ ಉಪಯೋಗವಾಗುವಂಥದ್ದು ತಕ್ಷಣ ಮೂಲ ಡ್ಯಾಮ್‌ನ ಬಲದಂಡೆ ರಿಪೇರಿ ಬಗ್ಗೆ ವಿಶೇಷವಾದ ಗಮನವನ್ನು ತಾವು ಕೊಡಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈ ಸಪ್ಪೆ, ಏನು ಉಪಯೋಗ ಇಲ್ಲದಂಥ ರಾಜ್ಯಪಾಲರ ಭಾಷಣದಲ್ಲಿ ಏನೂ ಹುರುಳಿಲ್ಲ. ನಾನು ಪ್ರಾರಂಭದಲ್ಲಿ ಹೇಳಿದೆ. ನಮ್ಮಲ್ಲಿ ಹಿರಿಯರ ಶ್ರಾದ್ಧ ಮಾಡುವುದು ಇದೆ. ಪ್ರತಿವರ್ಷ ಮಾಡುವಂಥದ್ದು. ಅದೇ ಒಂದು ವಾಡಿಕೆ ರಾಜ್ಯಪಾಲರ ಭಾಷಣ ಮಾಡುವಂಥದ್ದು. ಇದರಿಂದ ಏನೂ ಆಗುವುದಿಲ್ಲ. ನೀವು ಏನು ಹೇಳಿದ್ದೀರಿ, ಅದನ್ನು ಮಾಡಬೇಕು. ಕೊನೆಯದಾಗಿ ನಾನು ಪ್ರಾರಂಭದಲ್ಲಿ ಹೇಳಿದ್ದನ್ನು ಒತ್ತಾಯ ಮಾಡುತ್ತೇನೆ. ನಿಜವಾಗಿಯೂ ರಾಜ್ಯಪಾಲರ ಭಾಷಣಕ್ಕೆ ಗೌರವ ಬರಬೇಕು. ಎಂದರೆ ಅದಕ್ಕೆ ಏನಾದರೂ ಇರುವಂಥ ಗೌರವ ಉಳಿಸಬೇಕು ಎಂದು ಇದ್ದರೆ ಮೂರು ವರ್ಷದಲ್ಲಿ ನಿಮ್ಮ ಸಾಧನೆಯೇನು ? ನೀವು ಹೇಳಿದ್ದೇನು ? ನಿಮ್ಮ ಸಾಧನೆಯ ಬ್ಲೂಪ್ರಿಂಟನ್ನು ನೀವು ಕೊಡಬೇಕು. ನಿಮಗೆ ಆಗದಿದ್ದರೆ ಬಹುಶಃ ಹೈದರಾಬಾದ್–ಕರ್ನಾಟಕದ ಬಗ್ಗೆ ನಾವೇನು ಬ್ಲೂಪ್ರಿಂಟ್ ಮಾಡಿ ನಿಮಗೆ ಕೊಟ್ಟಿದ್ದೇವೆ. ನಿಮಗೆ ಪುರುಸೊತ್ತು ಇಲ್ಲ ಎಂದು ಹೇಳಿ ನಾವೇ ಪ್ರಿಂಟ್ ಮಾಡಿ ನಿಮ್ಮ ಸಾಧನೆಗಳೇನು ? ನಿಮ್ಮ ಹಣೆಬರಹ ಏನು ? ಮೂರು ವರ್ಷದ ರಾಜ್ಯಪಾಲರ ಭಾಷಣ ಏನು ಎಂದು ತಿಳಿಸುವಂಥ ಪರಿಸ್ಥಿತಿ ಬರುತ್ತದೆ. ಕಾಂಗ್ರೆಸ್ ಪಕ್ಷ ಕ್ಷೀಣವಾಗುತ್ತಿರುವ ಈ ಕಾಲದಲ್ಲಿ ಕೊನೆಯ ಒಂದು ಅವಕಾಶ ಸಿಕ್ಕಿರುವಂಥ ಈ ಸಂದರ್ಭದಲ್ಲಿ ಎಷ್ಟು ದಿವಸ ಇರುತ್ತೀರೋ ಗೊತ್ತಿಲ್ಲ, ತಿಂಗಳು ಎರಡು ತಿಂಗಳೋ, ಮೂರು ತಿಂಗಳೋ ಒಂದು ವಿಚಿತ್ರವಾದಂಥ ಪರಿಸ್ಥಿತಿಯಲ್ಲಿರಬೇಕಾದರೆ ಈಗಲಾದರೂ ಜನ ನಿಮಗೆ ಅಧಿಕಾರ ಕೊಟ್ಟಿದ್ದಕ್ಕೆ ಋಣವನ್ನು ತೀರಿಸುವುದಕ್ಕೋಸ್ಕರವಾದರೂ

ಬರುವಂಥ ದಿವಸಗಳಲ್ಲಿ ಪರಸ್ಪರ ಕಚ್ಚಾಡದೆ ಇನ್ನೊಬ್ಬ ಮುಖ್ಯಮಂತ್ರಿಯನ್ನು ನೋಡುವ ಸ್ಥಿತಿಗೆ ತರಬೇಡಿ. ಸಾಧ್ಯವಾದರೆ ವಿಧಾನಸಭೆ ವಿಸರ್ಜನೆ ಮಾಡಿ ಚುನಾವಣೆಗೆ ಹೋಗೋಣ. ಆದರೆ ಯಾವ ಕಾರಣಕ್ಕೂ ಸಹಾ ಮತ್ತೆ ನೀವು ಪರಸ್ಪರ ಬಡಿದಾಡಿ ಈ ರಾಜ್ಯದ ಜನರನ್ನು ಒಂದು ಸಂಕಷ್ಟದಲ್ಲಿ ಸಿಕ್ಕಿಸಿ ಎಂದು ವಿಚಿತ್ರವಾದಂಥ ಒಂದು ಪರಿಸ್ಥಿತಿಗೆ ಜನರನ್ನು ತಳ್ಳಬೇಡಿ ಎನ್ನುವಂಥ ಒಂದು ಎಚ್ಚರಿಕೆಯ ಒಂದು ಕಿವಿ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತುಂಬಾ ಧಾರಾಳದಿಂದ ಸಾಕಷ್ಟು ಸಮಯ ಕೊಟ್ಟಿದ್ದೀರಿ, ತಮಗೆ ವಂದನೆಯನ್ನು ಅರ್ಪಿಸಿ, ನನ್ನ ಮಾತಿಗೆ ಅಡ್ಡಿ ಮಾಡದೆ ಸಹಕಾರ ಕೊಟ್ಟಂಥ ಈ ಕಡೆ ಇರುವಂಥ ಆ ಕಡೆ ಇರುವಂಥ ಎಲ್ಲಾ ಸದಸ್ಯರುಗಳಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ರಾಮಯ್ಯನವರೆ, ತಮಗೆ ಮಾತನಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ಭಾರತೀಯ ಜನತಾ ಪಕ್ಷಕ್ಕೆ ಎಷ್ಟು ಕೊಟ್ಟಿದ್ದೀರಿ ನಮಗೂ ಅಷ್ಟೆ ಕೊಡಬೇಕಾಗುತ್ತದೆ. ನಾವು ಮೂರು ಜನ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ನಿನ್ನೆ ಇವರು ನೇಗಿಲು ಹೊತ್ತ ರೈತ ಎಂದು ಹೇಳಿ, ಇವತ್ತು ನಾವು ಮೂರು ಜನ ಇದ್ದೇವೆಂದು ಹೇಳುತ್ತಿದ್ದಾರೆ. ಅದು ಹೇಗೆ ? ಮಾನ್ಯ ವೆಂಕಟೇಶ್‌ರವರು ಒಂದು ದಾರಿ, ಇವರು ಒಂದು ದಾರಿ, ಇದು ಸರಿಯಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಪತ್ರಿಕೆಯವರ ವ್ಯಾಖ್ಯಾನಕ್ಕೆ ನನ್ನ ಸದಸ್ಯರ ಚಿಂತನೆಗಳಿಗೆ ನನ್ನದು ಅಡ್ಡಿ ಇಲ್ಲ. ಆದರೆ ನನ್ನ ಪ್ರಕಾರ ಈ ರಾಷ್ಟ್ರದ ಚುನಾವಣಾ ಆಯೋಗದ ಕಡಿತದಲ್ಲಿರುವ ಪ್ರಕಾರ ಈ ಸದನದಲ್ಲಿರುವಂತಹ ಕಡಿತದಲ್ಲಿರುವ ಪ್ರಕಾರ ನಾನು ಮಾನ್ಯ ಬೈರೇಗೌಡರು, ಮತ್ತು ನನ್ನ ಪಕ್ಕದಲ್ಲಿ ಕುಳಿತುಕೊಳ್ಳುವಂತಹ ಮಾನ್ಯ ವೆಂಕಟೇಶ್‌ರವರು ನಾವು ಮೂರು ಜನರು ಜನತಾ ಪಕ್ಷದ ಸದಸ್ಯರು. ಇದು ಸರಿನೋ ತಪ್ಪೋ, ಇದು ಒಳ್ಳೆಯದೋ ಕೆಟ್ಟದೋ ಎಂದು ವಿಶ್ಲೇಷಣೆ ಮಾಡಲಿಕ್ಕೆ ನಾನು ಸಿದ್ಧನಿಲ್ಲ. ನಾವು ಮೂರು ಜನಾನೂ ಜನತಾ ಪಕ್ಷಕ್ಕೆ ಸೇರಿದಂಥವರು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ವೆಂಕಟೇಶ್‌ರವರು ಕಾಂಗ್ರೆಸಿಗೆ ಸೇರುತ್ತೇವೆಂದು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ನಿನ್ನೆಯವರೆಗೂ ನಡೆಯುತ್ತಿದೆ. ರಾಮಯ್ಯನವರು ಈ ತೀರ್ಮಾನಕ್ಕೆ ಹೇಗೆ ಬರುತ್ತಾರೆ.

ಒಬ್ಬ ಮಾನ್ಯ ಸದಸ್ಯರು:– ಮಾನ್ಯ ಬೈರೇಗೌಡರು ನಾನು ಜನತಾ ಪಕ್ಷದವನು ಅಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ಆದರ ಬಗ್ಗೆ ಅವರನ್ನೇ ಕೇಳಬೇಕು. ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಆಡಳಿತ ಪಕ್ಷ ....

ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ಅಧ್ಯಕ್ಷರೆ, ನಾನು ಮತ್ತೊಂದು ಸಾರಿ ಸದನದ ನನ್ನ ಮಿತ್ರರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ನಾನು ಲಘುವಾಗಿ ಚರ್ಚೆಯನ್ನು ಮಾಡಲಿಕ್ಕೆ ಸಿದ್ಧನಿಲ್ಲ. ನೇಗಿಲು ಹೊತ್ತ ರೈತನ ಗುರ್ತಿನ ಚಿಹ್ನೆಯ ಮೇಲೆ ಆರಿಸಿ ಬಂದಂಥ ಜನತಾ ಪಕ್ಷದ ಸದಸ್ಯ ನಾನು. ಮತ್ತೊಂದು ಸಾರಿ ಈ ವಿಷಯದಲ್ಲಿ ಯಾರೂ ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಂದೆ ಏನಾಗಿದೆ ಎಂಬುದರ ಬಗ್ಗೆ ಹೊರಗಡೆ

ಬಂದು ನನ್ನ ಸ್ನೇಹಿತರು ಬಂದು ಹೇಳಲಿ. ಆದರ ಚರಿತ್ರೆಯನ್ನು ನಾನು ಹೇಳುತ್ತೇನೆ. ಇಲ್ಲಿ ಈಗ ಹೇಳುವುದು ಬೇಡ. ಸರ್ಕಾರದವರು ರಾಜ್ಯಪಾಲರ ಮುಖಾಂತರ ಮಾಡಿಸಿರುವಂತಹ ಭಾಷಣದಲ್ಲಿ ವಂದನೆಯನ್ನು ಅರ್ಪಿಸುವಂತಹ ನಿರ್ಣಯವನ್ನು ಸದನದ ಮುಂದೆ ತಂದಿದ್ದಾರೆ. ಅದನ್ನು ಕುರಿತು ಮಾತನಾಡುವದಕ್ಕೆ ನನಗೆ ಅವಕಾಶವನ್ನು ಮಾಡಿ ಕೊಡಿ. ಈ ರಾಜ್ಯಪಾಲರ ಭಾಷಣ ಹೇಗೆ ಬಂತು ಏಕೆ ಬಂತು ಎನ್ನುವುದು ನನಗಂತೂ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಇದನ್ನು ಶ್ರಾದ್ಧ ಎಂದು ಕರೆದರು. ನಾನು ಆ ರೀತಿ ಕರೆಯಲಿಕ್ಕೆ ಸಿದ್ಧನಿಲ್ಲ. ಇದೊಂದು ಸಂಪ್ರದಾಯ ಅನೇಕ ಸಾರಿ ಸಂಪ್ರದಾಯಗಳು ಕೆಟ್ಟವು ಎಂದು ಗೊತ್ತಿದ್ದರು ಕೂಡ ಆ ಸಂಪ್ರದಾಯಗಳನ್ನು ನಾವು ನಡೆಸಿಕೊಂಡು ಬರುತ್ತಿದ್ದೇವೆ. ಈ ಸಂಪ್ರದಾಯವನ್ನು ಏಕಕಾಲದಲ್ಲಿ ನಿಲ್ಲಿಸಿ ಎಂದು ನಾನು ಪ್ರಾರ್ಥನೆ ಮಾಡದಿದ್ದರೂ ಒಂದನ್ನು ಮಾಡಬಲ್ಲೆ. ಮುಂದೆ ಬರುವಂತಹ ಸರ್ಕಾರ ಯಾವುದಾದರೂ ಆಗಲಿ, ಈ ಭಾಷಣದ ತಲೆಬರಹವನ್ನು ಬದಲಾಯಿಸಿಕೊಂಡರೆ ಉತ್ತಮವೆಂದು ಕಾಣುತ್ತದೆ. ಕರ್ನಾಟಕದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣ ಎನ್ನುವುದರ ಬದಲು, ಕರ್ನಾಟಕದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರ ಸಿದ್ಧ ಮಾಡಿದ ಓದಿದ ಭಾಷಣ ಅಥವಾ ರಾಜ್ಯಪಾಲರು ಓದಿದಂತಹ ಸರ್ಕಾರೀ ಭಾಷಣ ಎಂದು ಯಾವುದಾದರೂ ಒಂದಕ್ಕೆ ಬದಲಾವಣೆ ಮಾಡಿಕೊಳ್ಳುವುದು ಸೂಕ್ತ. ಸೂಕ್ತ ಅಷ್ಟೆ ಅಲ್ಲ, ಇದಕ್ಕೆ ಅರ್ಥ ಕಲ್ಪನೆ ಮಾಡಿಕೊಳ್ಳಬಹುದೆಂದು ನನ್ನ ಭಾವನೆಯಾಗಿದೆ. ಸರ್ಕಾರದವರು ರಾಜ್ಯಪಾಲರ ಮುಖಾಂತರ ಓದಿಸಿರುವ ಭಾಷಣದ ಎರಡನೆಯ ಸಾಲಿನಲ್ಲಿ ಭಾರತದ ಅತ್ಯಂತ ಪ್ರಗತಿಶೀಲ ರಾಜ್ಯವೆಂದು ಕರ್ನಾಟಕವನ್ನು ವರ್ಣಿಸಿದ್ದಾರೆ. ಈ ರಾಷ್ಟ್ರ ಅತ್ಯಂತ ಪ್ರಗತಿಶೀಲವಾದಂತಹ ರಾಜ್ಯ ಕರ್ನಾಟಕ ರಾಜ್ಯ ಎಂದು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಹೇಳಿದ್ದಾರೋ ನನಗೆ ಗೊತ್ತಿಲ್ಲ. ನಿನ್ನೆ ತಾನೆ ನಮ್ಮ ಕೈಗೆ ಆರ್ಥಿಕ ಸಮೀಕ್ಷೆ ಸಿಕ್ಕಿದೆ. ಈ ಆರ್ಥಿಕ ಸಮೀಕ್ಷೆಯ ಬಗ್ಗೆ ಇವತ್ತು ಪತ್ರಿಕೆಗಳಲ್ಲಿಯೂ ಕೂಡ ಸ್ಪಷ್ಟವಾಗಿ ಇದರ ಬಗ್ಗೆ ಹೇಳಿದ್ದಾರೆ. ರಾಜ್ಯದಲ್ಲಿ ಪ್ರಗತಿಯ ವೇಗ ಕುಗ್ಗಿದೆ. ಪ್ರಗತಿಶೀಲ ರಾಜ್ಯದ ಆರ್ಥಿಕ ಅಭಿವೃದ್ಧಿಯ ವೇಗ ಕುಗ್ಗಿದೆ. ಇದು ಕೇವಲ ಪತ್ರಿಕೆಯ ವರದಿಯಲ್ಲ ರಾಜ್ಯ ಸರ್ಕಾರದವರೇ ನಮಗೆ ಒದಗಿಸುವಂತಹ ಆರ್ಥಿಕ ಸಮೀಕ್ಷೆಯಲ್ಲಿಯೂ ಕೂಡ ಹೇಳಿದ್ದಾರೆ. ಎರಡನೆಯದಾಗಿ ಇದು ನಮ್ಮ ವಾದವಲ್ಲ, ಸರ್ಕಾರದವರು ಒದಗಿಸಿರುವಂತಹ ಮಾಹಿತಿಯನ್ನು ತಮ್ಮ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರುವ ವೆಚ್ಚದ ಪ್ರಮಾಣ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ಪ್ರಗತಿ ಹಾದಿಯಲ್ಲಿ ಹಿಂದೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಸರ್ಕಾರದಿಂದ ಬಂದಿರುವಂತಹ ಉತ್ತರ 'ಹೌದು' ಎಂದು.

ಯೋಜನಾ ವೆಚ್ಚದ ಪ್ರಮಾಣದಲ್ಲಾಗಲಿ, ಯೋಜನಾ ವೆಚ್ಚದ ದರದ ಏರಿಕೆಯಲ್ಲಾಗಲಿ ಅಂಕಿ-ಅಂಶಗಳನ್ನು ಪರಿಶೀಲಿಸಿದಾಗ ಈ ರಾಜ್ಯ ಅತ್ಯಂತ ಪ್ರಗತಿಶೀಲವಾಗಿರುವುದಷ್ಟೇ ಅಲ್ಲ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಪ್ರಗತಿ ಪಥದಲ್ಲಿರುವುದು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದುದರಿಂದ, ಈ ಪದವನ್ನು ಉಪಯೋಗಿಸುವಾಗ ರಾಜ್ಯ ಸರ್ಕಾರದವರು ಯಾವುದನ್ನು ಗಮನದಲ್ಲಿಟ್ಟುಕೊಂಡು ಇದನ್ನು ಬಳಸಿದ್ದಾರೋ ನನಗಂತೂ ಗೊತ್ತಿಲ್ಲ. ಆದರೆ, ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ರಾಜ್ಯ ಸರ್ಕಾರದವರು ಸಿದ್ಧಮಾಡಿದಂಥ ಆರ್ಥಿಕ ಸಮೀಕ್ಷೆಯ ಪ್ರಕಾರ ಯೋಜನಾ ವೆಚ್ಚದ ದರದ ಏರಿಕೆ ಆಧಾರದ ಮೇಲೆ ಮತ್ತು ಯೋಜನಾ ವೆಚ್ಚದ ಒಂದು ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ನಾವು ಆಲೋಚನೆ ಮಾಡಿದಾಗ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವಂತೆ ಪ್ರಗತಿಶೀಲ ರಾಜ್ಯವೆಂಬುದು ಸರಿಯಲ್ಲವೆನ್ನುವುದು ನನ್ನ ಭಾವನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತ್ಯಂತ ದುರಂತ ಘಟನೆಗಳಲ್ಲೊಂದು ಅಯೋಧ್ಯೆಯಲ್ಲಿ 1992ರ ಡಿಸೆಂಬರ್,

6ನೇ ತಾರೀಖಿನಂದು ಸಂಭವಿಸಿತು, ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಯಿತು. ಕೋಮು ಹಿಂಸಾಚಾರವನ್ನು ನಿಯಂತ್ರಿಸಲು ನನ್ನ ಸರ್ಕಾರ ತಕ್ಷಣದ ಕ್ರಮಗಳನ್ನು ಕೈಗೊಂಡಿದ್ದರ ಪರಿಣಾಮ ತೀವ್ರತರದ ಹಾನಿಯ ಪ್ರಮಾಣ ಕಡಿಮೆಯಾಗುವಂತೆ ನೋಡಿಕೊಂಡಿದ್ದು ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ನಿನ್ನೆಯಿಂದ ನನ್ನ ಮಿತ್ರರಾದಂಥ ಶ್ರೀಮಾನ್ ಯಡಿಯೂರಪ್ಪನವರು ಮಾಡಿದ ಭಾಷಣವನ್ನು ನಾನು ಕುಳಿತುಕೊಂಡು ಆಲಿಸಿದೆ. ಅವರು ಕೆಲವು ಸಾರಿ ಭ್ರಮೆಗೊಳಗಾಗುತ್ತಾರೆ. ನಮ್ಮೆಲ್ಲರಿಗೂ ನೇರವಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವಂಥವರಿಗೆ ಒಂದು ಮಾತನ್ನು ಹೇಳಿದರು. ಏನೆಂದರೆ, ವಿರೋಧ ಪಕ್ಷದವರು ಸರ್ಕಾರವನ್ನು ಟೀಕಿಸುವಂಥ ನೈತಿಕ ಹಕ್ಕು ಇಲ್ಲವೆಂದರು. ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಯಡಿಯೂರಪ್ಪನವರು, ಈಶ್ವರಪ್ಪನವರು, ರುಕ್ಮಯ್ಯ ಪೂಜಾರಿ ಮತ್ತು ನಾರಾಯಣರಾವ್ ಮನಹಳ್ಳಿ ಈ ನಾಲ್ಕು ಜನರು ಏಕೆ ಬಿಜೆಪಿ ಪಕ್ಷವನ್ನು ಸೇರಿದ್ದಾರೋ, ಆ ಪಕ್ಷವನ್ನು ಏತಕ್ಕೆ ಒಪ್ಪಿಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ, ಒಪ್ಪಿಕೊಳ್ಳುವಂಥ ಪರಿಸ್ಥಿತಿಯೂ ಇಲ್ಲ. ಶ್ರೀಮಾನ್ ಯಡಿಯೂರಪ್ಪನವರಿಗೆ ತಮ್ಮ ಮುಖಾಂತರ ಒಂದು ಪ್ರಶ್ನೆ ಕೇಳಿ ಉತ್ತರವನ್ನು ನಿರೀಕ್ಷಿಸಿದ್ದೇನೆ. ಈಗ ಸದನದಲ್ಲಿ ಅವರು ಉಪಸ್ಥಿತರಿಲ್ಲ. ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಂಥ ಶ್ರೀ ದೇಶಪಾಂಡೆ ಹಾಗೂ ಸಿಂಧ್ಯರವರಿಗೆ ಕಾಂಗ್ರೆಸ್ಸನ್ನು ವಿರೋಧ ಮಾಡುವಂಥ ನೈತಿಕ ಹಕ್ಕು ಇಲ್ಲವೆಂದು ಹೇಳಿದ ಇವರಿಗೆ ಈ ರಾಷ್ಟ್ರದ ಸಂಸತ್ತಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸುವುದಕ್ಕೆ ಇಷ್ಟ ಪಡುತ್ತಾರೆಯೇ? ಇದರ ಬಗ್ಗೆ ಅವರು ಉತ್ತರ ಕೊಡಲಿ. ಇವರ ಪಕ್ಷಕ್ಕೆ ಸೇರಿದಂಥ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನಯ್ಯನವರು ಭಾರತ ಸಂವಿಧಾನದ ಉಪಾಧ್ಯಕ್ಷರಾಗಿ ಸರ್ಕಾರಿ ವಾಹನದಲ್ಲಿ ಓಡಾಡುತ್ತಿದ್ದಾರೆ, ಸರ್ಕಾರದ ಎಲ್ಲಾ ಸವಲತ್ತುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಯಾರ ಕೃಪಾಕಟಾಕ್ಷದಿಂದ ಈ ಸವಲತ್ತು ಸಿಕ್ಕಿತು? ಶ್ರೀಮಾನ್ ಯಡಿಯೂರಪ್ಪನವರು ಇದಕ್ಕೆ ಉತ್ತರಿಸುತ್ತಾರೆಯೇ? ಇಲ್ಲಿ ಬೇಕಾದಷ್ಟು ಮಾತನಾಡಬಹುದು. ಸರ್ಕಾರದ ಎಲ್ಲಾ ಸವಲತ್ತುಗಳನ್ನು ಹೊಂದಿರುವಂಥ ಉಪಾಧ್ಯಕ್ಷರು ಗೂಟದ ಕಾರನ್ನು ಉಪಯೋಗಿಸುವುದಕ್ಕೆ, ಈ ಸವಲತ್ತನ್ನು ಅವರ ಕೃಪೆಯಿಂದ ಪಡೆದಿದ್ದು. ಶಿವರಾಜ್ ಪಾಟೀಲರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಇವರು ಮತ್ತೊಂದನ್ನು ಕಾರಣ ಕೊಟ್ಟರು. 1969ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದಂಥ ನಾನು ಇವೊತ್ತು ಕಾಂಗ್ರೆಸ್ಸಿಗೆ ತಾತ್ವಿಕವಾಗಿ ವಿರೋಧವಾಗಿದ್ದರೂ ಹೇಳದೇ ಇರುವಂಥ ನಿರಂಕುಶ ಪ್ರಭುತ್ವಕ್ಕೆ ಹೊಂದಿಕೊಳ್ಳಲಾರದೆ ಆ ಪಕ್ಷವನ್ನು ತ್ಯಜಿಸಿ ಬಂದಿದ್ದೇನೆ.

ನನಗೆ ಕಾಂಗ್ರೆಸ್‌ನ್ನು ವಿರೋಧ ಮಾಡತಕ್ಕಂಥ ನೈತಿಕ ಹಕ್ಕು ಇಲ್ಲ ಎನ್ನತಕ್ಕ ಪಾಠವನ್ನು ಬಿ.ಜೆ.ಪಿ.ಯ ಸದಸ್ಯರು ಹೇಳಬೇಕಾಗಿಲ್ಲ. ಯಾರಲ್ಲಿ ಹೊಂದಾಣಿಕೆಯಾಗಿದೆ ಎಂದರೆ ಅವರು ಇವರಲ್ಲಿ ಹೊಂದಾಣಿಕೆಯಾಗಿದ್ದಾರೆ, ಇದಕ್ಕೆ ಅವರು ಉತ್ತರವನ್ನು ಹೇಳುತ್ತಾರೆಯೆ? ಈ ರಾಷ್ಟ್ರದಲ್ಲಿ ಡಿಸೆಂಬರ್ 1992ರ 6ನೇ ತಾರೀಖಿನಂದು ನಡೆದಂಥ ಘಟನೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಬಂದಿದೆ. ಈ ದುರ್ಘಟನೆಯ ಹಿನ್ನೆಲೆಯಲ್ಲಿ ಮೊನ್ನೆ ಬಿ.ಜೆ.ಪಿ.ಯವರ ಸಭೆಯನ್ನು ನಿಷೇಧ ಮಾಡಿರತಕ್ಕದ್ದು ಮತ್ತು ಅನೇಕ ಬಿ.ಜೆ.ಪಿ. ಸದಸ್ಯರುಗಳನ್ನು ಬಂಧಿಸಿರತಕ್ಕದ್ದು, ಆ ಕ್ರಮವನ್ನು ನಾನು ಸಮರ್ಥಿಸುತ್ತೇನೆ. ಅದು ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಬಿ.ಜೆ.ಪಿ. ಸದಸ್ಯರ ಬಂಧನ ಮತ್ತು ದೆಹಲಿಯಲ್ಲಿ ನಡೆಯಬೇಕಾಗಿರತಕ್ಕ ಸಭೆಯ ನಿಷೇಧವನ್ನೂ ಸಹ ನಾನು ಸಮರ್ಥಿಸುತ್ತೇನೆ. ಅದಕ್ಕಾಗಿ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಅಭಿನಂದಿಸುತ್ತೇನೆ. ಕಾರಣ ಏನೆಂದರೆ ಡಿಸೆಂಬರ್ 6 ರಂದು ಬಿ.ಜೆ.ಪಿ.ಯವರು ನಡೆದುಕೊಂಡಂಥ ನಡವಳಿಕೆ, ಅವರು ನಂಬಿಕೆ ದ್ರೋಹ ಮಾಡಿದ್ದಾರೆ. ರಾಷ್ಟ್ರದ ಪ್ರಧಾನಿಯವರಿಗೆ ನಾವು ಭಜನೆಯನ್ನು ಮಾಡುತ್ತೇವೆಂದು ಮಾತನ್ನು ಕೊಟ್ಟು ಅಯೋಧ್ಯೆಯಲ್ಲಿ ಸೇರಿದ್ದ ಜನರು ಭಜನೆಯನ್ನು ಮಾಡುವುದನ್ನು ಬಿಟ್ಟು ಮಂದಿರವನ್ನು ಹೊಡೆದು ಹಾಕಿದರು, ಮಸೀದಿಯನ್ನು ಹೊಡೆದು ಹಾಕಿದರು.

ರಾಷ್ಟ್ರದ ಸರ್ವೋಚ್ಛ ನ್ಯಾಯಾಲಯದ ಮುಂದೆ ಉತ್ತರ ಪ್ರದೇಶದ ಕಲ್ಯಾಣಸಿಂಗ್‌ರವರ ಸರ್ಕಾರದ ಪ್ರತಿನಿಧಿಯಿಂದ ಕೋರ್ಟ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಾರೆ, ನಾವು ಭಜನೆ ಮಾಡುತ್ತೇವೆ, ಕೀರ್ತನೆ ಹೇಳುತ್ತೇವೆ, ಜೈ ರಾಮ್, ಶ್ರೀರಾಮ್ ಎಂದು ಹೇಳುತ್ತೇವೆ ಅದಕ್ಕೆ ಇನ್ನೇನನ್ನೂ ಮಾಡುವುದಿಲ್ಲವೆಂದು ಹೇಳಿ, ತಮ್ಮ ವಾಗ್ದಾನವನ್ನು ಮುರಿದು ನ್ಯಾಯಾಲಯಕ್ಕೆ ಕೊಟ್ಟಂಥ ವಚನಕ್ಕೆ ತಪ್ಪಿದ್ದಾರೆ. ಆದ್ದರಿಂದ ಇವರು ನಂಬಿಕೆಗೆ ಅನರ್ಹರು, ಇವರನ್ನು ನಂಬಿಕೊಂಡರೆ ಇವರನ್ನು ಮತ್ತೆ ದೆಹಲಿಗೆ ಕಳುಹಿಸಿದ್ದರೆ ಬಹುಶಃ ಇಲ್ಲೂ ಸಹ ಮತ್ತೊಂದು ಮಂದಿರವನ್ನು, ಮಸೀದಿಯನ್ನು ಹೊಡೆದು ಕುಚೇಷ್ಟೆಯನ್ನು ಮಾಡುತ್ತಿದ್ದರು. ಆದುದರಿಂದ ಈ ಸಭೆಯನ್ನು ನಿಷೇಧಿಸಿ, ಬಿಜೆಪಿಯ ಸದಸ್ಯರನ್ನು ಬಂಧನದಲ್ಲಿಟ್ಟಿರತಕ್ಕದ್ದನ್ನು ನಾನು ಅತ್ಯಂತ ಸಮರ್ಥಿಸುತ್ತೇನೆ. ಈ ವಿಷಯದಲ್ಲಿ ನಾನು ರಾಜ್ಯದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಡಿಸೆಂಬರ್ 6ರ ಘಟನೆಯು ಆದ ಮೇಲೆ ರಾಜ್ಯದ ಅನೇಕ ಊರುಗಳಲ್ಲಿ ದುರ್ಘಟನೆ ನಡೆದು ಎಷ್ಟೋ ಆಸ್ತಿಪಾಸ್ತಿಗಳು ನಷ್ಟವಾಗಿದೆ, ಸರ್ಕಾರದ ಲೆಕ್ಕದ ಪ್ರಕಾರವೇ ಸುಮಾರು 78 ಜನರು ಮರಣ ಹೊಂದಿದ್ದಾರೆ, ಅವರುಗಳ ಮನೆಯಲ್ಲಿ ನಾವು ಇಂದು ವಿಧವೆಯರನ್ನು ನೋಡಬಹುದು, ಈ 78 ಜನರ ಮನೆಯಲ್ಲಿ ತಂದೆ ತಾಯಿಗಳು ಮಕ್ಕಳನ್ನು ಕಳೆದುಕೊಂಡಿರುವುದನ್ನು ನೋಡಬಹುದು, ಅಣ್ಣತಮ್ಮಂದಿರನ್ನು ಕಳೆದುಕೊಂಡಿರತಕ್ಕ ಅಕ್ಕತಂಗಿಯರನ್ನು ನೋಡಬಹುದು, ಘಟನೆ ನಡೆಯಿತು, ಸತ್ತವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟೆವು, ಆದರೆ ಅಲ್ಲಿಗೇ ನಮ್ಮ ಜವಾಬ್ದಾರಿ ಮುಗಿಯಿತೆ? ಈ ಸರ್ಕಾರಕ್ಕೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಅದಕ್ಕಿಂತ ಬೇರೆ ಅನ್ಯಾಯದ ಘಟನೆ ನಡೆದಿದ್ದರೆ ಅದಕ್ಕೆ ಬಿ.ಜೆ.ಪಿ.ಯವರೆಷ್ಟು ಜವಾಬ್ದಾರರೋ ಅಷ್ಟೆ ಪ್ರಧಾನಿಯವರೂ ಕೂಡ ಜವಾಬ್ದಾರರು. ಅದೇ ರೀತಿ ಕರ್ನಾಟದಲ್ಲಿ ನಡೆದಿರತಕ್ಕ ಘಟನೆಗಳಿಗೆ ರಾಜಕೀಯ ಪಕ್ಷಗಳು ದೇಣಿಗೆಯನ್ನು ಕೊಟ್ಟಿದ್ದಾರೆ. ರಾಜಕಾರಣಿಗಳು ದೇಣಿಗೆಯನ್ನು ಕೊಟ್ಟಿದ್ದಾರೆ. ಶಾಸಕರು ದೇಣಿಗೆಯನ್ನು ಕೊಟ್ಟಿದ್ದಾರೆ. ಇವೆಲ್ಲಕ್ಕೂ ಹೆಚ್ಚಾಗಿ ಈ ಅಧಿಕಾರಿಗಳ ಕರ್ತವ್ಯ ಲೋಪವೂ ಸಹ ಈ ದುರ್ಘಟನೆಗೆ ಕಾರಣವಾಗಿದೆ. ಆದುದರಿಂದ ಯಾವ ಊರಿನಲ್ಲಿ ಈ ದುರ್ಘಟನೆ ನಡೆಯಿತು? ಇದಕ್ಕೆ ಕಾರಣಕರ್ತರಾರು? ಎಂಬುದನ್ನು ಪತ್ತೆ ಹಚ್ಚಲು ಇದರ ಬಗ್ಗೆ ಸರ್ಕಾರದ ಪರವಾಗಿ ಯಾರಾದರೂ ಇಲ್ಲಿ ಇದ್ದರೆ ಅವರಿಗೆ ಒತ್ತಾಯ ಮಾಡುತ್ತಿದ್ದೇನೆ.

ಬಹುಶಃ ಕಾಂಗ್ರೆಸ್ ಕೂಡ ಆ ರೀತಿ ಒತ್ತಾಯ ಇದೆ ಎಂದು ನನ್ನ ಭಾವನೆ. ಅನೇಕ ಕಾಂಗ್ರೆಸ್ ಮಿತ್ರರಲ್ಲಿ ನಡೆದ ಸ್ಥಳದಲ್ಲಿ ಅದು ನಡೆಯುವುದಕ್ಕೆ ಯಾರು ಕಾರಣಕರ್ತರು ಎಂಬ ವಿಷಯದಲ್ಲಿ ಒಂದು ವಿಚಾರಣೆ ಆಗಬೇಕೆಂಬ ಒತ್ತಾಯ ಏನಿದೆ ಆ ಸ್ನೇಹಿತರ ಒತ್ತಾಯಕ್ಕೆ ನಾನು ಧ್ವನಿಗೂಡಿಸಿ ಸರ್ಕಾರವನ್ನು ಪ್ರಾರ್ಥಿಸುತ್ತಿದ್ದೇನೆ, ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ ದುರ್ಘಟನೆಗಳಿಗೆ ಕಾರಣ ಯಾರು ಎಂಬುದನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ನನ್ನ ಸ್ನೇಹಿತರಾದ ಯಡಿಯೂರಪ್ಪನವರು ನಿನ್ನೆ ಪ್ರಸ್ತಾಪ ಮಾಡುತ್ತಾ, ಜಯಪ್ರಕಾಶ್ ನಾರಾಯಣ್ ಮತ್ತು ಹಿಂದಿನ ಸದನದ ಸದಸ್ಯರು ಮತ್ತು ಮಂತ್ರಿಗಳು ಆಗಿದ್ದ ಹಾವನೂರ್ ಅದರ ಹೆಸರು ತೆಗೆದರು. ಚರಿತ್ರೆ ಎಷ್ಟು ವಿಚಿತ್ರವಾದುದು ಎಂದರೆ ಜಯಪ್ರಕಾಶ್ ನಾರಾಯಣ್ ಅವರನ್ನು ಜೈಲಿಗೆ ಕಳುಹಿಸಿದಾಗ ಹಾವನೂರ್ ಅವರು ಕಾಂಗ್ರೆಸ್ ಪಕ್ಷದ ಮಂತ್ರಿಮಂಡಲದಲ್ಲಿ ಮಂತ್ರಿಗಳು. ಈ ರಾಷ್ಟ್ರದ ತುರ್ತು ಪರಿಸ್ಥಿತಿ ಕಾಲದಲ್ಲಿ ದೇವರಾಜ ಅರಸುರವರ ಮಂತ್ರಿಮಂಡಲದಲ್ಲಿ ಹಾವನೂರು ಅವರು ಮಂತ್ರಿಗಳಾಗಿದ್ದರು. ಅವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ .....

ಶ್ರೀ ಕೆ.ಹೆಚ್. ರಂಗನಾಥ್:- ಆಗ ಹಾವನೂರ್ ಅವರು ಮಂತ್ರಿಗಳಾಗಿರಲಿಲ್ಲ. ಅವರು ಮಂತ್ರಿಗಳಾಗಿದ್ದು 1978ರಲ್ಲಿ.

ಶ್ರೀ ವೈ.ಕೆ. ರಾಮಯ್ಯ:- ಸರಿ 1978ರಲ್ಲಿ, 1975ರಲ್ಲಿ ಯಾವ ಪಕ್ಷದ ಸರ್ಕಾರ ಕೇಂದ್ರದಲ್ಲಿ

ಆಡಳಿತ ಮಾಡುತ್ತಿತ್ತೋ ಆ ಸರ್ಕಾರದ ಪಕ್ಷದ ಸದಸ್ಯರಾಗಿದ್ದರು. ಅದನ್ನು ಮರೆತು ಯಡಿಯೂರಪ್ಪನವರು ಹಾವನೂರ್ ಅವರು ಮತ್ತು ಜಯಪ್ರಕಾಶ್ ನಾರಾಯಣ್ ಅವರನ್ನು ಹೊಂದಿಕೆ ತರುವುದಕ್ಕೆ ಪ್ರಯತ್ನ ಮಾಡಿದ್ದುದು ಸರಿಯುಲ್ಲವೆಂದು ನನ್ನ ಭಾವನೆ. ಮತ್ತೊಂದು ವಿಷಯ. ಅಲ್ಪ ಸಂಖ್ಯಾತರ ಸಮಸ್ಯೆಗೆ ಅವರ ಅಭಿವೃದ್ಧಿಗೆ ವಕ್ಫ್ ಬೋರ್ಡ್ ಮುಖಾಂತರ ಹಣ ಸಹಾಯ ಕೊಡುವ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಿದ್ದಾರೆ. ಸರ್ಕಾರಕ್ಕೆ ಪ್ರಾರ್ಥಿಸುವುದು ಇಷ್ಟೆ. ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಬೇಕಾಗಿರುವುದು ಹಣ ಅಲ್ಲ, ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಆಶ್ರಯ ಯೋಜನೆಯ ನಿವೇಶನ ಅಲ್ಲ. ಈ ರಾಷ್ಟ್ರ ಅಲ್ಪ ಸಂಖ್ಯಾತರಿಗೆ ಬೇಕಾಗಿರುವುದು ಮಸೀದಿ ಕಟ್ಟಲಿಕ್ಕೆ ಹಣ ಅಲ್ಲ. ನನ್ನ ಪ್ರಕಾರ ಅಲ್ಪ ಸಂಖ್ಯಾತರಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವುದು ನೆಮ್ಮದಿಯ ಬದುಕು ಮತ್ತು ಬದುಕುವ ಪರಿಸರ. ನಿಮ್ಮ ಆರ್ಥಿಕ ಯೋಜನೆಗಳು ಅವರಿಗೆ ಆಮೂಲಾಗ್ರವಾದ ಅಭಿವೃದ್ಧಿಗೆ ಎಷ್ಟು ಅವಶ್ಯಕವೋ ಇದಲ್ಲಕ್ಕಿಂತ ಹೆಚ್ಚಾಗಿ ನೆಮ್ಮದಿಯಾಗಿ ರಾಷ್ಟ್ರದಲ್ಲಿ ಬದುಕುವುದಕ್ಕೆ ಬೇಕಾದ ಪರಿಸ್ಥಿತಿಯನ್ನು ಆ ಪರಿಸರವನ್ನು ಸನ್ನಿವೇಶವನ್ನು ಸೃಷ್ಟಿ ಮಾಡಿಕೊಟ್ಟರೆ ಬಹುಶಃ ಅದಕ್ಕಿಂತ ದೊಡ್ಡ ಯಾವ ದೇಣಿಗೆ ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಬೇಕಾಲಿಲ್ಲವೆಂದು ನಾನು ಭಾವಿಸಿಕೊಳ್ಳುತ್ತೇನೆ. ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ಈ ಸದನದಲ್ಲಿ ನಿನ್ನೆಯಿಂದ ಭಾರತೀಯ ಜನತಾ ಪಕ್ಷದ ಸದಸ್ಯರು ರಾಮನನ್ನು ಹಿಡಿದುಕೊಂಡು ಜಗ್ಗುತ್ತಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ. ನನ್ನ ಹೆಸರು ರಾಮ ಅಲ್ಲ, ಬೆಣಚಕಲ್ಲಯ್ಯ ಎಂದು ಹುಟ್ಟು ಹೆಸರು. ಬಹಳ ಜನರಿಗೆ ಅದು ಗೊತ್ತಿಲ್ಲ. ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಾನು ಹುಟ್ಟುವ ವೇಳೆಗೆ ಮನೆಯಲ್ಲಿ ಆಧುನಿಕತೆ ಗಾಳಿ ಬೀಸಿದೆಯೋ ಏನೋ ಎಂದು ಕಲ್ಲ-ಪಲ್ಲ ಬೇಡ ಎಂದು ರಾಮಯ್ಯ ಎಂದು ಕರೆದಿದ್ದಾರೆ. ಈ ರಾಮನ ಹೆಸರು ದುರ್ಬಲವಾಗುತ್ತಿರುವುದು ನೋಡಿದರೆ ರಾಷ್ಟ್ರದ ಹೆಸರಿನಲ್ಲಿ ಮತೀಯ ಭಾವನೆ ಕೆರಳಿಸುವ ಕುಚೋದ್ಯ ನಡೆಯುತ್ತಿದೆ ಎಂದರೆ, ರಾಮನ ಹೆಸರಿನಲ್ಲಿ ಈ ರಾಷ್ಟ್ರದ ಜನರಿಗೆ ಮತೀಯ ಪಿತ್ತವನ್ನು ಕುಡಿಸಿ ಆ ಪಿತ್ತದ ಅಮಲಿನಲ್ಲಿ ಕುಚೋದ್ಯ ನಡೆಯುತ್ತಿದೆ ಎನ್ನುವುದಾದರೆ ಆ ಶ್ರೀರಾಮ ಹುಟ್ಟಿರಲಿಲ್ಲ ಅನ್ನಿಸುತ್ತದೆ.

ಇಂಥ ಒಂದು ಕೆಟ್ಟ ವ್ಯಕ್ತಿಯ ಹೆಸರನ್ನು ಪಡೆದುಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ರಾಮಾಯಣಗಳು ಇವೆ, ನಾವು ಯಾವುಯಾವುದೋ ರಾಮಾಯಣಗಳನ್ನು ನೋಡುತ್ತಿದ್ದೆವು. ಇತ್ತೀಚಿನ ದಿವಸಗಳಲ್ಲಿ ಇಟ್ಟಿಗೆ ರಾಮಾಯಣ ಬರುತ್ತಿದೆ, ಚಪ್ಪಲಿ ರಾಮಾಯಣ ಬರುತ್ತಿದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ ಇವರು ರಾಮಾಯಣದ ಹೆಸರನ್ನು ಹೇಳಿ, ರಾಮನ ಹೆಸರನ್ನು ಹೇಳಿ ಆತನ ವ್ಯಕ್ತಿತ್ವಕ್ಕೆ, ಆತನ ಆದರ್ಶಕ್ಕೆ ಆತನ ಒಂದು ಬದುಕಿಗೆ ಬಹುಶಃ ಅಪಚಾರ ಮಾಡುತ್ತಿದ್ದಾರೆಂದು ನನ್ನ ಭಾವನೆಯಾಗಿದೆ. ನಮ್ಮ ಹಳ್ಳಿಯ ಕಡೆ ಶನಿದೇವರ ಫೋಟೋ ಇಟ್ಟುಕೊಂಡು ತಟ್ಟೆ ಇಟ್ಟುಕೊಂಡು ಜನ ಕಾಸನ್ನು ವಸೂಲು ಮಾಡುವುದಕ್ಕೆ ಹೋಗುತ್ತಾರೆ. ಹಾಗೆ ಇವರು ಶ್ರೀರಾಮನ ಫೋಟೋ ಹಿಡಿದುಕೊಂಡು ಹೋಗುತ್ತಿದ್ದಾರೆ. ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ವಿನಾ ಕಾರಣಕ್ಕಾಗಿ ಕೊಲ್ಲಬೇಕು, ವಿನಾಕಾರಣಕ್ಕಾಗಿ ಮತ್ತೊಬ್ಬನನ್ನು ದ್ವೇಷ ಮಾಡಬೇಕೆಂದು ಹೇಳುವ ಹಿಂದೂ ಧರ್ಮಕ್ಕೆ ಧಿಕ್ಕಾರ ಎಂದು ನಾನು ಹೇಳಬೇಕಾಗುತ್ತದೆ. ಪಂಚಮ ಶಿಶು ಒಂದು ನೀರಲ್ಲಿ ಮುಳುಗುತ್ತಿದ್ದರೆ ಮನುಧರ್ಮ ಶಾಸ್ತ್ರವನ್ನು ಓದಿಕೊಂಡು ಬರುತ್ತೇನೆಂದು ಹೋಗುತ್ತಾರೆ. ನೀರಿನಲ್ಲಿ ಮುಳುಗುತ್ತಿರುವಂಥ ಮಗುವನ್ನು ಉಳಿಸುವುದು ಮನುಷ್ಯನಾದ ನನ್ನ ಕರ್ತವ್ಯ, ನನ್ನ ಧರ್ಮ ಎಂದು ಮಗುವನ್ನು ಉಳಿಸುವ ಪ್ರಯತ್ನ ಮಾಡದೆ ಮನುಧರ್ಮಶಾಸ್ತ್ರವನ್ನು ಓದಿಕೊಂಡು ಬರುತ್ತೇನೆಂದರೆ, ಇಂಥ ಒಂದು ಧರ್ಮ ನಿಮ್ಮ ಸ್ವಾರ್ಥಕ್ಕಾಗಿ, ನಿಮ್ಮ ರಾಜಕೀಯ ದುರ್ಲಾಭಕ್ಕೆ ಸಹಾಯ ಮಾಡುತ್ತದೆನ್ನುವುದಾದರೆ ನಾನಂತು ಆ ಧರ್ಮದಿಂದ ಈಚೆಗೆ ಬರಬೇಕೆನ್ನುವಷ್ಟು

ರೋಸಿಹೋಗಿದ್ದೇನೆ. ಆ ಧರ್ಮದ ಹೆಸರಿನಲ್ಲಿ ರಾಜಕೀಯ ದುರ್ಲಾಭ ಪಡೆಯಬೇಕೆನ್ನುವ ಆಸೆ ಇದ್ದರೆ ಆ ಧರ್ಮದಿಂದ ನಿಮ್ಮ ಮತೀಯ ಭಾವನೆಯನ್ನು ಕೆರಳಿಸಿ ಅಧಿಕಾರ ಗದ್ದುಗೆಯನ್ನು ಏರಬೇಕೆಂಬ ಆಸೆ ಇದ್ದರೆ ಅದು ಸಾಧ್ಯವಿಲ್ಲವೆನ್ನುವ ಎಚ್ಚರಿಕೆಯ ಮಾತನ್ನು ಹೇಳಲಿಚ್ಛಿಸುತ್ತೇನೆ. ಅದಕ್ಕೆ ಕಾರಣ ಇಷ್ಟೇ, ಯಾವುದೇ ಬಾವನೆಯನ್ನು ಕೆರಳಿಸಿ ವ್ಯಕ್ತಿಯನ್ನು ಪ್ರಚೋದಿಸಿ ಎಳೆದುಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ. ಸಮುದ್ರದ ಅಲೆಗಳು ಶಾಶ್ವತವಾಗಿ ಯಾವಾಗಲೂ ಬರುತ್ತಿರುತ್ತವೆ, ನಿರಂತರವಾಗಿ ಬರುತ್ತಿರುತ್ತವೆ. ಆದರೆ ತೋಟದಲ್ಲಿರುವಂಥ ಒಂದು ಬಾವಿಯ ನೀರಿಗೆ ಒಂದು ಕಲ್ಲನ್ನು ಎಸೆದರೆ ಅದರ ಅಗಳು ಕ್ಷಣ ಮಾತ್ರ. ಹಾಗೆ ನಮ್ಮ ಭಾರತೀಯ ಜನತಾಪಕ್ಷದ ಮಿತ್ರರು ಮಾಡುತ್ತಿರುವುದು ಅದೇ ಕೆಲಸ ಸಣ್ಣ ಒಂದು ನೀರಿನ ಕೊಳಕ್ಕೆ ಕಲ್ಲನ್ನು ಎಸೆದಾಗ ಅಲೆಅಲೆಗಳು ಏನು ಬರುತ್ತವೆ. ಅದು ಅಶಾಶ್ವತವಾದುದು ಮತ್ತು ಅದು ಬೇಗ ನಾಶವಾಗುವಂಥದ್ದು. ಸಮುದ್ರದ ಅಲೆಗಳು ಶಾಶ್ವತ. ಅಶಾಶ್ವತ ಅಲೆಗಳನ್ನು ಸೃಷ್ಟಿ ಮಾಡಿ ಅದರ ದುರ್ಲಾಭ ಪಡೆಯಬೇಕೆಂದರೆ ಬಹುಶಃ ಇದರಿಂದ ಏನೂ ಕಾರ್ಯವನ್ನು ಸಾಧನೆ ಮಾಡಲಿಕ್ಕಾಗುವುದಿಲ್ಲವೆಂದು ನನ್ನ ಭಾವನೆ. ಪ್ರಜ್ಞಾಪೂರ್ವಕವಾಗಿ ಈ ಸದನದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಯಾವುದೇ ಒಂದು ಕಾಲಕ್ಕೆ ಈ ಮತೀಯ ಭಾವನೆಯ ಪಿತ್ತವನ್ನು ನೆತ್ತಿಗೆ ಏರಿಸಿ ಜನರ ಬುದ್ಧಿಯನ್ನು ಕೆಡಿಸಿ, ಓಟನ್ನು ಪಡೆದು ಈ ರಾಜ್ಯದಲ್ಲಿ ಏನಾದರೂ ಭಾರತೀಯ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುವಂಥ ಸಂದರ್ಭ ಬಂದರೆ ನಾನು ಕಾಂಗ್ರೆಸ್‌ನವರಿಗೆ ಬೆಂಬಲವನ್ನು ಕೊಡುತ್ತೇನೆ. ಇವೆರಡರಲ್ಲಿ Congress is the lesser evil, ಯಾವುದು ಕಡಿಮೆ ಅಪಾಯಕಾರಿ ಎಂದು ಯೋಚನೆ ಮಾಡಿದಾಗ ಇವೆರಡೂ ಏನಾದರೂ ಅಧಿಕಾರಕ್ಕೆ ಬರುವಂಥ ಪ್ರಯತ್ನ ಮಾಡಿದರೆ ನಾನಂತೂ ಕಾಂಗ್ರೆಸ್‌ನವರ ಜೊತೆಯಲ್ಲಿ ಇರಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಈಗಲಾದರೂ ನೀವು ಜಾಸ್ತಿ ಜನರು ಬನ್ನಿ. ಇಂಥ ಬಾಷಣವನ್ನು ಮಾಡುವಾಗಲೂ ನಿಮ್ಮಲ್ಲಿ ಒಬ್ಬರೂ ಇಲ್ಲವಲ್ಲಾ ಎಂದು ನಮಗೆ ಚಿಂತೆಯಾಗಿದೆ. ಏಕೆಂದರೆ ನೀವು ಮೇಜನ್ನು ಕುಟ್ಟಿದರೂ ಶಬ್ದವೇ ಇಲ್ಲ. ಮೇಜನ್ನು ಕುಟ್ಟಲೂ ನಿಮ್ಮ ಜನರನ್ನು ಕರೆಯಿಸಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ರಾಜ್ಯವನ್ನು ಆಳುವುದಕ್ಕೆ ನಾವು ಬರುತ್ತೇವೆಂಬ ಭ್ರಮೆ ಏನಿದೆ ಅದು ಬೇಡ. ಆ ಎರಡನೆಯ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವಷ್ಟು ವಿರೋಧ ಪಕ್ಷದ ನಾಯಕರಾಗುವಷ್ಟು ಜನರು ಗೆದ್ದು ಬರಲಿ. ಅಷ್ಟೇ ಸಾಕು. ಇದು ಅಷ್ಟು ಸುಲಭದ ಕೆಲಸವಲ್ಲ. ಅದೂ ಕೂಡ ಇವರಿಂದ ಸಾಧ್ಯವಾಗುವುದಿಲ್ಲ. ಇಷ್ಟನ್ನು ಹೇಳಿ ನನ್ನ ಸ್ನೇಹಿತರಲ್ಲಿ ಪ್ರಾರ್ಥಿಸುತ್ತೇನೆ. ದಯವಿಟ್ಟು ನಿಮ್ಮ ಭ್ರಮಾಲೋಕದಿಂದ ಹೊರಗಡೆ ಬನ್ನಿ ಈ ವಿಷಯದಲ್ಲಿ ಇಷ್ಟು ಹೇಳಿ, ನಮ್ಮ ಕರ್ನಾಟಕದಲ್ಲಿ ನಡೆದಿರುವ ಘಟನೆಗಳ ಬಗ್ಗೆ ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡತಕ್ಕ ಕೆಲಸ ಮಾಡಬೇಕು ಎಂದು ಮತ್ತೊಮ್ಮೆ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು 9ನೇ ಪ್ಯಾರಾದಲ್ಲಿ ಸ್ವಚ್ಛ ಆಡಳಿತವನ್ನು ನೀಡಲು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಹಾಗೂ ಪ್ರಾಮಾಣಿಕತೆ ಮೂಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತಿದೆ. ಕರ್ತವ್ಯ ನಿಷ್ಠೆ ಹಾಗೂ ಧಕ್ಷತೆಯನ್ನು ರೂಢಿಸಿಕೊಳ್ಳಲು ಅಸಮರ್ಥರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂಥ ಮತ್ತು ಪ್ರಾಮಾಣಿಕ ಹಾಗೂ ದಕ್ಷ ಸರ್ಕಾರಿ ನೌಕರರಿಗೆ ಅವರ ಕಾರ್ಯಕ್ಷೇತ್ರದಲ್ಲಿ ಉತ್ಕೃಷ್ಟತೆ ಸಾಧಿಸಲು ಅಗತ್ಯವಾದ ಎಲ್ಲ ಪ್ರೋತ್ಸಾಹಗಳನ್ನೂ ನೀಡುವಂಥ ಹೊಸ ಆಡಳಿತಾತ್ಮಕ ಸಂಸ್ಕೃತಿಯೊಂದನ್ನು ಬೆಳೆಸಲಾಗುವುದು, ಅಡ್ಮಿನಿಸ್ಟ್ರೇಟಿವ್ ಕಲ್ಚರ್ ಅಂಗವಾಗಿ 1 ವಾರದಲ್ಲಿ ಎಲ್ಲಾ ಕಡತಗಳನ್ನೂ ನಾವು ರಿಲೀವಾರಿ ಮಾಡುತ್ತೇವೆ. ಆಡಳಿತಾತ್ಮಕ ಸಂಸ್ಕೃತಿಯನ್ನು ಕಾರ್ಯರೂಪಕ್ಕೆ

ತರುವುದಕ್ಕೆ ನಾವು ಅಧಿಕಾರಿಗಳಿಗೆ ಹೊಣೆಗಾರಿಕೆಯನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಸರ್ಕಾರ ಮಾನ್ಯ ರಾಜ್ಯಪಾಲರ ಮುಖಾಂತರ ಹೇಳಿಸಿದೆ. ನಮ್ಮ ಆಡಳಿತದಲ್ಲಿ ಇರಬೇಕಾದಂಥ ಸಂಸ್ಕೃತಿ ಯಾವುದು ? ಈಗಿರತಕ್ಕ ಸಂಸ್ಕೃತಿ ಯಾವುದು ? ಆಡಳಿತ ಮಾಡತಕ್ಕ ನಾವು, ಈ ರಾಷ್ಟ್ರದ ಜನಸಾಮಾನ್ಯರ ತೆರಿಗೆ ಹಣದಿಂದ ಬದುಕುತ್ತಿರುವ ನಾವು ಜೀತದಾಳುಗಳು. ಈ ರಾಷ್ಟ್ರದ ಪ್ರಧಾನಿಯಿಂದ ಹಿಡಿದು 4ನೇ ದರ್ಜೆ ನೌಕರರವರೆಗೆ ಈ ಸಂಸ್ಕೃತಿ ರಕ್ತಗತವಾಗಿ ಬರಬೇಕು. Can this Government imbibe this, inject this culture? ಈ ರಾಷ್ಟ್ರದ ಪ್ರಧಾನಿಯಿಂದ ಹಿಡಿದು ನನ್ನನ್ನೂ ಸೇರಿಸಿಕೊಂಡು ರಾಷ್ಟ್ರದ ಬೊಕ್ಕಸದಿಂದ ಸಂಬಳವನ್ನು ಪಡೆಯುವ ನಾವೆಲ್ಲರೂ ತೆರಿಗೆಯನ್ನು ಕೊಡುವವರ ಗುಲಾಮರು ಎನ್ನತಕ್ಕ ಸಂಸ್ಕೃತಿಯನ್ನು ಈ ರಾಜ್ಯದಲ್ಲಿ ತರುವುದಾದರೆ ಅದನ್ನು ಸಂಸ್ಕೃತಿ ಎಂದು ಹೇಳಬಹುದು. ಇದು ರಾಷ್ಟ್ರದ ದುರಂತ, ಇಲ್ಲಿ ತೆರಿಗೆಯನ್ನು ಕೊಡತಕ್ಕ ಧಾತ ಯಾರಿದ್ದಾನೆ ಅವನು ತೆರಿಗೆಯ ಹಣದಿಂದ ಬದುಕುವ ನಮ್ಮ ಮುಂದೆ ಬಂದು ನಿಂತಾಗ ಆ ಚಿತ್ರ ಹೇಗಿರುತ್ತದೆಂದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಅವನು ತಹಸೀಲ್ದಾರನಾಗಿರಬಹುದು, ಬಿ.ಡಿ.ಒ. ಆಗಿರಬಹುದು. ತೆರಿಗೆಯನ್ನು ಕೊಡತಕ್ಕವರ ಬಗ್ಗೆ ಆಡಳಿತವನ್ನು ಮಾಡತಕ್ಕ ನಾವು ನಡೆದುಕೊಳ್ಳುವ ರೀತಿ, ಅವನನ್ನು ನಾವು ಕಾಣುವ ದೃಷ್ಟಿ ಎರಡನ್ನೂ ನೋಡಿದಾಗ ಬಹುಶಃ ನಮ್ಮ ಆಡಳಿತ ಸಂಸ್ಕೃತಿ ಬದಲಾವಣೆಯಾಗಬೇಕಾಗಿದೆ. ಇಷ್ಟು ಮಾಡಿದರ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಸಾರ್ಥಕತೆಯನ್ನು ಪಡೆಯುತ್ತಾರೆಂದು ಕಾಣಿಸುತ್ತದೆ. ಆದರೆ ಇದು ಅವರಿಂದ ಸಾಧ್ಯವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಇದ್ದಾರೆ. ಒಂದು ಸಾರಿ ಒಂದು ಸಾರ್ವಜನಿಕ ಸಭೆಯಲ್ಲಿ ನಾನೂ ಮತ್ತು ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ನಾರಾಯಣ್‌ರವರೂ ಇಬ್ಬರೂ ಹೋಗಿ ಅವರಿಗೆ ನಾವು ಕೈಮುಗಿದಾಗ ಅವರು ಏನು ಮಾಡಿದರೆಂಬುದನ್ನು ತಾವು ಕೇಳಬೇಕು.

ನಮ್ಮ ತುಮಕೂರು ಜಿಲ್ಲೆಯಲ್ಲಿ ನಿಮ್ಮ ರಾಜ್ಯದ ಆಡಳಿತವನ್ನು ರಕ್ಷಣೆ ಮಾಡುವ ಜಿಲ್ಲಾ ಪರಿಷತ್ತಿನ ಒಬ್ಬರು ಕಾರ್ಯದರ್ಶಿಯವರಿದ್ದಾರೆ. ಅವರ ಹತ್ತಿರ ನಾನು ಮತ್ತು ನಿಮ್ಮ ಪಕ್ಷದ ಒಬ್ಬ ಸದಸ್ಯರು ಸಾರ್ವಜನಿಕ ಸಭೆಯಲ್ಲಿ ಕೈ ಮುಗಿದರೆ, ಆತ ಕುಳಿತಲ್ಲೇ ಕಾಲ ಮೇಲೆ ಕಾಲು ಹಾಕಿಕೊಂಡು ಕಣ್ಣೊಡೀತಾರೆ. ಯಾವುದೇ ಆಡಳಿತಾತ್ಮಕ ಸಂಸ್ಕೃತಿ ನಾಶ ಮಾಡುವುದಿದೆ, ಈ ಸಂಸ್ಕೃತಿಯನ್ನು ನಾಶ ಮಾಡಿ, ತೆರಿಗೆ ಕೊಡುವವನ ಗುಲಾಮರು ನಾವು ಎನ್ನುವ ಸಂಸ್ಕೃತಿಯನ್ನು ನಿಮ್ಮ ಸರ್ಕಾರ ಇನ್‌ಜೆಕ್ಟ್ ಮಾಡುವುದಾದರೆ, ನೀವು ಇದನ್ನು ಮೊದಲು ಇಂಜೆಕ್ಟ್ ಮಾಡುವುದಾದರೆ, ನೀವು ಇದನ್ನು ಮೊದಲು ಇಂಜೆಕ್ಟ್ ಮಾಡಿ. ಒಂದು ಪದವನ್ನು ತಾವು ಭಾಷಣದಲ್ಲಿ ಉಪಯೋಗಿಸಿದ್ದೀರಿ. ''ಹೊಸ ಆಡಳಿತಾತ್ಮಕವಾದ ಸಂಸ್ಕೃತಿಯನ್ನು ಬೆಳೆಸಲಾಗುತ್ತದೆ'' ಎಂದು. ಇಬ್ಬರು ಜನಪ್ರತಿನಿಧಿಗಳು ಕೈಮುಗಿದರೆ, ಕೂಲಿ ತೆಗೆದುಕೊಳ್ಳುವ ಆಳು ಕಣ್ಣು ಹೊಡೆಯುತ್ತಾರೆ. ಈ ಸಂಸ್ಕೃತಿ ತಪ್ಪಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ ಎಂದು ನಾನು ಭಾವನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ಏಕೆ ನಿರಾಶೆ ?

ಶ್ರೀ ವೈ.ಕೆ. ರಾಮಯ್ಯ:- ನಾನು ನೋಡಿದ್ದೇನೆ. ನೀವು ಎರಡನೆಯ ಸಲ ಮಂತ್ರಿಗಳಾಗಿದ್ದೀರಿ. ನಾನೂ ಕೂಡ ಸ್ವಲ್ಪ ದಿವಸ ಮಂತ್ರಿಯಾಗಿದ್ದೆ. ವೈಯುಕ್ತಿಕವಾಗಿ ನಿಮ್ಮ ಹತ್ತಿರ ಬರುವ ಅಧಿಕಾರಿಗಳನ್ನು ನೀವು ಕಂಟ್ರೋಲ್ ಮಾಡುತ್ತೀರೇನೋ. ನನ್ನ ಹತ್ತಿರ ಬರುತ್ತಿದ್ದವರನ್ನು ನಾನು ಕಂಟ್ರೋಲ್ ಮಾಡುತ್ತಿದ್ದೆ. ಆದರೆ ಸಾರ್ವತ್ರಿಕವಾಗಿ ಇದನ್ನು ತರುವುದು ಕಷ್ಟ ಎಂದು ನನ್ನ ಭಾವನೆ. ನೀವು ತರುವುದಾದರೆ ನಿಮಗೆ ನಮಸ್ಕಾರ.

ಶ್ರೀ ಕೆ.ಹೆಚ್. ರಂಗನಾಥ್:- ನಿರಾಶಾವಾದಿಗಳಾಗಬಾರದು, ಆಶಾವಾದಿಗಳಾಗಿರಬೇಕು. ನಂಬಿಕೆ ಕಳೆದುಕೊಂಡರೆ ಏನಾಗುತ್ತದೆ? ನಂಬಿಕೆ ಇರಬೇಕಾಗುತ್ತದೆ. ನಿರಾಶಾವಾದ ಇದ್ದರೆ ಏನೂ ಉಪಯೋಗ ಬೀಳಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಒಪ್ಪಿಕೊಳ್ಳುತ್ತೇನೆ. ಜೀವನದಲ್ಲಿ ನಿರಾಶೆ ಇರಬಾರದು, ಅದೇ ಸಂದರ್ಭದಲ್ಲಿ ಚಿಕ್ಕವನಾಗಿಯೂ ಹಿರಿಯರಿಗೆ ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ. ಇಡೀ ಜೀವನದಲ್ಲಿ ಕೇವಲ ನಂಬಿಕೆ ಮೇಲೆ ಬದುಕುವುದು ಒಳ್ಳೆಯದಲ್ಲ. ನಿಜ, ಆಸೆ ಇಟ್ಟುಕೊಳ್ಳಬೇಕು, ನಂಬಿಕೆ ಇಟ್ಟುಕೊಳ್ಳಬೇಕು. ಆದರೆ ಇಡೀ ಬದುಕಿನಲ್ಲಿ ಕೇವಲ ನಂಬಿಕೆಗಳಿಗೇ ಜೋತುಬಿದ್ದು ಬದುಕುವುದು ಸರಿಯಲ್ಲ. ಆದ್ದರಿಂದ ಏನು ಸರ್ಕಾರದವರು ಆಡಳಿತದಲ್ಲಿ ಆಡಳಿತಾತ್ಮಕ ಸಂಸ್ಕೃತಿ ತರುತ್ತೇವೆಂದು ಹೇಳಿದ್ದಾರೋ ಅದನ್ನು ನಾನು ಸ್ವಾಗತಿಸುತ್ತೇನೆ. ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಏನು ಅನುಮಾನ ವ್ಯಕ್ತ ಮಾಡುತ್ತಿದ್ದೇನೆ ಆ ಅನುಮಾನಕ್ಕೆ ಅವಕಾಶ ಆಗದ ರೀತಿಯಲ್ಲಿ ಕಾರ್ಯರೂಪಕ್ಕೆ ತರುತ್ತೀರಿ ಎಂದು ಭಾವಿಸುತ್ತೇನೆ. ಇನ್ನೂ 12ನೇ ಪ್ಯಾರಾದಲ್ಲಿ,

"ಸರ್ಕಾರಿ ನೌಕರರ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ನೌಕರರ ಜ್ಞಾನದ ಮಟ್ಟ ಮತ್ತು ಕೌಶಲ್ಯಗಳನ್ನು ಹೆಚ್ಚಿಸಲು ಹಾಗೂ ನ್ಯಾಯೋಚಿತ ಆಡಳಿತ ನೀಡುವಲ್ಲಿ ಅವರು ಹೊಣೆಗಾರರಾಗಿರುವಂತೆ ಮಾಡಲು ಅವರಿಗೆ ಸೂಕ್ತ ತರಬೇತಿ ನೀಡಲಾಗುವುದು."

ಎಂದು ಹೇಳಿದ್ದಾರೆ. ಯಾವುದಕ್ಕೆ? ಸರ್ಕಾರಿ ನೌಕರರಿಗೆ ಜ್ಞಾನದ ಮಟ್ಟ ಮತ್ತು ಕೌಶಲ್ಯಗಳನ್ನು ಹೆಚ್ಚಿಸುವುದಕ್ಕಾಗಿ ಈ ಸರ್ಕಾರಿ ನೌಕರರುಗಳಿಗೆ ತರಬೇತಿ ನೀಡಲಾಗುವುದು. ಮತ್ತೆ ಅಲ್ಲಿಗೇ ನಾವು ಬರಬೇಕಾಗುತ್ತದೆ. ಈ ದೇಶದ ಸಮಸ್ಯೆ, ನಮ್ಮ ಸಮಾಜದ ಸಮಸ್ಯೆ ಬುದ್ಧಿ ಕಡಿಮೆ ಆದದ್ದು ಅಲ್ಲ. ಶ್ರದ್ಧೆ ಕಡಿಮೆ ಆಗಿರುವುದು. ಬುದ್ಧಿ ಕಡಿಮೆಯಾದರೆ ಪರವಾಗಿಲ್ಲ, ಯಾವ ದೇಶಕ್ಕೂ ಅದರಿಂದ ಅಷ್ಟೊಂದು ದುರಂತ ಆಗುವುದಿಲ್ಲ. ಆದರೆ ಶ್ರದ್ಧೆ ಕಡಿಮೆಯಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ತಕ್ಷಣದಿಂದ ಇಲ್ಲಿಯವರೆಗೆ ನಾವು ವಿಶ್ಲೇಷಣೆ ಮಾಡಿದರೆ ಏನೂ ಪ್ರಗತಿಯೇ ಆಗಿಲ್ಲ ಎಂದು ಹೇಳುವಷ್ಟು ಅವಿವೇಕಿ ನಾನಲ್ಲ. ಅಭೂತಪೂರ್ವವಾದ ಪ್ರಗತಿ ಆಗಿದೆ. ಅದೇ ಸಮಯದಲ್ಲಿ ನಾವು ಅನೇಕ ಕ್ಷೇತ್ರಗಳಲ್ಲಿ ಸೋಲನ್ನು ಕಂಡಿದ್ದೇವೆ. ಈ ಸೋಲಿಗೆ ಕಾರಣ ಏನು? ಈ ವಿಫಲತೆಗೆ ಕಾರಣ ಏನು? ನನ್ನ ಪ್ರಕಾರ ಬಹಳ ಪ್ರಾಮುಖ್ಯವಾದ ಕಾರಣ, ಅತ್ಯಂತ ಗಂಭೀರವಾದ ಕಾರಣ ಯಾವುದು ಎಂದರೆ, ಆದ್ಯತೆಯನ್ನು ಗುರ್ತಿಸುವುದರಲ್ಲಿ ನಮ್ಮ ಸೋಲು, ಯಾವುದನ್ನು ಯಾವಾಗ ಮಾಡಬೇಕು, ಯಾವುದನ್ನು ಮೊದಲು ಮಾಡಬೇಕು, ಯಾವುದನ್ನು ಕೊನೆಯಲ್ಲಿ ಮಾಡಬೇಕೆನ್ನುವ ಆದ್ಯತೆಯನ್ನು ಗುರ್ತಿಸುವ ಕೆಲಸದಲ್ಲಿ ನಾವು ಸೋತಿರುವುದು, ಈ ರಾಷ್ಟ್ರದ ಅಭಿವೃದ್ಧಿಯ ಕೆಲಸದಲ್ಲಿ ನಾವು ಕಂಡಂತಹ ಸೋಲಿಗೆ ಇದು ಮೊದಲನೆಯ ಕಾರಣ.

ಎರಡನೆಯ ಕಾರಣ ನಮ್ಮ ನೌಕರರಲ್ಲಿ ಜ್ಞಾನದಮಟ್ಟ ಕಡಿಮೆಯಾಗಿರುವುದಿಲ್ಲ. ಈ ರಾಷ್ಟ್ರದ ಸಮಸ್ಯೆಯ ಅರಿವು ಇರುವಂತಹ ಜನರ ಕೈಗೆ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಯೋಜನೆಗಳನ್ನು ಸಿದ್ಧ ಮಾಡುವಂತಹ ಗುರುತರ ಜವಾಬ್ದಾರಿಯನ್ನು ವಹಿಸಿ ಈ ರಾಷ್ಟ್ರದಲ್ಲಿ 45 ವರ್ಷಗಳನ್ನು ನಾವು ಕಳೆದಿದ್ದೇವೆ. ಯಾರಿಗೆ ಯಾವ ಸಮಸ್ಯೆ ಬಗ್ಗೆ ಅರಿವು ಇಲ್ಲವೋ ಯಾರಿಗೆ ಯಾವ ಸಮಸ್ಯೆಯ ಬಗ್ಗೆ ಸ್ವಲ್ಪವಾದರೂ ಗಮನ ಇಲ್ಲವೋ? ಅಂತಹ ವ್ಯಕ್ತಿಗಳ ಕೈಗೆ ಈ ಸಮಸ್ಯೆಯನ್ನು ಬಗೆಹರಿಸುವಂತಹ ಯೋಜನೆಗಳನ್ನು ಸಿದ್ಧಮಾಡುವಂತಹ ಗುರುತರ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಇದು ಸಣ್ಣ ಕಥೆಯಲ್ಲ. ಸತ್ಯ ಕಥೆಯನ್ನು ಹೇಳಿದರೆ ಬಹುಶಃ ಎಷ್ಟು ನಿಜ ಎನ್ನುವುದು ನಮಗೆ ಗೊತ್ತಾಗುತ್ತದೆ. ಯಾರೋ ಒಬ್ಬರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್

ಅವರು ಒಂದು ಸೀಗೆಮೆಳೆ ಸರ್ಕಾರೀ ಜಮೀನಿನಲ್ಲಿದೆ. ಅದನ್ನು ಹರಾಜು ಹಾಕಬೇಕು ಅಪ್ರೂವಲ್ ಕೊಡಿಯೆಂದು ಮೇಲಕ್ಕೆ ಕಳುಹಿಸಿದ್ದಾರೆ. ಸೀಗೆಮೆಳೆ ಎಷ್ಟು ವರ್ಷದ್ದು ಎಂದು ಕ್ಲಾರಿಫಿಕೇಶನ್ ಕೇಳಿದರು. 10 ವರ್ಷದ್ದು ಎಂದು ಕ್ಲಾರಿಫಿಕೇಶನ್‌ಗೆ ಉತ್ತರ ಬಂತು. ಅದನ್ನು ಎಷ್ಟು ರೂಪಾಯಿಗೆ ಹರಾಜು ಮಾಡಬಹುದೆಂದು ಕೆಳಗಿನ ಅಧಿಕಾರಿ ಬಿಡಿಒ ಅವರನ್ನು ಕೇಳಿದಾಗ, 50 ರೂಪಾಯಿಗೆ ಹರಾಜು ಹಾಕಬಹುದೆಂದು ಹೇಳಿದರು. ಎಲ್ಲಿಯಾದರೂ ಉಂಟೇ 10 ವರ್ಷದ ಸೀಗೆಮೆಳೆಯಲ್ಲಿ ಹಲಗೆ ಕುಯಿಸಿ ಎಂದು ಬರೆದು ಕಳುಹಿಸಿದರು. ಸೀಗೆಮೆಳೆ ಅಂದರೆ ಸೀಗೆಕಾಯಿ ಬಿಡುವ ಒಂದು ಮೆಳೆ, ಸೀಗೆಕಾಯಿ ನಾವು ಸ್ನಾನ ಮಾಡಲು ಉಪಯೋಗಿಸುತ್ತೇವೆ. ಸಭಾಧ್ಯಕ್ಷರ ಊರಿನ ಕಡೆ ಇದೆಯೋ ಏನೋ ಗೊತ್ತಿಲ್ಲ. ಸೀಗೆಮೆಳೆಯನ್ನು 50 ರೂಪಾಯಿಗೆ ಹರಾಜು ಹಾಕುವುದು ಬೇಡ ಅದರಲ್ಲಿ ಹಲಗೆ ಕುಯಿಸಿ ಎಂದು ಬರೆಯುವಂತಹ ಅಧಿಕಾರಿಗಳ ಕೈಗೆ ಈ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವಂತಹ ಯೋಜನೆಗಳನ್ನು ತಯಾರು ಮಾಡಲಿಕ್ಕೆ ಅಧಿಕಾರ ಕೊಟ್ಟಿದ್ದು ಮೊದಲನೆಯ ತಪ್ಪು. ರೇಷ್ಮೆಹುಳ ನಾಗರಹಾವು ಇದ್ದ ಹಾಗೆ ಇರುತ್ತಾ, ಹೆಬ್ಬಾವು ಇದ್ದ ಹಾಗೆ ಇರುತ್ತಾ, ಕ್ಯಾರೆಹಾವು ಇದ್ದ ಹಾಗೆ ಇರುತ್ತಾ ಎಂದು ಕೇಳುವ ಅಧಿಕಾರಿಗಳಿಗೆ, ರೇಷ್ಮೆಹುಳ ಹೇಗಿದೆ ಎನ್ನುವುದು ಗೊತ್ತಿಲ್ಲದ ವ್ಯಕ್ತಿಗಳು ಅಲ್ಲಿ ಕುಳಿತುಕೊಂಡು ಯೋಜನೆಗಳನ್ನು ರೆಡಿ ಮಾಡುತ್ತಾರೆ. ನೇಗಿಲು, ನೊಗ ಅಂದರೇನು, ಎಡಗೋಲು ಅಂದರೇನು ಬಲಗೋಲು ಅಂದರೇನು, ಕಬ್ಬು ಅಂದರೇನು ರಾಗಿ ಅಂದರೇನು ಎನ್ನುವುದು ಗೊತ್ತಿಲ್ಲ. ಅವರು ಮಣಿಲಾದಲ್ಲಿ ಕುಳಿತುಕೊಂಡು ಈ ರಾಷ್ಟ್ರದ ಕೃಷಿ ಸಮಸ್ಯೆಗಳ ಪರಿಹಾರದ ಬಗ್ಗೆ ದೊಡ್ಡದಾದ ಯೋಜನೆಗಳನ್ನು ತಯಾರು ಮಾಡುತ್ತಾರೆ. ಹೀಗೆ ಮಾಡಿದರೆ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಯೆ? ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದನ್ನು ತಯಾರು ಮಾಡುವುದಕ್ಕೆ ಯಾರ್‍ಯಾರು ನಿಮಗೆ ಬುದ್ಧಿವಾದ ಹೇಳಿದರೋ ಗೊತ್ತಾಗಲಿಲ್ಲ. ಇಲ್ಲಿ ಏನಾದರೂ ಇದ್ದರೆ ಇದು ಅಧಿಕಾರಿಗಳ ಬುದ್ಧಿವಾದದಿಂದ ತಯಾರಾದದ್ದು ಎಂದು ಕಾಣುತ್ತದೆ. ನನ್ನ ಪ್ರಾರ್ಥನೆ ಇಷ್ಟೆ, ಈ ರಾಷ್ಟ್ರದಲ್ಲಿ ಏನಾದರೂ ಆಗದಿದ್ದರೆ, ಏನೂ ಆಗಿಲ್ಲವೆಂದು ಹೇಳುವುದಿಲ್ಲ. ಆದರೆ ಇನ್ನು ಕೆಲವು ಆಗಿಲ್ಲ. ಅವು ಏನಾದರೂ ಆಗದಿದ್ದರೆ ಅದಕ್ಕೆ ಮೂಲಭೂತವಾದ ಕಾರಣ ಅಜ್ಞಾನವಲ್ಲ. ನಮ್ಮಲ್ಲಿ ಸಾಕಷ್ಟು ಜ್ಞಾನವಿದೆ. ನಮ್ಮ ಸರ್ಕಾರಿ ನೌಕರರಿಗೆ ಜ್ಞಾನ ಮತ್ತು ಕೌಶಲ್ಯವನ್ನು ಹೆಚ್ಚಿಸುವುದಕ್ಕೆ ತರಬೇತಿಯನ್ನು ಕೊಡುವುದು ಬೇಡ. ಅವರಿಗೆ ಈ ರಾಜ್ಯದ ಜನರ ಸಮಸ್ಯೆಗಳನ್ನು ದುಃಖದುಮ್ಮಾನಗಳನ್ನು ಕಷ್ಟಕಾರ್ಪಣ್ಯಗಳನ್ನು ಈ ರಾಜ್ಯದ ಜನರ ಸಮಸ್ಯೆಗಳನ್ನು ಅರಿತುಕೊಳ್ಳಲಿಕ್ಕೆ ಮೊದಲು ಬುದ್ಧಿವಾದ ಹೇಳಿ ಎಂದು ಸ್ವಾಮಿಯೆಂದು ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಅದೇ ಮಾತು ಹೇಳುತ್ತಾರೆ.

"ಆಡಳಿತದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವ ಒಲವನ್ನು ನೌಕರರಲ್ಲಿ ಮೂಡಿಸುವ ಉದ್ದೇಶದಿಂದ ರಾಜ್ಯದಲ್ಲಿರುವ ಎಲ್ಲ ಹಂತದ ಸರ್ಕಾರಿ ನೌಕರರನ್ನು ಐದು ವರ್ಷಗಳ ಅವಧಿಯೊಳಗೆ ತರಬೇತುಗೊಳಿಸುವಂತಹ ಒಂದು ಯೋಜನೆಯನ್ನು ಮಹಾ ನಿರ್ದೇಶಕರು ರೂಪಿಸುತ್ತಾರೆ."

ಇದರ ಅವಶ್ಯಕತೆ ಇಲ್ಲ. ಅವರಿಗೆ ಸಾಕಷ್ಟು ಬುದ್ಧಿ ಇದೆ. ಲಂಚ ಹೊಡೆಯುವಷ್ಟು ಬುದ್ಧಿ ಇದೆ. ಮೆಜರ್‌ಮೆಂಟ್ ಕೊಟ್ಟು ಅದನ್ನು ತಿದ್ದುವಷ್ಟು ಬುದ್ಧಿ ಅವರಿಗೆ ಇದೆ. ಓಟು ಕೊಟ್ಟಂತ ಜನಗಳಿಗೆ ದ್ರೋಹ ಮಾಡುವಷ್ಟು ಬುದ್ಧಿ ಅವರಿಗೆ ಇದೆ. ಅವರಿಗೆ ಬುದ್ಧಿ ಕಲಿಸುವುದಕ್ಕೆ ಟ್ರೈನಿಂಗ್ ಏತಕ್ಕೆ ಕೊಡುತ್ತೀರಿ ಸ್ವಾಮಿ? ಮೊದಲು ಅವರಿಗೆ ಶ್ರದ್ಧೆ ಕಲಿಸಿ.

ನಮ್ಮ ಜನರ ಬಗ್ಗೆ ಕಳಕಳಿ ಇರುವಂಥ ಪ್ರವೃತ್ತಿಯನ್ನು ಮೊದಲು ಇಂಜೆಕ್ಟ್ ಮಾಡಿ. ಇಲ್ಲಿ ಶಿಕ್ಷಣದ ಬಗ್ಗೆ ಕೂಡ ಪ್ರಸ್ತಾಪ ಇದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಇದೆ, ವೃತ್ತಿ ಶಿಕ್ಷಣದ ಬಗ್ಗೆ ಇದೆ. ಆಮೇಲೆ ನಮ್ಮ ಸಾಕ್ಷರತೆ ಶಿಕ್ಷಣದ ಬಗ್ಗೆ ಕೂಡ ಇದೆ. ನನಗೆ ಅರ್ಥವಾಗುತ್ತಾ ಇದೆ. ತುಮಕೂರು ಜಿಲ್ಲೆಯಲ್ಲಿ

ಸುಮಾರು ಮೂರು ಕೋಟಿಗಿಂತ ಹೆಚ್ಚಿಗೆ ಹಣವನ್ನು ಸಾಕ್ಷರತಾ ಅಂಧೋಳನಕ್ಕಾಗಿ ಖರ್ಚು ಮಾಡಿದೆ. ಅಲ್ಲಿ ಕಟ್ಟಿರುವಂಥ ಬಾವುಟಗಳು, ಬ್ಯಾನರ್‌ಗಳು, ಪೋಸ್ಟರ್‌ಗಳನ್ನು ನೋಡಿದರೆ ತುಮಕೂರು ಜಿಲ್ಲೆಯಲ್ಲಿ ಮತ್ತೆ ಏನಾದರೂ ಚುನಾವಣೆಯಾಗುತ್ತದೆಯೋ ಎಂದು ಅಚ್ಚರಿಯಾಗುತ್ತದೆ. ನಾನು ಬೇಡ ಎಂದು ಹೇಳುವುದಿಲ್ಲ. ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಂಥ ನನ್ನ ಸ್ನೇಹಿತರಿಗೆ ಇದರಿಂದ ಅಕ್ಷರಜ್ಞಾನದ ಅಂಧೋಳನ ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂಥ ಭಾವನೆಯನ್ನು ಅವರು ಇಟ್ಟುಕೊಂಡರೆ ನನ್ನ ಅಭ್ಯಂತರ ಇಲ್ಲ. ಆದರೆ ನಾನು ಹೇಳಿದ ಹಾಗೆ ಆಧ್ಯತೆಯನ್ನು ಗುರುತಿಸುವುದರಲ್ಲಿ ಈ ದೇಶದ ದುರಂತ ಆಗಿದೆ ಇಲ್ಲವೇ ವಿಫಲತೆ ಎದ್ದು ಕಾಣುತ್ತದೆ. ಮೂರು ಕೋಟಿ ರೂಪಾಯಿ ಖರ್ಚು ಮಾಡಿ ಅಪ್ಪಅಮ್ಮಂದಿರಿಗೆ ಕಲಿಸುತ್ತಿದ್ದಾರೆ. ಆದರೆ ಈ ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲೂ 250 ಶಾಲಾ ಉಪಾಧ್ಯಾಯರ ಕೊರತೆ ಇದೆ. ಅವರು ಹೇಳುತ್ತಾರೆ. ನಮಗೆ ಏಕೆ ಹೇಳಿಕೊಡುತ್ತೀರಿ, ನಾವು ಬಿದ್ದು ಹೋಗುವ ಮರಗಳು. ನಮ್ಮ ಹುಡುಗರಿಗಾದರೂ ಕಲಿಸಿಕೊಡಿ ಎಂದು ಸನ್ಮಾನ್ಯ ಮಂತ್ರಿಗಳು ದಯಮಾಡಿ ಈ ಕಡೆಗೆ ಗಮನ ಕೊಡಬೇಕು. ತುಮಕೂರು ಜಿಲ್ಲೆಯ ಸಾಕ್ಷರತಾ ಅಂಧೋಳನದ ಬಗ್ಗೆ ಮಾನ್ಯ ಮಂತ್ರಿಗಳ ಜಿಲ್ಲೆಯ ಬಗ್ಗೆ ಹೇಳುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ಹಣವನ್ನು ಖರ್ಚು ಮಾಡುವಾಗ ಆಧ್ಯತೆಯನ್ನು ಗುರುತಿಸುವುದರಲ್ಲಿ ನಾವು ಸೋತಿದ್ದೇವೆ. ಅವರು ತುಮಕೂರು ಜಿಲ್ಲೆಯ ಮಂತ್ರಿಗಳು ಇದ್ದಾರೆ. ಮೂರು ಕೋಟಿಗಿಂತ ಹೆಚ್ಚಿಗೆ ಹಣ ಮುದುಕರಿಗೆ ಸಾಕ್ಷರತಾ ಯೋಜನೆಯಿಂದ ಖರ್ಚಾಗುತ್ತಿದೆ.

ಶ್ರೀ ಕೆ.ಎಚ್. ರಂಗನಾಥ್:– ಸಾಕ್ಷರತಾ ಆಂದೋಳನ ಮುದುಕರಿಗೆ ಅಲ್ಲ.

ಶ್ರ ವೈ.ಕೆ. ರಾಮಯ್ಯ:– ಎಲ್ಲರಿಗೆ, ಸಾರ್ವತ್ರಿಕವಾಗಿ ಸಾಕ್ಷರತಾ ಯೋಜನೆಯಲ್ಲಿ ಶಾಲೆಗೆ ಹೋಗದೆ ಇರುವವರಿಗೆ, ವಿದ್ಯೆಯನ್ನು ಕಲಿಸುವಂಥಾದ್ದು. ಅಂತಹವರಿಗೆ ಅಕ್ಷರ ಕಲಿಸುವಂಥ ಒಂದು ಯೋಜನೆ. ನನ್ನ ತಕರಾರು ಏನು ಎಂದರೆ, ಅದಕ್ಕೆ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದರೆ ಅವರ ಕ್ಷೇತ್ರದಲ್ಲಿ 250 ಮೇಷ್ಟ್ರುಗಳು ಇಲ್ಲ. ನನ್ನ ಎರಡು ಹೋಬಳಿಗಳು ಸೇರಿದ ಹಾಗೆ 250 ಶಾಲಾ ಉಪಾಧ್ಯಾಯರ ಕೊರತೆ ಇದೆ.

ಶ್ರೀ ಕೆ.ಎಚ್. ರಂಗಾನಾಥ್:– ನನ್ನ ಕ್ಷೇತ್ರದಲ್ಲೂ ಇಲ್ಲ, ನಿಮ್ಮ ಕ್ಷೇತ್ರದಲ್ಲೂ ಇಲ್ಲ. 224 ಕ್ಷೇತ್ರಗಳಲ್ಲೂ ಇಲ್ಲ. ಹತ್ತು ವರ್ಷಗಳಿಂದ ಇದರ ಬಗ್ಗೆ ನಾವು ಅಶ್ರದ್ಧೆಯಿಂದ ನಡೆದುಕೊಂಡ ಫಲ ಇದು. ಹೈಸ್ಕೂಲ್ ಉಪಾಧ್ಯಾಯರದ್ದೂ ಕೊರತೆ ಇದೆ, ಜೂನಿಯರ್ ಕಾಲೇಜ್, ಫಸ್ಟ್ ಗ್ರೇಡ್ ಕಾಲೇಜ್‌ಗಳದ್ದೂ ಕೊರತೆ ಇದೆ. ಆದರೆ ಇದರಲ್ಲಿ ನಾವು ನೀವು ಎಲ್ಲಾ ಸೇರುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಅಂತಹ ಭ್ರಮೆಯಲ್ಲೇನೂ ಬದುಕುವುದಿಲ್ಲ. ಇದರಲ್ಲಿ ನಮ್ಮದೂ ಕಾಂಟ್ರಿಬ್ಯೂಷನ್ ಇರುತ್ತದೆ. ನಾನು ಶಾಸಕನಾಗಿ ಸೋತ ದಿವಸ 1989ರಲ್ಲಿ ಕುಣಿಗಲ್ ತಾಲ್ಲೂಕಿನಲ್ಲಿ 67 ವೇಕೆನ್ಸಿಗಳು ಇದ್ದವು. ಏಕೆಂದರೆ ಎಲ್ಲಾ ಕಡೆ ಇದೆಯೆಂದು ಹೇಳಿದರೆ ಅದು ಸರಿ ಅಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿಸಬಹುದು.

ಆದರೆ ಇವತ್ತು 250 ಜನಕ್ಕೆ ಬಂದಿದೆ. ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ವೇಕೆನ್ಸಿ ಇದೆಯೆಂದು ಹೇಳುವದೂ ಸರಿಯಲ್ಲವೆಂದು ನನ್ನ ಭಾವನೆ. ನಾನು ಹೇಳುವ ಮಾತು ಸರಿ ಇಲ್ಲವೆನ್ನುವುದಾದರೆ ತಾವು ವೆರಿಫೈ ಮಾಡಬಹುದು. ತುಮಕೂರು ತಾಲ್ಲೂಕಿನ ನನ್ನ ಕ್ಷೇತ್ರಕ್ಕೆ ಸೇರಿದಂಥ ಮತ್ತೆ ಎರಡು ಹೋಬಳಿಗಳು ಇವೆ. ಅಲ್ಲಿಯವರು ನಮಗೆ ಅರ್ಜಿ ಕೊಟ್ಟಿದ್ದಾರೆ, ನಮಗೆ ಒಂದೇ ಶಾಲೆ ಇರುವುದು, ಒಬ್ಬರೇ ಹುಡುಗರು ಆದರೆ ಇಬ್ಬರು ಉಪಾಧ್ಯಾಯರನ್ನು ಕಳುಹಿಸಿದ್ದಾರೆ ಎಂದು. ಈ ಪ್ರದೇಶದಲ್ಲಿ ಹೆಚ್ಚಿಗೆ ಜನರು ಇದ್ದಾರೆ, ಆ ಪ್ರದೇಶದಲ್ಲಿ 250 ಹುದ್ದೆಗಳು ಖಾಲಿ ಇವೆ. ಆದ್ದರಿಂದ ಶಾಲಾ ಉಪಾಧ್ಯಾಯರ ಕೊರತೆಯನ್ನು ನೀಗಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ನೂರು ದಿವಸದ

ಕಾರ್ಯಕ್ರಮ ಹಾಕಿಕೊಂಡು, "No rural school will remain without a teacher"

ಇದನ್ನು ಮಾರ್ಚ್ 26 ರವರೆಗೆ ಕಾಯಿರಿ ಎಂದು ಹೇಳುತ್ತೀರೋ.....

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗಾಗಲೇ ಇದರ ಬಗ್ಗೆ ವಚನ ಕೊಟ್ಟಿದ್ದಾರೆ, ಜಿಲ್ಲೆಗಳಲ್ಲಿ ಆಯ್ಕೆ ಕಾರ್ಯ ಆಗುತ್ತಿದೆ.

ಶ್ರೀ ವೈ.ಕೆ. ರಾಮಯ್ಯ:- ಇದು ಸಾಧ್ಯವೇ ? "No rural hospital or the Health Centre will remain without doctors" ಡಾಕ್ಟರುಗಳು 4 ದಿನ ನಿಧಾನವಾಗಿ ಬಂದರೂ ಬರಲಿ, ಏನಾದರೂ ಮಾಡಿಕೊಳ್ಳುತ್ತೇವೆ. ಈ ನೂರು ದಿನದ ಕಾರ್ಯಕ್ರಮದ ಅಂಗವಾಗಿಯಾದರೂ, ಪ್ರಾಥಮಿಕ ಶಾಲೆಗಳಲ್ಲಿ ಪಾಠ ಹೇಳತಕ್ಕ ಉಪಾಧ್ಯಾಯರನ್ನು ಕೊಡುವಂಥ ಆಶ್ವಾಸನೆ ಕೊಡುತ್ತೀರಾ, ಉಳಿದುದನ್ನು ಆಮೇಲೆ ನೋಡಿಕೊಳ್ಳೋಣ. ಹೇಮಾವತಿಗೆ ಹಣ ಕೊಡದೇ ಇರುವುದು, ಇದಕ್ಕೆಲ್ಲಾ ಮುಂದೆ ಬರೋಣ. ಈ ಹಂತದಲ್ಲಿ ದಯಮಾಡಿ ಉಪಾಧ್ಯಾಯರನ್ನು ಕೊಡಿ. ಇನ್ನು ವೃತ್ತಿ ಶಿಕ್ಷಣದ ಬಗ್ಗೆಯೂ ಕೂಡ ಪ್ರಸ್ತಾಪವಾಗಿದೆ. ಈ ವಿಷಯದಲ್ಲಿ ಬೇಕಾದರೆ ರಂಗನಾಥ್‌ರವರು ನನ್ನನ್ನು ಚೇಡಿಸಲಿ, ನಾನು ಒಪ್ಪುತ್ತೇನೆ. ಈ ವೃತ್ತಿಶಿಕ್ಷಣದ ಬಗ್ಗೆ ಇರತಕ್ಕ ನೀತಿನಿಯಮ, ನಿಮ್ಮ ತತ್ವ, ಇವುಗಳನ್ನು ಸರಿ ಮಾಡುವುದಕ್ಕಾಗಲಿಲ್ಲ. ನಾವು ಹೇಳಿಕೊಂಡು ಕಾಲ ಕಳೆದೆವು, ನಾವು ಮಾಡಲಿಲ್ಲವೆಂದು, ನೀವೂ ಮಾಡಬಾರದು ಎಂದಲ್ಲ. ದಯ ಮಾಡಿ ಹಣ ಕೊಟ್ಟು ಸೀಟು ಕೊಂಡುಕೊಳ್ಳುವುದನ್ನು ತಪ್ಪಿಸುವಂಥ ಪ್ರಯತ್ನ ಮಾಡಿ. ನೀವು ಮಾಡಿದ್ದೀರಾ ಎಂದು ಕೇಳಿದರೆ, ನಾನು "ಹೌದು" ಎಂದು ಹೇಳುತ್ತೇನೆ.

ವೃತ್ತಿಶಿಕ್ಷಣದ ಬಗ್ಗೆ ಮೊಗಮ್ಮಾಗಿ ಈ ಮಾತನ್ನು ಹೇಳುತ್ತೇನೆ. ಇಷ್ಟರವರೆಗೆ ಎಲ್ಲರೂ ದೇಣಿಗೆ ಕೊಟ್ಟಿದ್ದೇವೆ, ನಾವೆಲ್ಲರೂ ಕೂಡ ಕಾರಣಕರ್ತರಾಗಿದ್ದೇವೆ. ಆದರೆ, ದುಷ್ಟರ ಕೈಯಲ್ಲಿ ಸಿಕ್ಕಿರುವಂಥ ಕೆಟ್ಟ ಪರಿಸ್ಥಿತಿ ಏನಿದೆ, ಇದನ್ನು ದಯಮಾಡಿ ನೀಗುವುದಕ್ಕೆ ಪ್ರಯತ್ನ ಮಾಡಿ ಎಂದು ಮೊಗಮ್ಮಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಆಡಳಿತದ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ಸಾರ್ವತ್ರಿಕ ಆಡಳಿತದ ಬಗ್ಗೆ ಇಲ್ಲಿ ಹೇಳಿದ್ದಾರೆ. ಈ ಆಡಳಿತದ ಬಗ್ಗೆ ಮಾತನಾಡುವಾಗ, ಮೊದಲನೇ ಸಾರಿ ನನಗೆ, ಇವತ್ತು ಒಂದು ಕಾಗದ ಬಂದಿದೆ. 4 ಗಂಟೆಗೆ ಒಂದು ಸಭೆ ನಡೆಯುತ್ತದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳ ಅಪ್ಪಣೆ ಮೇರೆಗೆ ಒಂದು ಸಭೆ ನಡೆಯುತ್ತದೆ. ಆ ಸಭೆಗೆ ಕಳುಹಿಸಿರುವಂಥ ಆಹ್ವಾನಪತ್ರದಲ್ಲಿ, Office of the Deputy Cheif Minister, Vidhana Soudha, Bangalore." ಎಂದು ಇದೆ. ಇದು ಅತ್ಯಂತ ಗಂಭೀರವಾದ ಪ್ರಶ್ನೆ. ನಾನು ಸಂಬಂಧಪಟ್ಟವರಲ್ಲಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಉಪ ಮುಖ್ಯಮಂತ್ರಿ ಸ್ಥಾನ ಹೇಗೆ ಬಂತು ? ಈ ಚರ್ಚೆ ಶುರುವಾದ ಮೇಲೆ, ನಾನು ಈ ದೇಶದ ಸಂವಿಧಾನವನ್ನು ಮತ್ತೊಂದು ಸಾರಿ ಓದುವಂಥ ಪ್ರಯತ್ನ ಮಾಡಿದೆ. ಹಿಂದೆ ಪರೀಕ್ಷೆ ಪಾಸ್ ಮಾಡುವುದಕ್ಕೆ ಓದಿದ್ದೆ, ಈಗ ಇದಕ್ಕಾಗಿ ಮತ್ತೊಂದು ಸಾರಿ, ಸಂವಿಧಾನವನ್ನು ಓದುವಂಥ ಕಷ್ಟ ನನಗೆ ಬಂತು. ಸನ್ಮಾನ್ಯ ಅಧ್ಯಕ್ಷರೇ, ಆರ್ಟಿಕಲ್ 164, "The Chief Minister shall be appointed by the Governor and the other Ministers shall be appointed by the Governor on the advise of the Chief Minister, and the Minister shall hold the Office during the pleasure of the Governor."

ಏನು ಮಾಡಬೇಕು ಆತ.

"Before a Minister enters upon his office, the Governor shall administer

to him the oaths of office and of secrecy according to the forms set out for the purpose in the Third Schedule" ಸಂವಿಧಾನದ ಮೂರನೇ ಷೆಡ್ಯೂಲ್‌ನಲ್ಲಿರತಕ್ಕಂಥ ಫ್ರೋಫಾರ್ಮುಗಳಲ್ಲಿ ಮಂತ್ರಿಗಳಿಗೆ ರಾಜ್ಯಪಾಲರು ಪ್ರಮಾಣ ವಚನ ಬೋಧನೆ ಮಾಡಬೇಕು. ಯಾವುದೋ ಒಂದು ಶಾಲೆಯಲ್ಲಿ ವೇಕೆನ್ಸಿ ಕ್ರಿಯೇಟ್ ಆಗದೆ ಪೋಸ್ಟ್ ಕ್ರಿಯೇಟ್ ಆಗದೆ ಇದ್ದುದಕ್ಕೆ ಶಿಕ್ಷಣ ಮಂತ್ರಿಗಳು ವೇಕೆನ್ಸಿ ಕ್ರಿಯೇಟ್ ಆಗಿಲ್ಲ ಎಂದು they have sent back the file. ಯಾರಿಗೆ ಹೊಡೆದುಕೊಳ್ಳಬೇಕೋ ನನಗೆ ಅರ್ಥವಾಗುತ್ತಿಲ್ಲ.

(INTERRUPTIONS)

ಒಬ್ಬ ಶಿಕ್ಷಣ ಮಂತ್ರಿಗಳಿಗೆ ಫೈಲ್ ಬಂದಿದೆ. ನನ್ನ ಕ್ಷೇತ್ರದ ಹೆಬ್ಬೂರು. ಮೇಸ್ಟರ್‌ನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು. ಅವರು ವಾಪಸ್ಸ್ ಹಾಕಿದ್ದಾರೆ. ಅಲ್ಲಿ ವೇಕೆನ್ಸಿ ಇರಲಿಲ್ಲ ಎಂದು. ಪೋಸ್ಟ್ ಅಪ್ರೂವ್ ಆಗಿಲ್ಲ ಎಂದು ಸ್ಯಾಂಕ್ಷನ್ ಪೋಸ್ಟ್ ಇಲ್ಲ ಎಂದು ನಮ್ಮ ಉಪಮುಖ್ಯಮಂತ್ರಿ ಪೋಸ್ಟ್ ಯಾರು ಸ್ಯಾಂಕ್ಷನ್ ಮಾಡಿಕೊಟ್ಟರು ? Vacancy Post approve – sanctioned post. ನಾನು ಏತಕ್ಕೆ ಇಷ್ಟು ಮಾತನಾಡಬೇಕಾಯಿತು. ಅಂದರೆ ಒಬ್ಬ ಪ್ರೈಮರಿ ಶಾಲೆ ಉಪಾಧ್ಯಾಯರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವಂತಹ ಒಂದೇ ಕಾರಣಕ್ಕೆ ಆ ಕಡತ ಹಿಂದಕ್ಕೆ ಕಳುಹಿಸತಕ್ಕಂಥ ಸರ್ಕಾರ, ಇಲ್ಲದ ಹುದ್ದೆಯನ್ನು ಹೇಗೆ ನೀವು ಸೃಷ್ಟಿಮಾಡಿ ತುಂಬಿದ್ದೀರಿ. It is clearly an unconstitutional act. I am telling with all seriousnes. It is not an easy thing.

ಪ್ರಿಸಿಡೆಂಟ್ ಇದೆ ಎಂದು ಹೇಳುತ್ತೀರಿ. ವಿ.ಪಿ.ಸಿಂಗ್ ಪ್ರಧಾನಮಂತ್ರಿಯಾದಾಗ ದೇವಿಲಾಲ್‌ರವರು ಉಪ ಪ್ರಧಾನ ಮಂತ್ರಿ ಆಗಿರಲಿಲ್ಲವೇ ಎನ್ನುವುದೇ ಪ್ರಿಸಿಡೆಂಟ್. There is no comparison. ಅಲ್ಲಿಗೂ ಇಲ್ಲಿಗೂ There is clear distinction. ಅಲ್ಲಿ ಉಪ ಪ್ರಧಾನಮಂತ್ರಿ ಎಂದು ರಾಷ್ಟ್ರಾಧ್ಯಕ್ಷರು ಪ್ರಮಾಣವಚನ ಬೋಧಿಸಲಿಲ್ಲ.

ಶ್ರೀ ಎಂ.ಡಿ. ನಂಜುಂಡಸ್ವಾಮಿ:– ಏನೂ ವ್ಯತ್ಯಾಸ ಇಲ್ಲ. That was an unconstitutional precedent. That's all. ಅಲ್ಲಿ ಮಾಡಿದ್ದೂ ಸರಿಯಲ್ಲ, ಇಲ್ಲಿ ಮಾಡಿದ್ದೂ ಸರಿಯಲ್ಲ.

ಶ್ರೀ ವೈ.ಕೆ. ರಾಮಯ್ಯ:– ನನ್ನ ವಾದ ಏನಿದೆ ಸನ್ಮಾನ್ಯ ಮಂತ್ರಿಗಳೇ ಅದಕ್ಕೂ ಇದಕ್ಕೂ ದಯಮಾಡಿ ಹೋಲಿಕೆ ತರಬೇಡಿ. ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದರು ಅದೂ ತಪ್ಪು ಇದೂ ತಪ್ಪು ಎಂದು. ಅದಕ್ಕೂ ಇದಕ್ಕೂ ಹೋಲಿಕೆ ಇಲ್ಲ.

Prof M.D. Nanjunda Swamy:– May be, Mr. Devi lal knew the Constitution better. That is why inspite of the President telling 'Upapradhani', he was telling 'Pradhani'. ಅವರು ಎರಡು ಮೂರು ಸಾರಿ ಉಪ ಪ್ರಧಾನಮಂತ್ರಿ ಉಪ ಪ್ರಧಾನಮಂತ್ರಿ ಎಂದು ಪ್ರಮಾಣವಚನ ಸ್ವೀಕಾರ ಮಾಡಿದರು. So, Mr. Devilal knew the Constitution better.

ಶ್ರೀ ವೈ.ಕೆ. ರಾಮಯ್ಯ:– ಯಾರೇ ಮುಖ್ಯಮಂತ್ರಿಗಳಾಗಲಿ ನಾವು ಆಗುವುದಿಲ್ಲ. ಅಲ್ಲಿ ದೇವಿಲಾಲರು ಉಪ ಪ್ರಧಾನಮಂತ್ರಿ ಎಂದು ಪ್ರಮಾಣ ವಚನ ಬೋಧಿಸದಿದ್ದರೂ ಅವರೇ ಹೇಳಿಕೊಂಡರು. ಆದರೆ ಇಲ್ಲಿ ಹಾಗೆ ಆಗಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್:– 1983ರಲ್ಲಿ ಹೆಗಡೆಯವರು ಅಧಿಕಾರಕ್ಕೆ ಬಂದಾಗ ಹೆಗಡೆಯವರಿಗೂ

ಮತ್ತು ಬಂಗಾರಪ್ಪನವರಿಗೂ ಸ್ವಲ್ಪ ವ್ಯಾಜ್ಯ ಆದಾಗ ಹೆಗಡೆಯವರು ಬಂಗಾರಪ್ಪನವರನ್ನು ಕೇಳಿದರು ನಾನು ನಿಮಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡುತ್ತೇನೆ ಎಂದು.

Sri Y.K. RAMAIH:– I am thinking of going on a write for the purpose of academic interest. For academic purpose I would like to have a clear answer from the Government.

ಶ್ರೀ ಕೆ.ಎಚ್. ರಂಗನಾಥ್:– ಮೊದಲಿನಿಂದ ಅದು ಬಂದಿದ್ದರಿಂದ ಹಾಗಾಗಿದೆ ಆಮೇಲೆ ಅದನ್ನು ಪ್ರಿಸಿಡೆಂಟ್ ಎಂದು ಕರೆಯುತ್ತಾರೆ. ತಪ್ಪುಗಳು ಎಲ್ಲಿ ಆಗಿದೆ ಎಂದರೆ, ಅದು ಮಾನ್ಯ ನಂಜುಂಡಸ್ವಾಮಿಯವರಿಗೆ ಗೊತ್ತು. 1952ರಲ್ಲಿ ಬಲ್ಸಾರ್ ಕ್ಷೇತ್ರದಿಂದ ಮುರಾರ್ಜಿ ದೇಸಾಯಿಯವರು ಸೋತುಬಿಟ್ಟರು. ಮೊದಲನೇ ಚುನಾವಣೆ 52ರಲ್ಲಿ. He was defeated by Amul Desai, a Socialist candidate. ದಿವಂಗತ ನೆಹರೂರವರು, ಇಲ್ಲ ನೀವು ಸೋತಿದ್ದರೂ ಚಿಂತೆ ಇಲ್ಲ. ನೀವು ಮುಖ್ಯಮಂತ್ರಿ ಆಗಿ ಎಂದು ಹೇಳಿದರು, ಮುಖ್ಯಮಂತ್ರಿಯಾದರೂ ಹೀಗೆ ರಾಜ್ಯಾಂಗವನ್ನು ಜಾರಿಗೆ ಕೊಡತಕ್ಕಂಥ ಸಮಯದಲ್ಲೇ ನಾವು ದಾರಿ ತಪ್ಪುತ್ತಾ ಬಂದಿದ್ದೇವೆ. ಹೇಳಬಹುದಾಗಿತ್ತು. ನೆಹರೂರವರು ಕೇಳಿದಾಗ, Thank you very much ನಾನು ಸೋತು ಬಿಟ್ಟಿದ್ದೇನೆ. ಅದು ಸರಿಯಾಗುವುದಿಲ್ಲ. ಗೆದ್ದು ಬಂದು ನಂತರ ಆಗುತ್ತೇನೆ ಎಂದಿದ್ದರೆ ಆಗುತ್ತಿತ್ತು. ಇಲ್ಲಿ ನಮ್ಮ ನಿಜಲಿಂಗಪ್ಪನವರು ಅದನ್ನು ಅನುಸರಿಸಿದರು. 1962ರಲ್ಲಿ ನಿಜಲಿಂಗಪ್ಪನವರು ಸೋತಾಗ ಅವರು ಮುಖ್ಯ ಮಂತ್ರಿಯಾಗಲಿಲ್ಲ. ಅವರು ಆಗಬಹುದಾಗಿತ್ತು. ಆದರೆ ಆಗಲಿಲ್ಲ.

Prof. M.D. Nanjundaswamy:– There is a provision in the Constitution that one need not be.....

SRI K.H. RANGANATH:– That provision was used as early as that, Late Dr. Ambedkar said, it is a rape on the Constitution.

ಅದು ರಾಜ್ಯಾಂಗದಲ್ಲಿ ಇದೆ ಎಂದು ಮಾಡತಕ್ಕಂಥಾದ್ದಲ್ಲ. ಅವಕಾಶ ಇದೆ ಎಂದು ತಕ್ಷಣವೇ ಮಾಡುವುದೇ ? ಅನಿವಾರ್ಯ ಸಂದರ್ಭ ಬಂದಾಗ ಮಾಡಬಹುದಾಗಿತ್ತು. ನಮ್ಮ ರಾಜ್ಯದಲ್ಲೇ ಅಲ್ಲ ಮಹಾರಾಷ್ಟ್ರದಲ್ಲೂ ಉಪ ಮುಖ್ಯಮಂತ್ರಿಗಳು ಇದ್ದರು. ಬೇರೆ ರಾಜ್ಯಗಳಲ್ಲೂ ಉಪ ಮಂತ್ರಿಗಳು ಇದ್ದರು. ಎಸ್.ಪಿ.ಡಿ. ಸರ್ಕಾರಗಳು ಅಷ್ಟರಲ್ಲಿ ಬಂದಾಗ ಉಪಮುಖ್ಯಮಂತ್ರಿಗಳಿದ್ದರು. ಹೀಗಾಗಿ ಇದು ಒಂದು ಪ್ರಿಸಿಡೆಂಟ್ ಆಗುತ್ತಾ ಬಂದಿದೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಹೆಚ್. ರಂಗನಾಥ್:– ತಾವು ಏನು ಹೇಳುತ್ತಿದ್ದೀರಿ ? ಅದು ಕಾನ್ಸಿಟ್ಯೂಷನ್‌ನಲ್ಲಿ ಇಲ್ಲ ಎಂದು ಅದನ್ನು ನಾವು ಒಪ್ಪಿಕೊಳ್ಳಬೇಕಾದುದೇನೂ ಇಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮುರಾರ್ಜಿದೇಸಾಯಿಯವರು ಸೋತಾಗಲೂ ಕೂಡ ಮಂತ್ರಿಗಳಾದರು ಎಂದು ನಮ್ಮ ಹಿರಿಯರು ನನ್ನ ಗಮನಕ್ಕೆ ತಂದಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:– ರಾಜಗೋಪಾಲಚಾರಿಯವರು, ಗೌರ್ನರ್ ಜನರಲ್ ಆಗಿದ್ದರು. ಆದ ನಂತರ ಮದ್ರಾಸ್‌ನಲ್ಲಿ ಬಂದು ಮುಖ್ಯಮಂತ್ರಿಗಳಾದರು. ಹೀಗೆ ಮಾಡುತ್ತಾ ಬಂದಿದ್ದೇವೆ. ಹೀಗೆ ಮಾಡಿಯೇ ರಾಜ್ಯಾಂಗವನ್ನು ಲೇವಡಿ ಮಾಡುವ ಪರಿಸ್ಥಿತಿಗೆ ತಂದಿಟ್ಟಿರುವುದು.

ಶ್ರೀ ವೈ.ಕೆ. ರಾಮಯ್ಯ:– ಸೋತ ಮೇಲೆ ಅವರು ಮಂತ್ರಿಯಾದರು. ಬಹುಶಃ ಇದು ರಾಜಕೀಯ

ನೈತಿಕ ದೃಷ್ಟಿಯಿಂದ ತಪ್ಪು ಇರಬಹುದು. ಅದನ್ನು ನಾನು ಒಪ್ಪುತ್ತೇನೆ. ಮುಂದೆ ಕೃಷ್ಣಾ ಅವರ ಬಗ್ಗೆ ಹೇಳುವಾಗ ಅದನ್ನು ಹೇಳುತ್ತೇನೆ. ನಾನು ಇನ್ನೂ ಕಾನ್ಸಿಟ್ಯೂಷನಲ್ಲೇ ಇದ್ದೇನೆ. ನೀತಿಯ ದೃಷ್ಟಿಯಿಂದ ರಾಜಕೀಯ ತಾತ್ವಿಕ ಹಿನ್ನೆಲೆ ದೃಷ್ಟಿಯಿಂದ ಸೋತಂಥವರು ಮಂತ್ರಿಗಳಾಗುವುದಕ್ಕೆ ಒಪ್ಪಿಕೊಳ್ಳುವುದು ಸರಿಯಾದ ಮಾರ್ಗ ಅಲ್ಲ. ನಾನು ಅದನ್ನು ಒಪ್ಪಿದ್ದೇನೆ. ನಾನು ಹೇಳುತ್ತಿರುವುದು, ಸಂವಿಧಾನದ ಚೌಕಟ್ಟಿನಲ್ಲಿ ಬರದೇ ಇರುವಂಥ ಕೆಲಸವನ್ನು ಮಾಡಿ, ಇವತ್ತು ಅವರು ಮಾಡಿದರು, ಇವರು ಮಾಡಿದರು, ಇನ್ನೆಲ್ಲೋ ಮಾಡಿದರು, This is not an argument at all. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ನಾನು ಅವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. It is very clear that it is a violation of the Indian Constitution. You may agree or may not agree. Do you know who are all the parties? The Chief Minister, your Chief Secretary and also the Governor.

ನಿಮ್ಮ ಪ್ರಮಾಣ ವಚನ ಸ್ವೀಕಾರ ಮಾಡಲಿಕ್ಕೆ ಫಾರಂ ಫಿಲಪ್ ಮಾಡಿದ್ದಾರಲ್ಲಾ ನಿಮ್ಮ ಮುಖ್ಯ ಕಾರ್ಯದರ್ಶಿಗಳು, ಅವರು ಈ ಸಂವಿಧಾನದ ಅಪಚಾರಕ್ಕೆ ಬದ್ಧರು. ಉಪ ಮುಖ್ಯಮಂತ್ರಿಗಳನ್ನಾಗಿ ಅಪಾಯಿಂಟ್ ಮಾಡಿದ್ದೇನೆಂದು ಸಂದೇಶವನ್ನು ಕಳುಹಿಸಿದಂಥ ನಿಮ್ಮ ಮುಖ್ಯಮಂತ್ರಿಗಳು ಇದಕ್ಕೆ ಹೊಣೆಗಾರರು. ಸಂವಿಧಾನದಲ್ಲಿ ಅವಕಾಶ ಇಲ್ಲದೇ ಇರುವಂಥ ಪ್ರಮಾಣ ವಚನವನ್ನು ಬೋಧನೆ ಮಾಡಿದಂಥ ನಿಮ್ಮ ಗೌರ್ನರ್ ಕೂಡ ಈ ಕಾನ್ಸಿಟ್ಯೂಷನ್ ಅಪಚಾರಕ್ಕೆ ಬದ್ಧರು. Tell me what you are going to do now? ಈ ಸಂವಿಧಾನಕ್ಕೆ ಬಗೆದಿರುವಂಥ ಅಪಚಾರ ಏನಿದೆ ಅದಕ್ಕೆ ಸಂಬಂಧಪಟ್ಟ ಈ 3 ಜನಗಳೂ ಕೂಡ ಇದನ್ನು ಈಗಲಾದರೂ ಸರಿ ಮಾಡಿಕೊಳ್ಳುವಂಥ ಪ್ರಯತ್ನ ಮಾಡಬೇಕು.

ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರನ್ನು ಉಪಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಾರೆ. ನಮ್ಮ ಹಳ್ಳಿಗಳ ಕಡೆಗಳಲ್ಲಿ ಉಪಮಂತ್ರಿಯೆಂದು ಕರೆಯುತ್ತಾರೆ. ಇಷ್ಟರವರೆಗೆ ಉಪಮುಖ್ಯಮಂತ್ರಿಗಳನ್ನು ಮಾಡಿಲ್ಲವಲ್ಲ? ಈಗ ಏಕೆ ಮಾಡಿದರು ಎಂದು ಕೇಳುತ್ತಾರೆ. ಅವರಿಗೆ ಉಪಮುಖ್ಯಮಂತ್ರಿಗಳಾಗಿ ಮಾಡಿದ್ದಾರೆ ಎಂದು ಹೇಳಿದ್ದೇನೆ. ಅವರನ್ನು ಉಪಮುಖ್ಯಮಂತ್ರಿಯಾಗಿ, ಸಂವಿಧಾನದಲ್ಲಿ ಅವಕಾಶ ಇಲ್ಲದಿರುವಂಥ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿಸಿದಂಥ ಇವರೆಲ್ಲರೂ ಸೇರಿಕೊಂಡು ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ. ನಾನು ಲಾ ಡಿಗ್ರಿಯನ್ನು ಧಾರವಾಡದ ಕಾಲೇಜಿನಲ್ಲಿ ಮಾಡಿದವನು. But, Sri Krishna he has studied the Constitution Law in Teksos, if I am correct. That was his special subject if my memory is not wrong. ಸನ್ಮಾನ್ಯ ಕೃಷ್ಣಾರವರು ಸಂವಿಧಾನವನ್ನು ಅಮೇರಿಕಾದ ಟೆಕ್ಸಾಸ್ ವಿಶ್ವವಿದ್ಯಾನಿಲಯದಲ್ಲಿ ಓದಿದಂಥ ಪರಿಣಿತರು. ಇಂಥ ಪರಿಣಿತರು ಸಂವಿಧಾನ ಬಾಹಿರವಾದಂಥ ನಡವಳಿಕೆಗೆ, ಸಂವಿಧಾನಕ್ಕೆ ಅಪಚಾರ ಮಾಡುವಂಥ ಈ ನಡವಳಿಕೆಗೆ ಭಾಗಸ್ಥರಾಗುವುದಕ್ಕೆ ಒಪ್ಪಬಾರದಾಗಿತ್ತು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸಂವಿಧಾನವನ್ನು ಬೋಧನೆ ಮಾಡುವಂಥ ಸಂದರ್ಭದಲ್ಲಿ ಪ್ರೊಫೆಸರುಗಳೇ ಪ್ರಿಯಾರಿಟಿ ಆಗಿ ಸ್ಟಡಿ ಮಾಡಿಕೊಂಡು ಬರುತ್ತಾರೆ. ಆಗಲೂ ಕೂಡ ಇಂಡಿಯನ್ ಕಾನ್ಸಿಟ್ಯೂಷನ್ ಬರುತ್ತದೆ. ನಾನು ಸ್ವಲ್ಪ ಓದಿಕೊಂಡೇ ಹೇಳುತ್ತಿದ್ದೇನೆ. ಲಘುವಾಗಿ ಹೇಳುತ್ತಿಲ್ಲ.

DR. Y. NAGAPPA:– Ours is a democratic set up. That Constitution is different from this.

SRI Y.K. RAMAIAH:– It is true. At the same time, when a person has studied the Constitutional Law for two years, there will be constitutional

comparative studies. So, When there is comparative Studies necessarily Indian Constitution will also be included in that ಆದ್ದರಿಂದ ಈ ಉಪ ಮುಖ್ಯಮಂತ್ರಿಗಳಾದ ಹುದ್ದೆಯನ್ನು ಇವರು ಸೃಷ್ಟಿ ಮಾಡದೇ ಸಂವಿಧಾನದ ಅವಕಾಶ ಇಲ್ಲದೇ ನೀವು ಉಪ ಮುಖ್ಯಮಂತ್ರಿಗಳು ಆಗಿ ಎಂದು ಕರೆದಂಥ ಸಂದರ್ಭದಲ್ಲಿ ಸಂವಿಧಾನದ ಎಕ್ಸ್‌ಪರ್ಟ್, ಸಂವಿಧಾನವನ್ನು ಸಂಪೂರ್ಣವಾಗಿ ಓದಿಕೊಂಡು, ಅದರ ಪೃಕೃತೆ ಮತ್ತು ಗಂಭೀರತೆಯನ್ನು ಬಲ್ಲಂಥ ಶ್ರೀ ಕೃಷ್ಣರವರು ಇದನ್ನು ತಿರಸ್ಕರಿಸಬೇಕಾಗಿತ್ತು ಎಂದು ನನ್ನ ಭಾವನೆಯಾಗಿದೆ. ಆದರೆ ಅವರೂ ಕೂಡ ಇದನ್ನು ಮಾಡಲೇ ಹೋದುದರಿಂದ ಈ ಸಂವಿಧಾನದ ಅಪಚಾರದಲ್ಲಿ ಅವರೂ ಕೂಡ ಭಾಗಿ ಎಂದು ನಾನು ವಿಧಿ ಇಲ್ಲದೇ ನಾನು ಹೇಳಬೇಕಾಗುತ್ತದೆ. ಸಂವಿಧಾನದಲ್ಲಿ ಅವಕಾಶವಿಲ್ಲ. ಆದರೂ ಮಾಡಿಬಿಟ್ಟಿದ್ದಾರೆ.

ಶ್ರೀ ಕೆ. ಶಿವಮೂರ್ತಿ:- ತಾವುಗಳು ಉಪಮುಖ್ಯಮಂತ್ರಿಯವರ ಬಗ್ಗೆ ಕಾನ್ಸಿಟ್ಯೂಶನ್‌ಗೆ ಸಮರ್ಥನೆ ಮಾಡುತ್ತಿದ್ದೀರೋ ಅಥವಾ ಪೊಲಿಟಿಕಲ್ ಪ್ರೊವೋಕೇಶನ್ ಮಾಡುತ್ತಿದ್ದೀರೊ ?

ಶ್ರೀ ವೈ.ಕೆ. ರಾಮಯ್ಯ:- ನನಗೆ ಅಂಥ ಒಂದು ಹುಚ್ಚು ಇಲ್ಲ. ನಿಮ್ಮ ರಾಜಕಾರಣ ನನಗೆ ಏಕೆ ? ಒಂದು ವೇಳೆ ನಿಮ್ಮ ಸರಕಾರ ಹೊರಟು ಹೋದರೆ ಇನ್ನೊಬ್ಬರು ಮುಖ್ಯಮಂತ್ರಿಯಾಗುತ್ತೀರಿ.

SRI K. SHIVAMURTHY;- I want to kow your intention.

ಶ್ರೀ ವೈ.ಕೆ. ರಾಮಯ್ಯ:- ನನ್ನ ಆಸಕ್ತಿ ಅಷ್ಟೇನೆ. My intention is only limited. There should not be Election. ನಾನು ಈಗ ತಾನೆ ಚುನಾವಣೆ ಮಾಡಿಕೊಂಡು ಬಂದಿದ್ದೇನೆ. ಚುನಾವಣೆ ಅಂದರೆ ನನಗೆ ಚಳಿ ಜ್ವರ ಬರುತ್ತದೆ. ಆದ್ದರಿಂದ ಆ ಒಂದು ಪೊಲಿಟಿಕಲ್ ಪ್ರೊವೇಕೇಶನ್ ಇತ್ಯಾದಿ ನನಗೆ ಬೇಡ. ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಮಾಡಿ, ಸಂವಿಧಾನಕ್ಕೆ ಅಪಚಾರ ಮಾಡಿ ಇಷ್ಟೆಲ್ಲಾ ಮಾಡಿದರು ಎಂದು ಇಟ್ಟುಕೊಳ್ಳಿ. ಇದಕ್ಕೆ ವಿಶೇಷವಾದಂಥ ಯಾವುದೇ ಸವಲತ್ತು ಇಲ್ಲ ಎಂದು ಕಾನೂನು ಮಂತ್ರಿಯವರು ಹೇಳುತ್ತಾರೆ. ಯಾರಾದರೂ ಒಬ್ಬ ಹುಡುಗ ಕದ್ದು ಮದುವೆ ಆದರೆ, ಹುಡುಗಿ ಚೆನ್ನಾಗಿ ಇಲ್ಲದಿದ್ದರೂ ಹೇಳುತ್ತಾರೆ, ಜಾತಿ ಕೆಟ್ಟರೂ ಕೂಡ ಸುಖ ಪಡಬೇಕೆಂದು ಹೇಳುತ್ತಾರೆ. ಹೀಗೆ ನೀವುಗಳು ಸಂವಿಧಾನಕ್ಕೆ ವಿರುದ್ಧವಾಗಿ ಅವರನ್ನು ತಂದು ಕೂಡಿಸಿದರೂ ಕೂಡ, ಅವರು ನೀರಾವರಿ ಮತ್ತು ವಿದ್ಯುತ್ ಮಂತ್ರಿಗಳಲ್ಲದೆ ಏನೇನೂ ಇಲ್ಲ. ಅಧಿಕಾರವನ್ನು ಅನುಭವಿಸುವ ದೃಷ್ಟಿಯಿಂದ ಸವಲತ್ತನ್ನು ಸವಿಯುವ ದೃಷ್ಟಿಯಿಂದ ಮತ್ತು ನಿಮ್ಮ ಕಾನೂನಿನ ದೃಷ್ಟಿಯಿಂದ ಅವರು ಸನ್ಮಾನ್ಯ ನೀರಾವರಿ ಮತ್ತು ವಿದ್ಯುತ್ ಸಚಿವರು, ಅದಕ್ಕಿಂತ ಇನ್ನೇನೇ ಇಲ್ಲ. ಮತ್ಯಾಕೆ ? ದುಡ್ಡಿಲ್ಲ ಕಾಸಿಲ್ಲ ಸಂಪತ್ ಅಯ್ಯಂಗಾರ್, ನೋಡೋಕೆ ಬಹಳ ಅಸಹ್ಯವಾಗಿರ್ತಾನೆ. ಸುಂದರರಾಜ ಅಯ್ಯಂಗಾರ್, ಚೋಟುದ್ದ ಜಡೆ ಇರುತ್ತದೆ ನಾಗವೇಣಿ, ಏಕಿ ಕೆಲಸ. ಇಷ್ಟೆಲ್ಲ ಮಾಡಿ ಅವರಿಗೆ ಅಧಿಕಾರವಾದರೂ ಕೊಡಿ, ಒಂದು ಸೈರನ್ ಊದುವ ಕಾರ್, ಎಕಸ್ಟ್ರಾ ಸೆಕ್ರೆಟೆರಿಯೇಟ್. ಆದ್ದರಿಂದ ಸಂವಿಧಾನದ ಅಪಚಾರ ಮಾಡಿ ಸೃಷ್ಟಿಸಿದಂತಹ ಈ ಸ್ಥಾನ ಬಹುಶಃ ರಾಜಕೀಯದ ಉದ್ದೇಶಕ್ಕೆಂದು ನನ್ನ ಭಾವನೆ. ಅದೂ ಸಾಧನೆಯಾಗುತ್ತಿಲ್ಲ, ಸನ್ಮಾನ್ಯ ರಂಗನಾಥ್ ಗಮನಕ್ಕೆ ತರಬಯಸುತ್ತೇನೆ, ನಿನ್ನೆ ಮೊನ್ನೆಯಿಂದ ಆಗಿರುವ ವಿದ್ಯಮಾನ ನೋಡಿದರೆ ಯಾವ ರಾಜಕೀಯ ಸಾಧನೆಗಾಗಿ ಮುಖ್ಯಮಂತ್ರಿಗಳು ಅದನ್ನು ಸೃಷ್ಟಿ ಮಾಡಿದಿರೋ ಆ ಉದ್ದೇಶವೂ ಸಾಧನೆಯಾಗುವ ಪರಿಸ್ಥಿತಿ ಇಲ್ಲ. ಬೊಮ್ಮಾಯಿಯವರೂ ಈ ತಪ್ಪೇ ಮಾಡಿಕೊಂಡರು. ಆದರೂ ಆ ಸರ್ಕಾರ 6 ತಿಂಗಳು ಉಳಿಯಲಿಲ್ಲ. ಆದ್ದರಿಂದ ಈ ಹುದ್ದೆ ಸೃಷ್ಟಿಸಿದ್ದರಿಂದ ಅವರಿಗೆ ಅನುಕೂಲ ಇಲ್ಲ ನಿಮಗೂ ಅನುಕೂಲವಿಲ್ಲ ಆದರೂ ಸಂವಿಧಾನದ ಅಪಚಾರವಂತೂ ಆಯಿತು, ಇದನ್ನು ಮಾಡಿದವರ ಬುದ್ಧಿವಂತಿಕೆಗೆ ಬಿಡುತ್ತೇನೆ. ಇನ್ನು ಆಡಳಿತದ ಚುಕ್ಕಾಣಿ ಹಿಡಿದಿರುವ ಇವರ ಮಂತ್ರಿಮಂಡಲ. ಯಾವ ಉದ್ದೇಶ ಸಾಧನೆಗಾಗಿ ಪಕ್ಷದಲ್ಲಿ

ಒಗ್ಗಟ್ಟು ತರಬೇಕೆಂದು ಅಥವಾ ಭಿನ್ನಮತೀಯ ವಾತಾವರಣ ಹತ್ತಿಕ್ಕಬೇಕೆಂದೋ ಈ ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿ ಮಾಡಿದರೋ ಬಹುಶಃ ಆ ಉದ್ದೇಶ ಸಾಧನೆಯಾಗಲಿಲ್ಲ ಎಂದು ನನ್ನ ನೋವು. ಈಗಾಗಲೇ ಪ್ರಾರಂಭೋತ್ಸವ ನಡೆದಿದೆ. ಯಾವುದರದ್ದು? ಭಿನ್ನಮತದ ಪ್ರಾರಂಭೋತ್ಸವ. ಅದನ್ನು ನೀವು ಭಿನ್ನಮತ ಅಂತಿರೋ ಅತೃಪ್ತರೋ ಸಮಾನ ಮನಸ್ಕರು ಅಂತ ಕರೀತಿರೋ ನನಗೆ ಗೊತ್ತಿಲ್ಲ.

ಶ್ರೀ ಆರ್. ದಯಾನಂದರಾವ್:- ರಾಮಯ್ಯನವರೇ ಇದು ಪೊಲಿಟಿಕಲ್ ಸ್ಪೀಚೋ ? ಗವರ್ನರ್ ಅಡ್ರೆಸ್ ಮೇಲೆ ಸ್ಪೀಚೋ ? ನಮಗೆ ಅರ್ಥವಾಗುವುದಿಲ್ಲ. ಎಲ್ಲೋ ಗೋಡೆ ಮೇಲೋ ರಸ್ತೆ ಬದೀಲೂ ನಿಂತುಕೊಂಡು ಭಾಷಣ ಮಾಡಿದ ಹಾಗೆ ಇದೆಯಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಬೆಳಿಗ್ಗೆಯಿಂದ ಇದು ಹೀಗೆ ನಡೀತಿದೆ. ಎರಡು ಮೂರು ದಿವಸದಿಂದಾನೂ ಹೀಗೆ ನಡೆದಿರಬೇಕು. ರಾಜ್ಯಪಾಲರ ಭಾಷಣದ ಮೇಲೆ ಮುಖ್ಯವಾಗಿ ಯಾರೂ ಮಾತನಾಡಿದ ಹಾಗೆ ಕಾಣುವುದಿಲ್ಲ, ಇದು ಒಂದು ರೀತಿಯ ಸರ್ವಪಕ್ಷದ ರಾಜಕೀಯ ವೇದಿಕೆ. ಇದಾಗದ ಹಾಗೆ ನೋಡಿಕೊಳ್ಳಬೇಕು.

ಶ್ರೀ ವೈ.ಕೆ.ರಾಮಯ್ಯ:- ನಾನು ಪಕ್ಷದ ವಿಚಾರ ಚರ್ಚೆ ಮಾಡುತ್ತಿಲ್ಲ, ಯಾವುದೋ ಹೊಸ ಆಡಳಿತ ಸಂಸ್ಕೃತಿ ತರುತ್ತೇನೆ ಅಂತ ಹೇಳುತ್ತಿದ್ದಾರಲ್ಲ, ಆ ಆಡಳಿತದಲ್ಲಿ ಮಂತ್ರಿಗಳ ಪಾತ್ರ ಇದೆ ಅದನ್ನು ಹೇಳುತ್ತಿದ್ದೇನೆ. ನಾನು ಭಿನ್ನಮತೀಯರು ಅತೃಪ್ತರ ಆ ವಿಷಯಕ್ಕೆ ಹೋಗುತ್ತಿಲ್ಲ. ಆದರೆ ನಾವೆಲ್ಲ ಭಿನ್ನಮತ ಮಾಡೋವಾಗ ಈ ದೇಶದ ದೊಡ್ಡ ಬರಹಗಾರರು ನಮ್ಮನ್ನು ರೆಕರ್ಸ್ ಎಂದು ಕರೆದರು, ಮನೆ ಮುರುಕರು ಎಂದು ಕರೆದರು.

ಭಿನ್ನಮತೀಯರೋ, ಅತೃಪ್ತರೋ, ಸಮಾನ ಮನಸ್ಕರೋ ನನಗೆ ಗೊತ್ತಿಲ್ಲ. ಆದರೆ ನಮ್ಮನ್ನು ಕರೆದಿದ್ದು ಸನ್ಮಾನ್ಯ ಅರುಣ್ ಶೌರಿಯುವರು. ಅವರು ದೊಡ್ಡ ಸಂಪಾದಕೀಯವನ್ನು ಬರೆದು, ರೆಕರ್ಸ್, ಮನೆ ಮುರುಕರು, ಎಂದು ಬರೆದರು. ಅವರು ಏನಾದರೂ ಕರೆದುಕೊಂಡು ಹೋಗಲಿ, ಯಾರು ಏನಾದರೂ ಕರೆದುಕೊಂಡು ಹೋಗಲಿ, ನನ್ನ ಮಾತಿನ ಉದ್ದೇಶವಿಷ್ಟೆ ನಮ್ಮ ಸಂವಿಧಾನಕ್ಕೆ ವಿರುದ್ಧ ವಾದಂಥ ನಡವಳಿಕೆ ನಡೆದಿರುವುದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಯಾವ ಉದ್ದೇಶದಿಂದ ಮಾಡಿದರು ಎನ್ನತಕ್ಕಂಥದ್ದನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಯಾವ ಉದ್ದೇಶದಿಂದ ಇದನ್ನು ನೀವು ಮಾಡಿದಿರೋ ಅದೂ ಕೂಡ ನಿಮ್ಮ ಉದ್ದೇಶ ಸಾಧನೆಯಾಗಿಲ್ಲ. ಭಿನ್ನಮತವನ್ನು ತಡೆಯುವುದಕ್ಕೆ ನಿಮ್ಮಿಂದ ಆಗಿಲ್ಲ ಎನ್ನತಕ್ಕಂಥ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ ಆಡಳಿತ ಪಕ್ಷದ ನಾಯಕರು ಇದ್ದಾರೆ, ಇಲ್ಲಿ ವಿರೋಧ ಪಕ್ಷದ ನಾಯಕರೂ ಇದ್ದಾರೆ. ದೆಹಲಿಯಲ್ಲಿ ಮುಖ್ಯಮಂತ್ರಿಗಳನ್ನು ಪತ್ರಿಕೆಯವರು ಕೇಳಿದಾಗ ಯಾವಾಗಲೂ ಹತ್ತು-ಹದಿನೈದು ಜನರು ಖಾಯಂ ಆಗಿ ಇರುತ್ತಾರೆ ಎಂದು ಹೇಳಿದ್ದಾರೆ. ಆ ರೀತಿ ಆಗುವುದಾದರೆ ಸದನದ ಅಧ್ಯಕ್ಷರ ಮೂಲಕ ಭಿನ್ನಮತೀಯ ನಾಯಕರಿಗೂ ಕೂಡ ಒಂದು ಮನ್ನಣೆಯನ್ನು ಕೊಟ್ಟು ಅವರಿಗೂ ಒಂದು ಕಾರು, ಒಂದು ಬಂಗಲೆಯನ್ನು ಕೊಟ್ಟು ಬಿಡೋಣ ಎನ್ನುವ ಯೋಚನೆ ಮಾಡೋಣ. Let us recognise. ರೆಕಗ್ನೈಸ್ ಕೂಡ ಬೇಕಾಗಿಲ್ಲ. ಇಲ್ಲದ ಉಪ ಮುಖ್ಯಮಂತ್ರಿಯನ್ನು ಮಾಡಿದಂಥ ನಿಮಗೆ ಇಲ್ಲದ ಭಿನ್ನಮತೀಯ ನಾಯಕರನ್ನಾಗಿ ಅವರಿಗೂ ಮಾಡಿ, ಅವರಿಗೂ ಸವಲತ್ತುಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಮಾಡಬಹುದು. ನಾನು ನನ್ನ ಮಿತ್ರರು ಹೇಳಿದಹಾಗೆ ರಾಜಕೀಯ ಭಾಷಣ, ಪಕ್ಷದ ಭಾಷಣವಲ್ಲ ನಾನು ಮಾಡುತ್ತಿರುವುದು. ಇರುವಂಥ ವಸ್ತು ಸ್ಥಿತಿಯನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ನೀವು ಉಪಮುಖ್ಯಮಂತ್ರಿ ಹುದ್ದೆಯನ್ನು ಮಾಡುವಾಗ ನೀವು ಸಂವಿಧಾನಬದ್ಧರಾಗಿದ್ದೀರಿ.

ಇವತ್ತು ನೀವು ಅತೃಪ್ತರೋ ರೆಕರ್ಸ್ ಎಂದು ಹೇಳಿ ಅರುಣ್ ಶೌರಿಯವರು ಹೇಳಿದ್ದು ಇಂಥದ್ದು. ಎಂಥದ್ದೋ ಒಂದು ಗುಂಪು ಎಂದು ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಆ ಗುಂಪಿನ ನಾಯಕರಿಗೂ ಕೂಡ ಒಂದು ಸ್ಟೇಟಸ್‌ನ್ನು ಕೊಟ್ಟು ಒಂದು ಕಾರು, ಒಂದು ಬಂಗಲೆಯನ್ನು ಏತಕ್ಕೆ ಕೊಡಬಾರದು ? ಹಾಗೆ ಮಾಡುವುದರಿಂದ ಭಿನ್ನಮತ ಅಥವಾ ಅತೃಪ್ತಿ ಕಡಿಮೆಯಾಗಬಹುದು ಎಂದು ನನ್ನ ಭಾವನೆ. ಮಂತ್ರಿಮಂಡಲದಲ್ಲಿ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದು 40 ಜನ ಇದ್ದಾರೋ, 50 ಜನ ಇದ್ದಾರೋ ಗಜಗಾತ್ರದ್ದೋ, ಏರ್ ಬಸ್ಸೋ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಅವರೇ ಬಂದಿದ್ದುದರಿಂದ ಒಳ್ಳೆಯದಾಯಿತು. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನೋಡಿದರೆ ಅಯ್ಯೋ ಪಾಪ ಅನಿಸುತ್ತದೆ. ಕೆಲಸ ಮಾಡುವುದಕ್ಕೂ ಪುರುಸೊತ್ತು ಇಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೇ, ಸಂವಿಧಾನಬದ್ಧವಾಗಿ ವ್ಯಾಖ್ಯಾನ ಮಾಡಿದರು. unconstitutional appointment is unconstitutional ಮಾನ್ಯ ಉಪ ಮುಖ್ಯಮಂತ್ರಿಯವರೇನಾದರೂ ಆರ್ಡರನ್ನು ಮಾಡಿದರೆ ಅಥವಾ ಮಾಡುತ್ತಿದ್ದರೆ ಅವುಗಳ ವ್ಯಾಲಿಡಿಟಿ ಏನು ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಈ ಪ್ರಶ್ನೆಗೆ ನ್ಯಾಯವಾಗಿ ಸರ್ಕಾರದಿಂದ ಉತ್ತರ ಬರಬೇಕು ನನ್ನ ಪ್ರಕಾರ. Any order passed by the person who is not an authority has no sanctity ಇದು ನನ್ನ ಅಭಿಪ್ರಾಯ. ಸರ್ಕಾರದವರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. Any order passed by any authority or a person who has no sanction, who has no authority, is not an order at all. ಇದು ನನ್ನ ಅಭಿಪ್ರಾಯ. ಸರ್ಕಾರದವರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ಮಂತ್ರಿಮಂಡಲದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಿದ್ದೆ ಮಾಡುವುದಕ್ಕೂ ಪುರುಸೊತ್ತು ಇಲ್ಲದೇ ಇರುವಷ್ಟು ಕೆಲಸ, ಇನ್ನೊಂದು ಕಡೆ ಕೆಲಸ ಇಲ್ಲದೇ ನಿದ್ದೆ ಮಾಡುವಂಥ ಪರಿಸ್ಥಿತಿ. ಅವರಿಗೆ ವಿಪರೀತ ಕೆಲಸ. ಸ್ವಲ್ಪವೂ ಪುರುಸೊತ್ತು ಇಲ್ಲ ಕುಳಿತುಕೊಳ್ಳುವುದಕ್ಕೆ. ಆದರೆ ಅನೇಕ ಜನ ಮಂತ್ರಿಗಳಿಗೆ ಕೆಲಸ ಇಲ್ಲದೇ ನಿದ್ದೆ ಮಾಡತಕ್ಕಂಥ ಪರಿಸ್ಥಿತಿ. ಈಗ ನೀವು ಇನ್ನು ನಾಲ್ಕು ಜನ ಮಂತ್ರಿಗಳನ್ನು ಮಾಡಿದರೂ ನಾನು ಆ ವಿಷಯದ ಬಗ್ಗೆ ತಕರಾರು ಮಾಡುವುದಿಲ್ಲ. ಏಕೆಂದರೆ ಐಎಎಸ್ ಆಫೀಸರ್‌ಗೆ ಕಾರು ಇರುತ್ತದೆ, ಬಂಗಲೆ ಇರುತ್ತದೆ, ಸವಲತ್ತು ಇರುತ್ತದೆ, ಇಷ್ಟೆಲ್ಲಾ ಕಷ್ಟಬಿದ್ದು ಸಾರ್ವಜನಿಕ ಜೀವನದಲ್ಲಿ ಒದ್ದಾಡಿಕೊಂಡು ನಾಲ್ಕು ಜನ ನನ್ನ ಸ್ನೇಹಿತರು ಕಾರಿನಲ್ಲಿ ಓಡಾಡಿದರೆ ನಾನು ಅದಕ್ಕೆ ತಕರಾರು ಮಾಡುವುದಕ್ಕೆ ಸಿದ್ಧನಿಲ್ಲ. ಇನ್ನು ನಾಲ್ಕು ಜನ ಮಂತ್ರಿಗಳನ್ನು ಬೇಕಾದರೆ ಮಾಡಿ. ಆದರೆ ನನ್ನ ಪ್ರಾರ್ಥನೆ ಇಷ್ಟೆ. ಅವರಿಗೆ ನಿದ್ದೆ ಮಾಡುವುದಕ್ಕೆ ಆಗದೇ ಇರುವಷ್ಟು ಕೆಲಸವನ್ನು ಕೊಡಿ. ಕೆಲಸವೆಲ್ಲಾ ನೀವೇ ಇಟ್ಟುಕೊಂಡು ಬರೀ ನಿದ್ದೆ ಮಾಡುವುದಕ್ಕಾಗಿಯೇ ಅವರಿಗೆ ಮಂತ್ರಿಯನ್ನಾಗಿ ಮಾಡಿದಕ್ಕೆ, ಅಷ್ಟಕ್ಕೆ ನನ್ನ ತಕರಾರು. ಇಲ್ಲ, ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಾದರೆ ಅವರಿಗೆ ನಿದ್ದೆ ಮಾಡದಂತೆ ಕಟ್ಟಪ್ಪಣೆಯಾದರೂ ಮಾಡಿ.

ಗ್ರಾಮೀಣ ಉದ್ಯೋಗದ ಬಗ್ಗೆ ಒಂದು ಪ್ರಸ್ತಾವನೆ ಇದರಲ್ಲಿ ಇದೆ. ಗ್ರಾಮಾಂತರ ಔದ್ಯಮೀಕರಣ ಮತ್ತು ಉದ್ಯೋಗ ಸೃಜತೆ. ಹಿಂದಿನ ಸರ್ಕಾರದಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 15 ಕೃಪಾಂಕಗಳನ್ನು ಕೊಡುವಂತಹ ವ್ಯವಸ್ಥೆ ಇತ್ತು. ಈಗ ಸರ್ಕಾರ ಅದನ್ನು ಬದಲಾವಣೆ ಮಾಡಿ ಟೋಟಲ್ 15 ಅಂಕಗಳನ್ನು ಕೊಡುವಂತಹ ವ್ಯವಸ್ಥೆಯನ್ನು ತರುತ್ತಿದೆ, ಅಥವಾ ತಂದಿದೆ ಎನ್ನುವ ಗುಮಾನಿ ನಿಮಗೆ ಇದೆ. ಆದ್ದರಿಂದ ಆ ತರಹ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದರೆ ಅದನ್ನು

ದಯಮಾಡಿ ಕೈ ಬಿಡಬೇಕು. ಅತ್ಯಂತ ಪ್ರಮುಖವಾದಂತಹ ಪ್ರಸ್ತಾವನೆ 20ನೇ ಪ್ಯಾರಾದಲ್ಲಿ ಇದೆ. ರಾಜ್ಯಪಾಲರ ಭಾಷಣದಲ್ಲಿ ನೀರಾವರಿಗೆ 20ನೇ ಸ್ಥಾನ. ಗ್ರಾಮಾಭಿವೃದ್ಧಿಗೆ 30ನೇ ಸ್ಥಾನ. ಅಧಿಕಾರವನ್ನು ಕೊಟ್ಟಂತಹವರಿಗೆ ವಾಪಸ್ಸು ಕೊಡುವಂಥ ಸ್ಥಳೀಯ ಸಂಸ್ಥೆಗಳ ಬಗ್ಗೆ ಆದ್ಯತೆ 31ನೇ ಸ್ಥಾನ. ನೀರಾವರಿಯನ್ನು ಮಾನ್ಯ ಮುಖ್ಯಮಂತ್ರಿಗಳು ಜ್ಞಾಪಿಸಿಕೊಂಡು 20ನೇ ಸ್ಥಾನಕ್ಕಾದರೂ ತಂದಿದ್ದಾರೆ, ಅದಕ್ಕಾಗಿ ಅವರಿಗೆ ನಾನು ಅಭಿನಂದಿಸುತ್ತೇನೆ. ನಾನು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇನೆ, ಈ ನೀರಾವರಿಯ ಬಗ್ಗೆ ನೀರಾವರಿಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಒಂದು ದಿವ್ಯ ನಿರ್ಲಕ್ಷ್ಯವನ್ನು ನಾನು ಕಾಣುತ್ತಿದ್ದೇನೆ. ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರವು ನೇಮಿಸಿರುವ ನ್ಯಾಯಮಂಡಲಿಯ ಮಧ್ಯಂತರ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ಆಗಿರುವ ಅನ್ಯಾಯ ಹಾಗೂ ಅನ್ಯಾಯವನ್ನು ತಡೆಯುವಲ್ಲಿ ಸರ್ಕಾರದ ವಿಫಲತೆ ಮತ್ತು ಕೃಷ್ಣ ನದಿ ನೀರಿನ ಹಂಚಿಕೆಯ ಬಗ್ಗೆ ಬಚಾವತ್ ನ್ಯಾಯ ಮಂಡಲಿಯ ತೀರ್ಪಿನಿಂದ ನಿಗಧಿಯಾದ ಕಾಲದಲ್ಲಿ ರಾಜ್ಯಕ್ಕೆ ಸಲ್ಲಬೇಕಾದ ನೀರಿನ ಪಾಲನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮ ನಿರೂಪಿಸುವುದರಲ್ಲಿ ರಾಜ್ಯ ಸರ್ಕಾರದ ವಿಫಲತೆ ಇವೆರಡು ವಿಷಯಗಳನ್ನು ಚರ್ಚೆ ಮಾಡಬೇಕೆಂದು 4–1–93 ಮತ್ತು ನಿಲುವಳಿ ಸೂಚನೆಯಾಗಿ 4–2–93ರಲ್ಲಿ ಎರಡು ಸಾರಿಯೂ ಈ ಸದನಕ್ಕೆ ಪ್ರಸ್ತಾವನೆಯನ್ನು ಸೂಚನೆಯನ್ನು ನಾನು ಕಾನೂನಿನ ಚೌಕಟ್ಟಿನಲ್ಲಿ ಕಳುಹಿಸಿಕೊಟ್ಟಿದ್ದೇನೆ. ಆದರೂ ಕೂಡ ವತ್ತಿನವರೆಗೂ ಮಾತನಾಡಲಿಕ್ಕೆ ನನಗೆ ಅವಕಾಶ ಸಿಗಲಿಲ್ಲ. ಇದು ಎಷ್ಟೊಂದು ಗಂಭೀರವಾದಂತಹ ವಿಷಯ ಅಂದರೆ ಒಂದು ಕಥೆ ಅಂದಿನ ರಾಷ್ಟ್ರಾಧ್ಯಕ್ಷರಾದಂತಹ ಮಾನ್ಯ ಅವರ ಹೆಸರನ್ನು ಹೇಳುವುದು ಬೇಡ, ಕಾವೇರಿ ಕೊಳ್ಳದ ಜನರಿಗೆ ಆಗಬಾರದ ಅನ್ಯಾಯವಾಯಿತು. ರಾಷ್ಟ್ರಾಧ್ಯಕ್ಷರಾಗಿದ್ದರು, ಇವತ್ತು ಈ ರಾಜ್ಯದ ಪ್ರಧಾನಿಯವರಿಂದ ಕೃಷ್ಣಾ ಭಾಗದ ಜನರಿಗೆ ಅನ್ಯಾಯವಾಗುತ್ತಿದೆ. ಇದು ಮುಂದುವರಿಯುವಂತಹ ಕಾರ್ಯಕ್ರಮ ಅಲ್ಲ. ರಸ್ತೆಗೆ ಮಣ್ಣು ಹಾಕಿದರೆ ಮುಂದಿನ ವರ್ಷ ಕೊಚ್ಚಿಕೊಂಡು ಹೋಗುತ್ತದೆ. ಕಟ್ಟಡ ಕಟ್ಟಿದರೆ 10 ವರ್ಷಕ್ಕೆ ಬಿದ್ದು ಹೋಗುತ್ತದೆ. ಈ ಎರಡು ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಹಂಚಿಕೆಯ ಬಗ್ಗೆ ಈ ರಾಜ್ಯದಲ್ಲಿರುವಂತಹ ಲಕ್ಷಾಂತರ ಜನರ ಬದುಕಿನ ಬವಣೆಯ ವಿಷಯ ಇದಾಗಿದೆ. ಈ ನೀರನ್ನು ದಕ್ಕಿಸಿಕೊಳ್ಳುವುದರಲ್ಲಿ ಈ ನೀರಿನ ಉಪಯುಕ್ತತೆಯನ್ನು ಹೊಂದುವಂತಹ ಹಕ್ಕನ್ನು ಪ್ರತಿಪಾದನೆ ಮಾಡುವುದರಲ್ಲಿ ಏನಾದರೂ ಸೋತರೆ ಬಹುಶಃ ರಾಜ್ಯದ ರೈತರಿಗೆ ಮಾಡಿದಂತಹ ನ್ಯಾಯದ ಒಂದು ಅಧ್ಯಾಯವಾಗುತ್ತದೆ.

ಈ ಅನ್ಯಾಯದ ಅಧ್ಯಾಯವನ್ನು ಚರಿತ್ರೆಕಾರರು ಬರೆಯುತ್ತಾರೆ. ಅನ್ಯಾಯದ ಅಧ್ಯಾಯವನ್ನು ಚರಿತ್ರೆಕಾರರು ಬರೆಯುವಂಥ ಸಂದರ್ಭದಲ್ಲಿ ಯಾರು ಮುಖ್ಯಮಂತ್ರಿಯಾಗಿದ್ದರು ಎಂಬುದನ್ನು ಬರೆಯುತ್ತಾರೆ. ಯಾರು ನೀರಾವರಿ ಮಂತ್ರಿಯಾಗಿದ್ದರು ಎಂಬುದನ್ನು ಬರೆಯುತ್ತಾರೆ ಮತ್ತು ಯಾರು ಶಾಸಕರಾಗಿದ್ದರು ಎಂಬುದನ್ನೂ ಸಹ ಬರೆಯುತ್ತಾರೆ. ಈ ಪಾಪದ ಅಧ್ಯಾಯಕ್ಕೆ ನಮ್ಮನ್ನು ಗುರಿಪಡಿಸಬೇಡಿ, ಇಷ್ಟೊಂದು ಗಂಭೀರವಾದಂಥ ವಿಷಯ. 1993ನೇ ಇಸವಿಯಲ್ಲಿ ನಾವುಗಳೆಲ್ಲರೂ ಇದ್ದೇವೆ. ನನ್ನ ಸದಸ್ಯ ಸ್ನೇಹಿತರು ಹೇಳಿದಂತೆ ನಾನು ರಾಜಕೀಯ ಕಾರಣಕ್ಕಾಗಿ ಇಲ್ಲಿ ಭಾಷಣ ಮಾಡುತ್ತಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ. ಇನ್ನು 7 ವರ್ಷಗಳಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಕರ್ನಾಟಕ ರಾಜ್ಯದ ರೈತರಿಗೆ ನೀರು ಕೊಡುವಂಥ ಕೆಲಸ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಏಳು ವರ್ಷಗಳವರೆಗೆ ಇರುವುದಿಲ್ಲವೆಂಬುದು ನನಗೆ ಗೊತ್ತಿದೆ, ಬರುವ ಆ ಏಳು ವರ್ಷಗಳಲ್ಲಿ ನಾನು ಶಾಸಕನಾಗದೆ ಇರಬಹುದೆಂದು ನನಗೆ ಗೊತ್ತಿದೆ ಅಲ್ಲದೆ, ಆಗ ನೀರಾವರಿ ಮಂತ್ರಿಗಳು ಇರುವುದಿಲ್ಲವೆಂಬುದು ಸಹ ನನಗೆ ಗೊತ್ತಿದೆ. ಆದರೆ, ಈ ಪಾಪದ ಅಧ್ಯಾಯ ಮಾತ್ರ ಇದ್ದೇ ಇರುತ್ತದೆ. ಇನ್ನು 7 ವರ್ಷಗಳಲ್ಲಿ ಕೃಷ್ಣಾ ಜಲಾನಯನ ಪ್ರದೇಶದ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಿ ನೀರು ಕೊಡುವಂಥ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥ

ಕಾರ್ಯಕ್ಕೆ ಯಾವ ಒತ್ತನ್ನು ಈ ಸರ್ಕಾರ ಕೊಟ್ಟಿದೆ ? ಯಾವ ವಿಶೇಷ ಯೋಜನೆಗಳನ್ನು ಈ ಸರ್ಕಾರ ಕೊಟ್ಟಿದೆ ? ನಾನು ಮುಖ್ಯಮಂತ್ರಿಗಳಲ್ಲಿ ಈ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಒಂದು ಗಂಭೀರವಾದಂಥ ಪ್ರಶ್ನೆಯ ಕುರಿತು ಅವರು ಮುಖ್ಯಮಂತ್ರಿಗಳಾಗಿ ಮೂರು ತಿಂಗಳಾದರೂ ಕೂಡ ಒಂದೇ ಒಂದು ಸಭೆ ಕರೆದು ನಮ್ಮಗಳ ಜೊತೆ ಚರ್ಚೆ ಮಾಡಲಿಲ್ಲ. ಇನ್ನು 7 ವರ್ಷಗಳಲ್ಲಿ ಕೃಷ್ಣಾ ಕಣಿವೆ ಯೋಜನೆಯನ್ನು ಪೂರ್ತಿಗೊಳಿಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಇದ್ದರೆ ಏನಾಗುತ್ತದೆಂಬುದಕ್ಕೆ ಸಾಕ್ಷಿಯಾಗಿ ಇತ್ತೀಚೆಗೆ ಕೊಪ್ಪಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿಗಳು ನಮ್ಮ ರಾಜಕಾರಣಿಗಳ ಬಗ್ಗೆ ಆಡಿದ ಮಾತುಗಳೇ ಉದಾಹರಣೆಯಾಗಿದೆ. ಅವರು 'ಕರ್ನಾಟಕದ ಬೆನ್ನುಹುರಿ ಇಲ್ಲದಂಥ ರಾಜಕಾರಿಣಿಗಳು' ಎನ್ನುವ ಮಾತನಾಡಿದ್ದಾರೆ. ಈ ಮಾತನ್ನು ನಾನು ಆಡಿಲ್ಲ, ಸಾಹಿತಿಗಳು ಆಡಿದ್ದುದು. ಈ ಮಾತನ್ನು ನಾನು ಆಡಿದರೆ ಯಾರಾದರೂ ಗಲಾಟೆ ಮಾಡಬಹುದು. ಈ ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ವೇದಿಕೆಯಿಂದ ಒಂದು ಮಾತು ಬಂದಿದೆ. ಏನೆಂದರೆ, ಕೃಷ್ಣಾ ನದಿ ನೀರನ್ನು ಕ್ರಿ.ಶ. 2000 ಇಸವಿಯೊಳಗೆ ಉಪಯೋಗಿಸಿಕೊಳ್ಳುವಂಥ ಕಾರ್ಯಕ್ರಮವನ್ನು ಹಾಕದಿರುವಂಥ 'ಬೆನ್ನುಹುರಿ ಇಲ್ಲದಂಥ ರಾಜಕಾರಣಿಗಳು' ಎಂಬುದು. ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ನೀರಿನ ಪಾಲು ಇನ್ನೊಂದು ಕಣ್ಣೀರಿನ ಕಥೆ. 'ರಾಜ್ಯಕ್ಕೆ ಬಚಾವತ್ ತೀರ್ಪಿನ ಉರುಳು', ಮತ್ತೊಂದು 'ಕೃಷ್ಣೆಯ ಯಕ್ಷ ಪ್ರಶ್ನೆ' ಎನ್ನುವ ಸಂಪಾದಕೀಯ 'ಹಣ, ಸಿಬ್ಬಂದಿ ಕೊರತೆ ಬೆನ್ನು ಹತ್ತಿದ ಬೇತಾಳ' ಹಾಗೂ 'ಕೃಷ್ಣಾ ನದಿ ಕೊಳ್ಳದ ಯೋಜನೆಗಳ ಅನುಷ್ಠಾನದಲ್ಲಿ' ಎಂಬ ಶೀರ್ಷಿಕೆಯಡಿ ಹೊತ್ತು ಬಂದಂತ ವರದಿಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹೀಗೆ ಕೃಷ್ಣಾ ಕಣಿವೆ ನೀರಿನ ಉಪಯುಕ್ತತೆಯನ್ನು 2000 ಇಸವಿಯೊಳಗಾಗಿ ಉಪಯೋಗಿಸಿಕೊಳ್ಳಬೇಕೆಂದು ನಡೆಯುತ್ತಿರುವ ಕಾಮಗಾರಿ ಕೆಲಸ ಏನೇನೂ ಸಾಲದಾಗಿದೆ. ಅದಕ್ಕೆ ಗಂಭೀರವಾದಂಥ ಯಾವುದೇ ಯೋಜನೆ ಹಾಕಿಕೊಂಡಿಲ್ಲ. ಇನ್ನು ಕಾವೇರಿ ಕಥೆ. ಕಾವೇರಿ ನೀರಿನ ಹಂಚಿಕೆ ವಿವಾದ 1981ನೇ ಇಸವಿಯಲ್ಲಿ ಅಂದು ಈ ರಾಜ್ಯದಲ್ಲಿದ್ದಂಥ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗಿ ಇವೊತ್ತಿನವರೆವಿಗೂ ಆ ಚರ್ಚೆ ನಡೆಯುತ್ತಿದೆ. ಅದನ್ನು ನಾನು ಓದಿದೆ. ಇದು ದುರಂತವೋ, ದುರಾದೃಷ್ಟವೋ, 1981ನೇ ಇಸವಿಯಲ್ಲಿ ಮೈಸೂರಿನಲ್ಲಿ ನಡೆದಂಥ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಬ್ರಿಟಿಷ್ ಸಂಜಾತ ಅವನು ನಮ್ಮ ದೇಶದವನಲ್ಲ.

ನಮ್ಮ ರಾಜ್ಯದವನಲ್ಲ, ಆವತ್ತು ಮೈಸೂರಿಗೆ ಬರಬೇಕಾಗಿದ್ದಂಥ, ರಾಜ್ಯಕ್ಕೆ ಕಾವೇರಿ ನೀರಿನಿಂದ ಬರಬೇಕಾಗಿದ್ದಂಥ ಪಾಲಿನ ಬಗ್ಗೆ ಅವನು ವಾದ ಮಾಡಿದ. ಆದರೆ ಇವತ್ತಿನ ಮಂತ್ರಿಮಂಡಲಕ್ಕೆ, ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಆತನಿಗೆ ಇದ್ದಂಥ ಆಸಕ್ತಿ ಇಲ್ಲ, ಎನ್ನತಕ್ಕ ಅಪಾದನೆಯನ್ನು ನಾನು ಮಾಡುತ್ತಿದ್ದೇನೆ. ಎಂಥ ಕೆಟ್ಟ ಪರಿಸ್ಥಿತಿ ಇದೆ. ತಮಿಳುನಾಡಿನವರ ಅರ್ಜಿಯನ್ನು ಆಧರಿಸಿ ಸುಪ್ರೀಮ್ ಕೋರ್ಟ್‌ನವರು ನೇಮಕ ಮಾಡಿದಂಥ ನ್ಯಾಯಮಂಡಳಿಯವರು ಕೊಟ್ಟಿರತಕ್ಕ ತೀರ್ಪು ಅತ್ಯಂತ ಗಂಭೀರವಾದುದು. ಆ ನ್ಯಾಯಮಂಡಳಿಯನ್ನು ಯಾರು, ಯಾವ ಪಕ್ಷದವರು ನೇಮಕ ಮಾಡಿದರು ಎನ್ನತಕ್ಕ ಪ್ರಶ್ನೆ ಬೇಡ. ಆ ನ್ಯಾಯ ಮಂಡಳಿಯವರು ಕೊಟ್ಟಿರತಕ್ಕ ತೀರ್ಪನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವರು ಮೂರು ಪ್ರಮುಖವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಮಗೆ ನೀರು ಇರಲೀ ಇಲ್ಲದಿರಲಿ 205 ಟಿ.ಎಂ.ಸಿ.ಯಷ್ಟನ್ನು ಪ್ರತಿ ವರ್ಷ ಬಿಟ್ಟು ಕೊಡಬೇಕು ಇದು ಒಂದನೇ ಭಾಗ, ಎರಡನೆ ಭಾಗ ಆಕಸ್ಮಾತ್ ಯಾವುದಾದರೊಂದು ವಾರದಲ್ಲಿ ನಿಮಗೆ ಕಡಿಮೆ ನೀರು ಬಂದರೆ ಅದನ್ನು ಮುಂದೆ make good ಮಾಡಬೇಕು. ಎಲ್ಲದಕ್ಕಿಂತ ಅತ್ಯಂತ ಸಂಕಟದ ಭಾಗವೆಂದರೆ ಮೂರನೆಯದು ಅದೇನೆಂದರೆ Karnataka should limit its area of irrigation to the extent of 11.20 lakhs acres. 11 ಲಕ್ಷದ 20 ಸಾವಿರ ಎಕರೆಗೆ ನಿಮ್ಮ ಅಚ್ಚುಕಟ್ಟನ್ನು ಸೀಮಿತಗೊಳಿಸಬೇಕು, ಆಜ್ಞೆಯ ಪರಂಪರೆ, ಈ ಅನ್ಯಾಯದ ನಡವಳಿಕೆಯು ಇಲ್ಲಿಗೇ ನಿಲ್ಲಲಿಲ್ಲ,

ಸರ್ಕಾರದವರು ಒಂದು ಕ್ಲಾರಿಫಿಕೇಷನ್ ಆಗಿ ಅರ್ಜಿಯನ್ನು ನ್ಯಾಯಮಂಡಳಿಗೆ ಹಾಕಿದರು. ಆದರೆ ಸ್ವಾಮಿ ನಮಗೆ ಏನು ತೀರ್ಮಾನ ಸಿಕ್ಕಿತು ಎಂದರೆ ಇದಕ್ಕಿಂತ ಕೆಟ್ಟ ನ್ಯಾಯ ವಿತರಣೆಯಾಯಿತು. 11 ಲಕ್ಷ 20 ಸಾವಿರ ಎಕರ ಭೂಮಿಗೆ ನೀರನ್ನು ಉಣಿಸುವುದನ್ನು ಸೀಮಿತಗೊಳಿಸುವಾಗ 1974ರ ಹಿಂದೆ ಇದ್ದಂಥ ಪರಿಸ್ಥಿತಿಯನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕೆಂದು ನ್ಯಾಯ ಮಂಡಳಿಯು ತೀರ್ಮಾನ ಕೊಟ್ಟಿತು. ಈ ಸದನದ ಮಾನ್ಯ ಸದಸ್ಯರುಗಳೆಲ್ಲಾ ಸೇರಿದಂತೆ, ನಾನಂತೂ ಅಂದು ಸದಸ್ಯನಾಗಿರಲಿಲ್ಲ there was an unanimous resolution to boycot this Tribunal. ಸ್ವಾಮಿ, ರಾಷ್ಟ್ರದ ಒಬ್ಬ ಪ್ರಜೆ ಮುಖ್ಯಮಂತ್ರಿಗಳಿಗೆ ಕಾಗದ ಬರೆದರೆ, ಅಥವಾ ಒಬ್ಬ ಶಾಸಕ ಕಾಗದ ಬರೆದರೆ, He can afford to ignore, ಅವರು ಮೊಯಿಲಿ ಮುಖ್ಯಮಂತ್ರಿಯಾಗಿರಬಹುದು, ಬಂಗಾರಪ್ಪನವರು ಮುಖ್ಯಮಂತ್ರಿಯಾಗಿರಬಹುದು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿಗಳಾಗಿದ್ದರೋ ಎನ್ನತಕ್ಕ ಪ್ರಶ್ನೆಯಲ್ಲ, ನೈತಿಕವಾದ ವಿಷಯವನ್ನು ರಾಜಕೀಯದಲ್ಲಿ ನನ್ನ ಹಿರಿಯ ಸ್ನೇಹಿತರು ಹೇಳುತ್ತಾರೆ, ಈ ಸದನ ಮಾಡಿದಂಥ ಒಂದು unanimous Resolutionನ್ನು ಕಾರ್ಯರೂಪಕ್ಕೆ ತರಲಿಲ್ಲ. ಆದರೆ there is no remedy for us ಏನು ಮಾಡಬೇಕು ? ಈ ದೇಶದ, ರಾಜ್ಯದ ಜನರು ಏನು ಮಾಡಬೇಕು ? ನಾನು ಕಾಗದವನ್ನು ಬರೆದಿಲ್ಲ. ಅದನ್ನು ಕಸದ ಬುಟ್ಟಿಗೆ ಹಾಕಲು ಜನರು ಬರೆದಂಥ ಕಾಗದವಲ್ಲ, ಇಡೀ ಸದನವೇ ಸರ್ವಾನುಮತದಿಂದ ಸರ್ವಪಕ್ಷದವರೂ, ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಎಲ್ಲಾರೂ ಸೇರಿ ಕೆಟ್ಟ ತೀರ್ಮಾನವನ್ನು ಕೊಟ್ಟಂಥ abiated tribunal ಏನಿದೆ ಅದನ್ನು Boycot ಮಾಡಬೇಕೆಂದು ಯುನಾನಿಮಸ್ ಆಗಿ ತೀರ್ಮಾನ ಮಾಡಿತು. ಈ ಸದನ ಸರ್ವಾನುಮತದಿಂದ ಮಾಡಿದತಕ್ಕ ತೀರ್ಮಾನವೂ ಕೂಡ ಕಸದ ಬುಟ್ಟಿಗೆ ಹಾಕುವಷ್ಟು ನಿರ್ಲಕ್ಷ್ಯ. ಈ ರೀತಿಯಾದರೆ ನಾವು, ಈ ರಾಜ್ಯದ ಜನರು ಎಲ್ಲಿಗೆ ಹೋಗಬೇಕು ? ನೀರು ಬೇಕಾದರೆ ಎಲ್ಲಿಗೆ ಹೋಗಬೇಕು ? ಆದುದರಿಂದ ನೇರವಾಗಿ ಆಪಾದನೆ ಮಾಡುತ್ತಿದ್ದೇನೆ ಕೃಷ್ಣ ಮತ್ತು ಕಾವೇರಿ ನೀರನ್ನು ಉಳಿಸಿಕೊಳ್ಳುವುದರಲ್ಲಿ, ಅದನ್ನು ಬಳಸಿಕೊಳ್ಳುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ನೀತಿಯನ್ನು ತಾಳಿದೆ. ಈ ಮಾತನ್ನು ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಳುತ್ತಿಲ್ಲ. 1989ನೇ ಇಸವಿಯಲ್ಲೇ ಈ ಮಾತನ್ನು ಹೇಳಿದ್ದೇನೆ.

ಇಂಥ ಪರಿಸ್ಥಿತಿ ಬಂದರೆ ಕಾವೇರಿ ಕೊಳ್ಳದ ಜನರು ರೊಚ್ಚಿಗೇಳಬೇಕಾಗುತ್ತದೆಂದು ಹೇಳಿದ್ದೆ. ಅದರಂತೆ ಎದ್ದಿದ್ದೂ ಆಯಿತು. ಕಾವೇರಿ ನದಿಯ ನೀರಿನ ಹಂಚಿಕೆಯ ಬಗ್ಗೆ ನ್ಯಾಯಮಂಡಲಿ ನೀಡಿದ ತೀರ್ಮಾನದ ಪ್ರತಿಫಲವಾಗಿ ಕಾವೇರಿ ಕೊಳ್ಳದ ಜನರು ರೊಚ್ಚಿಗೆದ್ದಿದ್ದನ್ನು ನೀವು ಈಗಾಗಲೇ ನೋಡಿದ್ದೀರಿ. ರೈತನ ಬವಣೆಗೆ, ರೈತನ ಸಂಯಮಕ್ಕೆ ಒಂದು ಮಿತಿ ಇದೆ. ಆ ಮಿತಿಯನ್ನು ರೈತ ಮೀರಿಬಿಟ್ಟನೆಂಬುದನ್ನು ಅವರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಯಿತು. ಅನೇಕ ಜನರ ಪ್ರಾಣ ಹಾನಿಯಾಯಿತು. ಇದರ ಅರ್ಥವೇನೆಂದರೆ, ಕಾವೇರಿ ಮತ್ತು ಕೃಷ್ಣಾ ಕೊಳ್ಳದ ನೀರಿನ ಸಾಮರ್ಥ್ಯವನ್ನು ಬಳಸಿಕೊಳ್ಳುವುದರಲ್ಲಿ ಸರ್ಕಾರ ವಿಫಲವಾದರೆ ಇದೇ ರೀತಿ ದಿವ್ಯ ನಿರ್ಲಕ್ಷ್ಯವನ್ನು ತಾಳಿದರೆ ಸಂಯಮವನ್ನು ಮಾರಿ ಈ ರಾಜ್ಯದ ರೈತ ರೊಚ್ಚಿಗೆದ್ದಾನು ಎನ್ನತಕ್ಕ ಎಚ್ಚರಿಕೆಯನ್ನು ನಾನು ಕೊಡಬಯಸುತ್ತೇನೆ. ಕಾವೇರಿ ಕೊಳ್ಳದ ಅತಿ ಪ್ರಮುಖ ಯೋಜನೆಯಾದ ಹೇಮಾವತಿಯ ಬಗ್ಗೆ ಈ ಸದನದಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭ ಬಂತು. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರು. ಈ ಸದನದಲ್ಲಿ ಇದು ಚರ್ಚೆಯಾಗುವುದು ಬೇಡ. ನಾನು ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇನೆ, ಆದರೆ ಇವತ್ತಿನವರೆಗೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ಕಾವೇರಿ ಕೊಳ್ಳದವರೇ ಅದಂಥ ಮಾನ್ಯ ಕೃಷ್ಣಾರವರನ್ನು ನೀರಾವರಿ ಮಂತ್ರಿಗಳನ್ನಾಗಿ ಮಾಡಿದರು. ಇವತ್ತಿನವರೆಗೂ ಕಾವೇರಿ ಕೊಳ್ಳದವರ ಕಥೆ ಏನೆಂದು ಅವರೂ ನಮ್ಮನ್ನು ಕರೆದು

ಕೇಳಲಿಲ್ಲ. ಆ ಕೊಳ್ಳದ ಯೋಜನೆಗಳ ಅನುಷ್ಠಾನ ಸ್ಥಳಕ್ಕೆ ಇವತ್ತಿನವರೆಗೂ ಅವರು ಹೆಜ್ಜೆಯನ್ನು ಇಡಲಿಲ್ಲ. ಅಂದರೆ ಇದರ ಅರ್ಥ ಏನು? ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ನಾನು ಕಳುಹಿಸಿದ ಸೂಚನೆಗಳಿಗೆ ಬೆಲೆ ಇಲ್ಲ. ಅವು ಈ ಸದನದ ಮುಂದೆ ಬರಲಿಲ್ಲ. 1800 ಜನ ಅರಣ್ಯ ಪ್ರೇರೇಪಕರ ವಿಷಯವನ್ನು ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ 2 ಗಂಟೆ ಸಾಧ್ಯವಾಯಿತು. ಆದರೆ ಲಕ್ಷಾಂತರ ಜನರ ಬದುಕಿನ ಆಧಾರವಾದಂಥ ಈ ರಾಜ್ಯದ ರೈತರ ಬಗ್ಗೆ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಕಳುಹಿಸಿದ ಪ್ರಶ್ನೆಗೆ ಇಲ್ಲಿ ಉತ್ತರವನ್ನು ಕೊಡಲಿಲ್ಲ. ಆ ಉತ್ತರಕ್ಕೆ ಬದಲಾಗಿ ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇನೆಂದು ಕೊಟ್ಟಂಥ ಭರವಸೆಯೂ ಕೂಡ ಈಡೇರಲಿಲ್ಲ. ಏನಾಗುತ್ತಿದೆ? ಈ ಎರಡು ಸಮಸ್ಯೆಗಳೂ ಇಷ್ಟು ಗಂಭೀರವಾಗಿದ್ದರೂ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಆಸಕ್ತಿಯನ್ನು ಪಡೆದಿಲ್ಲ. ಆಸಕ್ತಿಯನ್ನು ತೋರುತ್ತಿಲ್ಲ. ನಾನು ಈ ಮಾತನ್ನು ಹೇಳಿದರೆ ಬಹುಶಃ ಅವರ ಮನಸ್ಸಿಗೆ ನೋವಾಗಬಹುದು. ಈ ವಿಷಯದಲ್ಲಿ ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಹೆಚ್ಚಿಗೆ ಅಲಾಟ್‌ಮೆಂಟ್‌ನ್ನು ಕೊಟ್ಟರೆ ನೀವು ಅಭಿನಂದಿಸುತ್ತೀರೆಂದು ಅನಿಸುತ್ತದೆ.

ಶ್ರೀ ವೈ.ಕೆ.ರಾಮಯ್ಯ:- ಆ ಅಲಾಟ್‌ಮೆಂಟ್‌ಗೂ ನಾನು ಬರುತ್ತೇನೆ. ನಾನು ವಿಧಿ ಇಲ್ಲದೆ ಹೇಳುತ್ತೇನೆ. ಅವರ ಮನಸ್ಸಿಗೆ ನೋವಾದರೂ ಚಿಂತೆ ಇಲ್ಲ. ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಈ ಅಪಾದನೆಯನ್ನು ನಾನು ಮಾಡಬೇಕಾಗುತ್ತದೆ. ಬಹುಶಃ ಈ ಎರಡು ಕೊಳ್ಳದ ರೈತರಿಗೆ ನೀರನ್ನು ಒದಗಿಸುವ ವಿಷಯದಲ್ಲಿ ಇವರಿಗೆ ಆಸಕ್ತಿ ಇಲ್ಲವೆಂದು ನಾನು ಅಪಾದನೆ ಮಾಡಬೇಕಾಗಿದೆ. ಹಣವನ್ನು ಇವರು ಕೊಟ್ಟಿದ್ದಾರೆ. ಹಿಂದೆ ನಮ್ಮ ಸರ್ಕಾರದಲ್ಲೂ ಕೊಟ್ಟಿದ್ದೇವೆ. ಅವರು ಹಿರಿಯರಾದುದರಿಂದ ಈ ವಿಚಾರವನ್ನು ಅವರು ಪ್ರಸ್ತಾವನೆ ಮಾಡಿದ್ದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಆಯವ್ಯಯದಲ್ಲಿ ನಾವು ಎಷ್ಟು ಹಣವನ್ನೊದಗಿಸಿದ್ದೇವೆ ಎಂಬುದು ಪ್ರಮುಖವಲ್ಲ. ಆ ಆಯವ್ಯಯದಲ್ಲಿ ನಾವು ನಿಗದಿಪಡಿಸಿದ್ದ ಹಣದಲ್ಲಿ ಎಷ್ಟು ಖರ್ಚಾಯಿತು, ನಿಗದಿಪಡಿಸಿದ್ದ ಗುರಿ ಎಷ್ಟು, ಸಾಧಿಸಿದ ಗುರಿ ಎಷ್ಟೆಂಬುದನ್ನು ನೀವು ಹೇಳಿದರೆ ಅನಂತರ ನಾನು ಹೇಳುತ್ತೇನೆ. ಆಯವ್ಯಯದಲ್ಲಿ 800 ಕೋಟಿ ರೂಪಾಯಿಗಳನ್ನು ಕೊಡುವುದು ಮುಖ್ಯವಲ್ಲ. ಹೇಮಾವತಿ ಯೋಜನೆಗಳಿಗಾಗಿ ಕೊಡಬೇಕಾದ 13 ಕೋಟಿ ರೂ.ಗಳ ಬಿಲ್ಲು ಪೆಂಡಿಂಗ್ ಇದೆ. ದಯವಿಟ್ಟು ಈ 13 ಕೋಟಿ ರೂ.ಗಳ ಬಿಲ್ಲುಗಳನ್ನು ಪಾವತಿ ಮಾಡುವುದರ ಮೂಲಕ ಸಮರೋಪಾದಿಯಲ್ಲಿ ನಡೆಯಬೇಕಾಗಿರುವ ಕೆಲಸದ ಕಡೆಗೆ ದಯವಿಟ್ಟು ಗಮನ ಕೊಡಿ. 13 ಕೋಟಿ ರೂ.ಗಳ ಬಿಲ್ಲುಗಳಿಗೆ ಎಲ್.ಒ.ಸಿ.ಯನ್ನು ನೀವು ಕೊಟ್ಟಿಲ್ಲ. ನಾವು 800 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ನೀವು ಈ ರಾಜ್ಯದ ಜನತೆಯ ಕಣ್ಣಿಗೆ ಮಣ್ಣೆರಚುತ್ತಿದ್ದೀರಿ. ನಾವೂ ಕೂಡ 500-600 ಕೋಟಿ ರೂ. ಕೊಟ್ಟಿದ್ದೇವೆ. ಹೇಳಿದೆವು ನೀವು ಎಷ್ಟು ಕೋಟಿ ರೂ.ಗಳನ್ನು ಕೊಟ್ಟಿದ್ದೀರೆಂಬುದು ನಮಗೆ ಮುಖ್ಯವಲ್ಲ. ಆದರೆ ಆಗುತ್ತಿರುವ ಕೆಲಸಗಳಿಗೆ ಅವಶ್ಯಕವಾಗಿ ಬೇಕಾದ ಹಣವನ್ನು ನೀವು ಒದಗಿಸಿಕೊಡುತ್ತಿಲ್ಲ. ತುಮಕೂರಿನಲ್ಲಿ ಹಾದುಹೋಗುವಂಥ ರೈಲ್ವೆ ಕ್ರಾಸಿಂಗ್ ಕಾಲುವೆಯನ್ನು ಮಾಡಲಿಕ್ಕೆ ರೈಲ್ವೇ ಇಲಾಖೆಯವರಿಗೆ ಹಣವನ್ನು ಕಟ್ಟಬೇಕು ಬಜೆಟ್‌ನಲ್ಲಿ ಇದೆ. ನಮ್ಮಲ್ಲಿ ಹೇಳುತ್ತಾರೆ ಪುಸ್ತಕದ ಬದನೆಕಾಯಿ ಎಂದು. ತಿನ್ನಲಿಕ್ಕೆ ಬೇಕಲ್ಲ ಸ್ವಾಮಿ. ಪುಸ್ತಕದ ಬದನೆಕಾಯಿಯನ್ನು ಸಾರು ಮಾಡಲಿಕ್ಕೆ ಬರುವುದಿಲ್ಲ. ಆದರೆ ಆ ಚೀಫ್ ಇಂಜನಿಯರ್‌ರವರಿಗೆ ಇವತ್ತು ರೈಲ್ವೇಗೆ ದುಡ್ಡು ಕಟ್ಟಲಿಕ್ಕೆ ಹಣವಿಲ್ಲ, ಆದ್ದರಿಂದ ಆಯವ್ಯಯದಲ್ಲಿ ಹಣವನ್ನು ಒದಗಿಸಿದ್ದೇನೆ. ಅಷ್ಟರಿಂದ ನೀವು ತೃಪ್ತರಾಗಬೇಕು ಅಂದರೆ ನಾನು ತೃಪ್ತಿಯಾಗಲಿಕ್ಕೆ ಸಿದ್ಧನಿಲ್ಲ. ಒದಗಿಸಿರುವಂಥ ಹಣವನ್ನು ಖರ್ಚು ಮಾಡುವಂಥ ಇಚ್ಛಾಶಕ್ತಿ ಅದರ ಪ್ರದರ್ಶನವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಮಾಡಬೇಕು.

ಇದರ ಜೊತೆಗೆ ಕಳೆದ ವರ್ಷ ಈ ಯೋಜನೆಗೆ ನಿಗದಿ ಮಾಡಿದಂಥ ಹಣ ಎಷ್ಟು ? ಖರ್ಚಾಗಿರುವಂಥ ಹಣ ಎಷ್ಟು ? ನಿಗಧಿ ಮಾಡಿದಂಥ ಹಣದಲ್ಲಿ ನೀರಾವರಿ ಸೃಷ್ಟಿ ಮಾಡಬೇಕಾಗಿರತಕ್ಕಂಥ ಗುರಿ ಎಷ್ಟು. What was he potentiality that was earmarked and what is the achievement? ಎನ್ನುವಂಥ ವಿಷಯದಲ್ಲಿ ನಮಗೆ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಈ ಎರಡು ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕಾರ್ಯ ಇದೊಂದು ವಿಶೇಷ ಸಂದರ್ಭ. ಸಾಮಾನ್ಯ ಸಂದರ್ಭವಾಗಿದ್ದಿದ್ದರೆ ಅದಕ್ಕೆ ನಾವು ಯಾಗೂ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಎರಡು ಸಾವಿರದ ಮಿತಿ ಇಲ್ಲದಿದ್ದಿದ್ದರೆ ಇಲ್ಲಿ 11 ಲಕ್ಷ ಮಿತಿಯನ್ನು ಏರದ ಇದ್ದಿದ್ದರೆ ಬಹುಶಃ ನಮಗೆ ಹಣ ಬಂದಾಗ ಸ್ವಲ್ಪ ಸ್ವಲ್ಪ ಮಾಡಿಕೊಳ್ಳಬಹುದಾಗಿತ್ತು. ಆದರೆ ಇವೆರಡು ಮಿತಿಗಳಿರುವುದರಿಂದ ಇದು ಒಂದು ವಿಶೇಷ ಸಂದರ್ಭವಾಗಿರುವುದರಿಂದ ದಯವಿಟ್ಟು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಈ ಕೆಲಸವನ್ನು ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಸರ್ಕಾರ ಸಿದ್ಧ ಮಾಡಿರುವಂಥ ರಾಜ್ಯಪಾಲರು ಓದಿದಂಥ ಈ ಭಾಷಣದಲ್ಲಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದರೆ ಅವರು ಮುಂದಿನ ಮಾರ್ಚ್‌ವರೆಗೆ ಮುಖ್ಯಮಂತ್ರಿಗಳಾಗಿದ್ದಿದ್ದರ ಆವಾಗ ಒದಗಿಸಿಕೊಟ್ಟಂಥ ಹಣದಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಕೇಳುವಂಥ ಪ್ರಿವಿಲೇಜ್ ಉಳಿದುಕೊಳ್ಳಲಿ, ಅವರು ಅಷ್ಟರವರೆಗೆ ಇರಲಿ ಒಂದು ಪ್ರಾರ್ಥನೆ ಮಾಡಿಕೊಂಡು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಮುಖಾಂತರ, ಅದರ ಫಲಾನುಭವಿಗಳಿಗೆ ನಾವು ಅನುಕೂಲ ಮಾಡಿಕೊಡುತ್ತೇವೆ. ಈ ರಾಜ್ಯದಲ್ಲಿ ನೀರಾವರಿ ಸವಲತ್ತುಗಳ ಫಲಾನುಭವಿಗಳಲ್ಲದ, ಸತ್ತರೆ ಹೂಳುವುದಕ್ಕೂ ಕೂಡ ಆರು ಅಡಿ ಜಮೀನು ಇಲ್ಲದಂಥ 100ಕ್ಕೆ 30 ಜನ ಕೃಷಿ ಕಾರ್ಮಿಕರು ಇದ್ದಾರೆ. ಹೇಮಾವತಿ, ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರಿಂದ ಭೂಮಿ ಉಳ್ಳಂತ ರೈತರಿಗೆ ಅನುಕೂಲವಾಗುತ್ತದೆ. ಆದರೆ ಈ ಸವಲತ್ತು ಹೊರತಾಗಿ ಇರತಕ್ಕಂಥ ಫಲಾನುಭವಿಗಳು 100ಕ್ಕೆ 30 ಜನ ಇದ್ದಾರೆ ಆ ಕೃಷಿ ಕಾರ್ಮಿಕರಿಗೆ, ನಿರ್ಗತಿಕರಿಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದೇ ಒಂದು ಪದವನ್ನು ಕೂಡ ಪ್ರಸ್ತಾವನೆ ಮಾಡಿಲ್ಲ. ಆದ್ದರಿಂದ ಇದು ಒಂದು ಕೊರತೆ ಎಂದು ಭಾವಿಸಿಕೊಳ್ಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ ವಿದ್ಯುಚ್ಛಕ್ತಿಯ ಬಗ್ಗೆ ಪ್ರಸ್ತಾಪವಾಯಿತು. ಮಾನ್ಯ ವಿದ್ಯುತ್ ಸಚಿವರು ಯಾವಾಗಲಾದರೂ ಬೋರ್‌ವೆಲ್‌ನಿಂದ ನೀರನ್ನು ಹಾಯಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಬಹುಶಃ ಇಲ್ಲವೆಂದು ಕಾಣುತ್ತದೆ. ಅವರಿಗೆ ಕೆ.ಆರ್ ಎಸ್. ನೀರು ಇದೆ. ಜೊತೆಗೆ ಅವರ ಹಿನ್ನೆಲೆ ಚೆನ್ನಾಗಿ ಗೊತ್ತಿರುತ್ತದೆ. ಅವರು ಯಾವತ್ತು ಹೊಲ ಮನೆ ಕಡೆಗೆ ಹೋದವರಲ್ಲವೆಂದು ನನ್ನ ಭಾವನೆ. ಅವರಿಗೆ ಇವತ್ತಿನ ವಿದ್ಯುತ್ತಿನ ವಿತರಣೆಯ ಅನುಭವ ಬೇಕೆಂದರೆ ದಯವಿಟ್ಟು ಯಾವುದಾದರೂ ಒಂದು ತೋಟದಲ್ಲಿ ಬೋರ್‌ವೆಲ್ ಮುಖಾಂತರ ನೀರನ್ನು ಹಾಯಿಸುತ್ತಿರುವ ಕಡೆ ಹೋಗಿ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥವರು ಏನು ಮಾತನಾಡುತ್ತಾರೆಂಬುದನ್ನು ತಿಳಿದುಕೊಳ್ಳಬೇಕು. ಏರಡನೆಯದು ನಮ್ಮ ಕುಣಿಗಲ್ ಕಡೆ ಬಂದು ಬಿಟ್ಟು 6ಗಂಟೆಯಿಂದ 8ಗಂಟೆಯವರೆಗೆ ಇದ್ದರೆ ಸಾಕು. ಸಾಯಂಕಾಲದ ಹೊತ್ತು ನಮ್ಮ ಹಳ್ಳಿಗಳ ಕಡೆ ನಾಟಕದಲ್ಲಿ ಡಿಪ್ ಅಂಡ್ ಡಿಮ್ ಮಾಡುತ್ತಾರ ಸೀನ್ ಸೀನ್‌ಗೂ. ಒಂದು ಗಂಟೆಗೆ ಎಷ್ಟು ಸಾರಿ ಕರೆಂಟ್ ಹೋಗಬೇಕು ಸ್ವಾಮಿ.

ನಮ್ಮ ಮನೆಯಲ್ಲಿ ಒಂದು ಗಂಟೆಗೆ ಕನಿಷ್ಠ 20 ಸಾರಿ ಕರೆಂಟ್ ಹೋಯಿತು. ಕರೆಂಟ್ ಹಾಳಾಗಲಿ ಎಂದರೆ ಬಲ್ಬ್ ಬರ್ನ್ ಆಯಿತು. ವೋಲ್ಟೇಜ್ ಫ್ಲಕ್ಚುಯೇಷನ್‌ನಿಂದ. ಕರೆಂಟ್‌ನ್ನು ಎರಡು ಗಂಟೆ ಆಫ್ ಮಾಡಿ ಅಭ್ಯಂತರವಿಲ್ಲ. ಆದರೆ ಈ ರೀತಿ ಆಗುವುದು ಬೇಡ. ಆದುದರಿಂದ ಮಾನ್ಯ ನೀರಾವರಿ ಮಂತ್ರಿಗಳಲ್ಲಿ ತಮ್ಮ ಮೂಲಕ ಕೋರಿಕೆ, ವಾರಕ್ಕೆ ಒಂದು ದಿವಸ ವಿದ್ಯುಚ್ಛಕ್ತಿ ನಿಲ್ಲಿಸಿ. ಎರಡು ದಿನ ಬೋರ್‌ವೆಲ್‌ಗಳಿಗೆ ಕರೆಂಟ್ ಕೊಡಬೇಡಿ. ಕೊಡುವಾಗ ವಿದ್ಯುಚ್ಛಕ್ತಿ ಸರಿಯಾಗಿ ಬರುವಂಥ ಪರಿಸ್ಥಿತಿಯನ್ನಷ್ಟೆ ಮಾಡಿ ಕೊಡಿ ಎಂದು ಪ್ರಾರ್ಥಿಸುತ್ತೇನೆ.

ಈ ಭಾಷಣದಲ್ಲಿ ಹಿಂದುಳಿದವರ ಹಿತಾಸಕ್ತಿ ಬಗ್ಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಸರ್ಕಾರ ಸಂಪೂರ್ಣ ಬದ್ಧವಾಗಿದೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳೇ, ಹಿಂದುಳಿದ ವರ್ಗದವರಿಗೆ ಏನು ಮಾಡದಿದ್ದರೂ ಪರವಾಗಿಲ್ಲ. ಇವತ್ತು ಈ ರಾಜ್ಯದಲ್ಲಿ ನೂರಕ್ಕೆ 92 ಭಾಗ ಜನರನ್ನು ಹಿಂದುಳಿದ ವರ್ಗದವರನ್ನಾಗಿ ಮಾಡಿದಂಥ ಪಾಪದ ಪರಿಸ್ಥಿತಿ ಇಲ್ಲಿದೆ. ನೀವೇ ಮಾಡಿದಿರಿ ಎಂದು ಮಾತು ಹೇಳುತ್ತೀರೆಂದು ಮಾನ್ಯ ರಂಗನಾಥ್‌ರವರು ನಗುತ್ತಿದ್ದಾರೆ. ಇದಕ್ಕೆ ರಾಜಕೀಯ ಬೇಡವೆಂದು ಆಗಲೇ ಹೇಳಿದೆ. ರಾಜ್ಯದಲ್ಲಿರುವ ಜನಸಂಖ್ಯೆಯಲ್ಲಿ 92 ಭಾಗ ಜನಸಂಖ್ಯೆಯನ್ನು ಹಿಂದುಳಿದ ವರ್ಗವನ್ನಾಗಿ ಮಾಡಿದಂಥ ಪಾಪದ ಪರಿಸ್ಥಿತಿ ಇಲ್ಲಿದೆ. ಹಿಂದುಳಿದ ವರ್ಗದ ಎಷ್ಟು ಜನರಿಗೆ ಕೆಲಸ ಕೊಡಿಸುತ್ತೀರಿ, ಮಂತ್ರಿ ಮಾಡುತ್ತೀರಿ ಅದು ಲೆಕ್ಕ ಅಲ್ಲ. ಹಿಂದುಳಿದ ವರ್ಗದಿಂದ ಬಂದ ಮುಖ್ಯಮಂತ್ರಿಯವರು ಪಾಪ ತೊಳೆಯುವುದಕ್ಕೆ ಏನು ಕಾರ್ಯಕ್ರಮ ಇದೆ. ಮುಂದುವರಿದ ವರ್ಗಕ್ಕೆ ಸೇರಿದವರು ಪಾಪ ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆ. ಮುಂದುವರಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿಗಳು ಮಾಡಿದ ಪಾಪವನ್ನು ಹಿಂದುಳಿದ ವರ್ಗಕ್ಕೆ ಸೇರಿದ ಇಬ್ಬರು ಮುಖ್ಯಮಂತ್ರಿಗಳು ತೊಳೆಯುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಜಾತಿಯ ಹೆಸರಿನಲ್ಲಿ ವರ್ಗಗಳನ್ನು ಮಾಡುವಂಥ ಸಂದರ್ಭದಲ್ಲಿ ಇದು ಅನಿವಾರ್ಯವಾಗುತ್ತದೆ ಈ ಮಾತು ಹೇಳುವುದು. ಆರ್ಥಿಕ ಆಧಾರದ ಮೇಲೆ ಮಾಡುತ್ತಿದ್ದರೆ ಈ ಮಾತು ಹೇಳುತ್ತಿರಲಿಲ್ಲ. ಅವರು ಮಾಡಿದಂಥ ಪಾಪ ತೊಳೆಯುವುದಕ್ಕೆ ನೀವು ಯಾವ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಕೊನೆಯದಾಗಿ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಆಗಲೇ ಹೇಳಿದ ಹಾಗೆ, ಆದ್ಯತೆಯನ್ನು ಕೊಟ್ಟು ಈ ವಿಕೇಂದ್ರೀಕರಣ ಪದ್ಧತಿಗೆ ಪಂಚಾಯತ್ ರಾಜ್‌ಗಳ ಸಮಸ್ಯೆಗಳಿಗೆ ಅಧಿಕಾರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಇನ್ನಷ್ಟು ವರ್ಗಾವಣೆ ಮಾಡುವ ಬಗ್ಗೆ ನನ್ನ ಪ್ರಾರ್ಥನೆ ಇಷ್ಟೆ. ನೀವು ಹೆಚ್ಚಿನ ಅಧಿಕಾರ, ಹಣ ಏನೂ ಕೊಡಬೇಡಿ. ಈಗ ನೀವೇನು ಅಧಿಕಾರ ಕಿತ್ತುಕೊಂಡಿದ್ದೀರಲ್ಲ ಅದನ್ನು ಮಾತ್ರ ವಾಪಸ್ಸು ಕೊಡಿ ಸಾಕು. ಇನ್ನು ಏನೂ ಮಾಡುವುದು ಬೇಡ. ಹೆಚ್ಚಿಗೆ ಕೊಡುವುದು ಇದ್ದರೆ ಕೊಡುವಿರಂತೆ. ಆದರೆ ಸಾವಿರಾರು ಮಂತ್ರಿ ಗ್ರಾಮೀಣ ಜನರ ಕೈಯಲ್ಲಿದ್ದಂಥ ಅಧಿಕಾರ ಕಿತ್ತುಕೊಂಡು ಪಾಪದ ಕೆಲಸ ಏನು ಮಾಡಿದ್ದೀರಿ, ಅನ್ಯಾಯ ಏನು ಮಾಡಿದ್ದೀರಿ ಅದನ್ನು ಮೊದಲು ಸರಿ ಮಾಡಿ. ಅವರು ಏನು ಪಾಪ ಮಾಡಿದ್ದಾರೆ ? ನನ್ನ ಪಕ್ಷದವರು, ವಿರೋಧ ಪಕ್ಷದವರು ಬೇಡ, ನಿಮ್ಮ ಕ್ಷೇತ್ರದಲ್ಲಿರುವ ಹಳೆಯ ಪ್ರಧಾನರನ್ನು ಕೇಳಿ. ನಿಮ್ಮ ಪಕ್ಷದವರು ಮಾಡಿದ್ದುದು ನ್ಯಾಯ ಎಂದು ಹೇಳುತ್ತಾನೋ ಅನ್ಯಾಯ ಎಂದು ಹೇಳುತ್ತಾನೋ ಕೇಳಿ. ನಿಮಗೆ ಏನು ತೊಂದರೆಯಾಗಿದೆ ? ದಿವಂಗತ ರಾಜೀವ್ ಗಾಂಧಿಯವರು ತಂದಿರುವಂಥ ತಿದ್ದುಪಡಿ, ಅವರದೇ ಕೂಸು ಎಂದು ಕಾಣುತ್ತದೆ. ಸದನಕ್ಕೆ ಬಂದದ್ದನ್ನು ಓದಿದೆ. ಆ ತಿದ್ದುಪಡಿಗೂ ನಾವು ಮಾಡಿರುವ ಕಾನೂನಿಗೂ ಯಾವ ವ್ಯತ್ಯಾಸವೂ ಇಲ್ಲ. ಒಂದೇ ಒಂದು ಆಪ್ಷನ್ ಏನು ಕೊಟ್ಟಿದ್ದಾರೆಂದರೆ ಅಧ್ಯಕ್ಷರನ್ನು ನೇರವಾಗಿ ನೇಮಕ ಮಾಡಬೇಕೇ ಅಥವಾ ಸದಸ್ಯರ ಮುಖಾಂತರ ಮಾಡಿಕೊಳ್ಳಬೇಕೇ ಎಂಬುದು ರಾಜ್ಯ ಸರ್ಕಾರಕ್ಕೆ ಬಿಟ್ಟಿದೆ. ಅದು ಬಿಟ್ಟು ಬೇರೆ ಯಾವುದೂ ವ್ಯತ್ಯಾಸ ಇಲ್ಲ. ಆದರೆ ಏತಕ್ಕೆ ಚುನಾವಣೆ ಮಾಡುತ್ತಿಲ್ಲ ? ಪಂಚಾಯಿತಿ ಸಂಸ್ಥೆಗಳಿಗೆ ಇನ್ನಷ್ಟು ಹೆಚ್ಚು

ಪರಿಣಾಮಕಾರಿಯಾಗಿ ಕೊಡುವಂಥ ಕಾನೂನು ತರುವ ನಿಮಗೆ ಅಭಿನಂದಿಸುತ್ತಾ, ಸಾವಿರಾರು ಗ್ರಾಮೀಣ ಜನರಿಂದ ಕಿತ್ತುಕೊಂಡಿರುವ ಅಧಿಕಾರವನ್ನು ಬೇಗ ವಾಪಸ್ಸು ಕೊಟ್ಟು ಆ ಸಂಸ್ಥೆಗಳಿಗೆ ಚುನಾವಣೆ ಮಾಡುವ ನಿರ್ಧಾರ ತೋರಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಇಷ್ಟು ಹೇಳಿ, ಇಷ್ಟು ಹೊತ್ತು ರಾಜ್ಯಪಾಲರ ಭಾಷಣವನ್ನು ಕುರಿತು ಅಭಿನಂದನಾ ನಿರ್ಣಯದ ಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣ ಮತ್ತು ಇಲ್ಲಿ ವಂದನಾ ನಿರ್ಣಯ; ಇದಕ್ಕೆ ನಾವು ವಂದನೆಯನ್ನು ಸಲ್ಲಿಸಬೇಕಾಗಿದೆ. ಇಡೀ ಸಭೆ ಸಲ್ಲಿಸಬೇಕು. ಈ ಭಾಷಣಕ್ಕೆ ಪೂಜ್ಯವಾಗಿ ನಾವು ಶರಣು ಎಂದು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್:- ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಹೀಗೆ ಹೇಳಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್:- ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವುದರಿಂದಲೇ ಇದಕ್ಕೆ ಬರುತ್ತಿದ್ದೇನೆ. ಈ ಭಾಷಣ ತಯಾರು ಮಾಡುವವರು, ನಿಮ್ಮ ಸಚಿವ ಸಂಪುಟ. ತಾವು ಒಪ್ಪಿಗೆ ಕೊಟ್ಟು ನಮ್ಮ ಸರ್ಕಾರದ ರೀತಿ ನೀತಿಗಳು ಏನೇನು ಇದೆ ಎಂದು ಹೇಳಿ ಅದನ್ನು ತಾವು ತೀರ್ಮಾನ ಮಾಡಿದಿರಿ.

ಡಾ|| ವೈ. ನಾಗಪ್ಪ:- ಭವಿಷ್ಯ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಭವಿಷ್ಯಾನೇ ? ಹೌದು. ನೀವು ಬುಡಬುಡಕೆ ತರಬೇಕು. ಆದುದರಿಂದ ಈ ಒಂದು ಭಾಷಣದ ಪ್ರತಿ ಪದವನ್ನೂ ಸಹ ತಯಾರು ಮಾಡಿದವರು ರಾಜ್ಯಪಾಲರು ಅಲ್ಲ. ಇದನ್ನು ತಯಾರು ಮಾಡಿದವರು ನಮ್ಮ ರಾಜ್ಯ ಸರ್ಕಾರ, ಈಗ ಇರತಕ್ಕ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯಿಲಿಯವರ ಸರ್ಕಾರ. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ದೇಶದ ಎಲ್ಲಾ ಕಡೆ ಸಂವಿಧಾನಬದ್ಧವಾಗಿ ಇದು ನಡೆಯತಕ್ಕ ವಿಚಾರ. ನಮ್ಮ ಸರ್ಕಾರ ಹೊಸದಾಗಿ ಮಾಡಿದೆ, ಭಾಷಣವನ್ನು ಇವರೇ ತಯಾರು ಮಾಡಿದ್ದೇನು ಅಲ್ಲ. ನಾನು ಮೂಲಭೂತವಾಗಿ ಈ ಒಂದು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕದ್ದು, ಸರ್ಕಾರ ತಯಾರು ಮಾಡಿದ ಭಾಷಣವನ್ನು ಅವರು ಬಂದು ಓದತಕ್ಕದ್ದು, ಒಂದು ರೀತಿ ಪರಕಾಯ ಪ್ರವೇಶ ಇದ್ದ ಹಾಗೆ. ತಾವು ತಯಾರು ಮಾಡಿ, ಅವರ ಬಾಯಲ್ಲಿ, ತಾವು ದಯವಿಟ್ಟು ಇಲ್ಲಿ ಓದಬೇಕು, 4 ಗಂಟೆ ಕಾಲ ಕೊಟ್ಟಿದ್ದೇವೆ ದಯ ಮಾಡಿಸಬೇಕು, ಅವರಿಗೆ ರಾಷ್ಟ್ರಗೀತೆ ಎಲ್ಲಾ ಆಡಿಸಿ, ಕೆಂಪು ಕಂಬಳಿ ಹಾಸಿ ಅವರನ್ನು ಕರೆದುಕೊಂಡು ಬಂದು, ಬ್ಯಾಂಡ್ ಹೊಡೆಸುವದು, ಇದು ಸಂಪ್ರದಾಯ.

ಶ್ರೀ ಕೆ.ಹೆಚ್. ರಂಗನಾಥ್:- ತಾವು ಮುಖ್ಯಮಂತ್ರಿಗಳಾದರೂ ಇದನ್ನೇ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ ಎಂದು ಹೇಳುವುದಿಲ್ಲ. ಇವತ್ತಿನ ವಸ್ತು ಸ್ಥಿತಿ ಏನಿದೆ ಎಂದು ಹೇಳುತ್ತಿದ್ದೇನೆ. ರಾಜ್ಯಪಾಲರು ಬರುವಾಗ ನಾವೆಲ್ಲರೂ ಎದ್ದು ನಿಲ್ಲಬೇಕು. ಅವರು ಕುಳಿತುಕೊಂಡ ತಕ್ಷಣವೇ ನಾವು ಕುಳಿತುಕೊಳ್ಳಬೇಕು. ಪ್ರಜಾಪ್ರಭುತ್ವ ಚುನಾಯಿತ ಪ್ರತಿನಿಧಿಗಳ ಮನೆ ಇದು. ವಿಧಾನಪರಿಷತ್ತಿನಲ್ಲಾಗಲೀ, ವಿಧಾನಸಭೆಯಲ್ಲಾಗಲೀ, ರಾಜ್ಯಸಭೆಯಲ್ಲಾಗಲೀ, ಲೋಕಸಭೆಯಲ್ಲಾಗಲೀ ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರತಕ್ಕ ಒಂದು ಪ್ರಜಾತಂತ್ರದ ಮನೆ ನಮ್ಮಲ್ಲಿ ರಾಜಾಧಿರಾಜರುಗಳು ಅಧಿಕಾರ ನಡೆಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬೇಕು, ರಾಜರುಗಳ ಆಳ್ವಿಕೆ ಹೋಗಬೇಕು. ರಾಜ್ಯಶಾಹೀ ಪದ್ಧತಿ ಹೋಗಬೇಕು ಎಂದಾಗ ಅನೇಕ ಸಮಸ್ಯೆಗಳ ಬಗ್ಗೆ ನಿರಂತರ

ಹೋರಾಟ ನಡೆದು ರಾಜರುಗಳೆಲ್ಲಾ ಹೋಗಿದ್ದಾರೆ. ರಾಜರನ್ನು ಹೋಗಿಸಿ ಇವತ್ತು ಆಳ್ವಿಕೆಯನ್ನು ನಡೆಸತಕ್ಕವರು ಪ್ರಜಾಪ್ರಭುತ್ವವಾದಿಗಳು ಪ್ರಜಾತಂತ್ರವಾದಿಗಳು. ಇವತ್ತು ರಾಜಭವನವೆಂದು ಹೆಸರು ಇದೆ. ನಾವು ಯಾವ ರಾಜತ್ವವನ್ನು ವಿರೋಧಿಸಿ ರಾಜತ್ವ ನಮಗೆ ಬೇಡವೆಂದು ಹೇಳಿದ್ದೇವೆ. ಇವತ್ತು ನಾವು ರಾಜಭವನ, ರಾಜ್ಯಪಾಲರು, ಈ ಹೆಸರು ಬೇಕೆ? ಆ ಬಗ್ಗೆ ಚಿಂತನೆಯಾಗಬೇಕು. ಇದು ದೇಶದಲ್ಲಿ ಎಲ್ಲಾ ವರ್ಗದ ಚಿಂತಕರಿಂದ ಚಿಂತನೆಯಾಗಬೇಕು. ಸಂವಿಧಾನವನ್ನು ಬದಲಾವಣೆ ಮಾಡತಕ್ಕ ರೀತಿಯಲ್ಲಿ ಇವತ್ತು ಆಗಬೇಕಾಗಿದೆ, ಇದನ್ನು ಮಾಡುವುದಾದರೆ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಹೊಸ ಶಕ್ತಿ ಬರುತ್ತದೆ. ಅದನ್ನು ಬಿಟ್ಟು ನಾವು ಯಾವ ಆಂಗ್ಲರ ಆಳ್ವಿಕೆಯಲ್ಲಿ ನಾವು ಅವರಿಗೆ ಚೌಲವನ್ನು ಬೀಸುತ್ತಾ ಕುಳಿತಿದ್ದೆವೋ, ಅದೇ ಪರಿಸ್ಥಿತಿಯನ್ನು ನಾವು ಮುಂದುವರಿಸಿಕೊಂಡು ಹೋಗುವುದಾದರೆ ಇದು ಸರಿಯಾದ ರೀತಿಯೆಂದು ನಾನಂತೂ ತಿಳಿದುಕೊಂಡಿಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಈ ಪರಿಸ್ಥಿತಿ ಇದೆಯೆಂದು ಹೇಳುತ್ತಿಲ್ಲ. ಇದು ಪ್ರತಿಯೊಂದು ಸಾರಿ ಆಗುತ್ತಿದೆ ಇದು ಸರಿಯೇ? ಸಂವಿಧಾನಬದ್ಧವಾಗಿ ನಾವು ಶಾಸನಸಭೆಯನ್ನು ಕರೆಯಬೇಕು., ಜಂಟೀ ಅಧಿವೇಶನದಲ್ಲಿ ರಾಜ್ಯಪಾಲರು ಬರುತ್ತಾರೆ, ಅವರ ಭಾಷಣವನ್ನು ನಾವು ಆಲಿಸಬೇಕು. ಅವರು ಇಲ್ಲಿಗೆ ಬಂದು ಭಾಷಣ ಓದಿ ಹೋದ ನಂತರ ನಮ್ಮ ಕರ್ತವ್ಯ ಅಂದರೆ ದಿನಾ ಬೆಳಿಗ್ಗೆ ವಂದನೆ ಸಲ್ಲಿಸತಕ್ಕದ್ದು. ವಂದನಾನಿರ್ಣಯದ ಆ ಪದವೇ ನಮಗೆ ಗುಲಾಮಗಿರಿಯ ಸಂಕೇತ. ಇದು ಪದವೇ ಇಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ನಾನು ಯಾರನ್ನಾದರೂ ವಿರೋಧ ಮಾಡುತ್ತೇನೆಂದು ಅಲ್ಲ. ಇದರ ಬಗ್ಗೆ ಸಮಗ್ರವಾದಂತಹ ಒಂದು ಚಿಂತನೆ ನಡೆಯಬೇಕು. ಸಮಾಜವಾದಿಗಳು, ಚಿಂತಕರು, ಪ್ರಜಾಪ್ರಭುತ್ವವಾದಿಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕವರು ಈ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಇದು ಲೋಕಸಭೆಯಲ್ಲೂ ಚಿಂತನೆಯಾಗಬೇಕು. ರಾಜ್ಯಸಭೆಯಲ್ಲೂ ಆಗಬೇಕು. ರಾಜ್ಯಗಳ ವಿವಿಧ ವಿಧಾನಮಂಡಲಗಳಲ್ಲಿ ವಿಧಾನಪರಿಷತ್‌ಗಳಲ್ಲಿ ಮತ್ತು ವಕೀಲರುಗಳ ವೃಂದದಲ್ಲಿ ಎಲ್ಲಾ ಕಡೆ ಚಿಂತನೆ ನಡೆಯಬೇಕು. ನಂತರ ಒಂದು ಹೊಸ ಮಾರ್ಗದರ್ಶನಕ್ಕೆ ಹೋಗಬೇಕಾಗುತ್ತದೆ. ಇದನ್ನು ತಾವೇ ಯಾರಾದರೂ ಓದಬಹುದಾಗಿತ್ತು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-- ರಾಜ್ಯಾಂಗದಲ್ಲಿ ರಾಜ್ಯಪಾಲರು ರಾಜ್ಯದ ಮುಖ್ಯಸ್ಥರು ಎಂದು ನಾವು ಹೇಳಿಕೊಂಡಿದ್ದೇವೆ. He is the Head of the State. ಚುನಾಯಿತ ಸಭೆ, ಚುನಾಯಿತ ಸರ್ಕಾರ, ರಾಜ್ಯಾಂಗದ ಪ್ರಕಾರ ಅವರನ್ನು ಇಟ್ಟುಕೊಂಡಿರುವುದರಿಂದ ಇವತ್ತು ನಡೆದುಕೊಂಡು ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:--ಈಗ ನಡೆದುಕೊಂಡು ಬಂದಿರತಕ್ಕ ದಾರಿ ಸರಿಯಿಲ್ಲ. ಅದು ಬದಲಾವಣೆಯಾಗಬೇಕೆಂದು ಹೇಳುತ್ತಿದ್ದೇವೆ. ಈಗಿರುವ ವ್ಯವಸ್ಥೆ ತಕ್ಷಣಕ್ಕೆ ಬದಲಾವಣೆ ಆಗಬೇಕೆಂದು ಹೇಳುತ್ತಿದ್ದೇವೆ. ಬದಲಾವಣೆಯಾಗಲಿಲ್ಲವೆಂದರೆ ಪ್ರಜಾತಂತ್ರಕ್ಕೆ ಒಳ್ಳೆಯ ಗೌರವ ಇರತಕ್ಕ ಲಕ್ಷಣವಲ್ಲ. ನಾವೆಲ್ಲರೂ ಚುನಾಯಿತ ಪ್ರತಿನಿಧಿಗಳು. ಅವರು ಒಂದು ದಿವಸ ಬರುತ್ತಾರೆ ಹೊರಟುಹೋಗುತ್ತಾರೆ. ವಂದನಾ ನಿರ್ಣಯ, ಇಲ್ಲೊಂದು ನಿರ್ಣಯ ಮಾಡಿ ನಮ್ಮ ಶಾಸಕಾಂಗದ ಕಾರ್ಯದರ್ಶಿಯವರು ವಂದನಾ ನಿರ್ಣಯವನ್ನು ಮಂಡಿಸಿದ್ದಾರೆ, ಅದಕ್ಕೆ ಒಬ್ಬರು ಸೂಚಿಸುತ್ತಾರೆ ಒಬ್ಬರು ಅನುಮೋದಿಸುತ್ತಾರೆ, ಈ ನೀತಿ ಇದೆಯಲ್ಲ ಇದು ಒಳ್ಳೆಯದಲ್ಲ. ಇದು ನನಗನಿಸುತ್ತದೆ ಬದಲಾವಣೆಯಾಗಬೇಕು. ಬರಬರುತ್ತಾ ಏನಾಗಿದೆಯೆಂದರೆ ಇದೊಂದು ತರಹ ಕಾಟಚಾರಕ್ಕೆ ರಾಜ್ಯಪಾಲರ ಭಾಷಣ. ರಾಜ್ಯಪಾಲರು ಬರುತ್ತಾರೆ ಹೊರಟುಹೋಗುತ್ತಾರೆ. ಐದಾರು ಪುಟಗಳ ಭಾಷಣವನ್ನು ಬರೆದು ಅವರಿಗೆ ಕೊಡುವುದು. ಶಕ್ತಿಯುತವಾದ ವಿಚಾರಗಳನ್ನು ಯಾವುದರಲ್ಲಿ ಹೇಳುತ್ತಾರೆ, ಆಯವ್ಯಯದಲ್ಲಿ ಹೇಳುತ್ತಾರೆ. ಅದರಲ್ಲಿ ಬರುವುದಕ್ಕೂ ಇದರಲ್ಲಿ ಬರುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಇದರ ಬಗ್ಗೆ ಒಂದು ಸಮಗ್ರವಾದಂತಹ ಚಿಂತನೆ ಇಡೀ ದೇಶದಲ್ಲಿ

ನಡೆಯಬೇಕು. ನಾವು ಒಂದು ಕಡೆ, ನಮ್ಮ ಪ್ರಜಾತಂತ್ರ ವ್ಯವಸ್ಥೆ ಬಹಳ ಮುಖ್ಯವಾಗಿ ಚೈತನ್ಯಪೂರ್ಣವಾಗಿ, ಅರ್ಥಪೂರ್ಣವಾಗಿ, ಶಕ್ತಿಪೂರ್ಣವಾಗಿ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಗೌರವ ಇದೆ, ರಾಜ್ಯಪಾಲರ ಬಗ್ಗೆ ವೈಯಕ್ತಿಕವಾಗಿ ನನಗೇನೂ ದ್ವೇಷ ಇಲ್ಲ. ನಾನು ಆವತ್ತು ಕೂಡ ಈ ವ್ಯವಸ್ಥೆಯನ್ನು ವಿರೋಧಿಸಿದ್ದೇನೆ. ರಾಜ್ಯಪಾಲರ ಭಾಷಣದ ದಿವಸ ನಾನು ಈ ವ್ಯವಸ್ಥೆಯನ್ನು ವಿರೋಧಿಸಿದ್ದೆ. ಈ ಭಾಷಣ ನಮ್ಮ ರಾಜ್ಯದ ಜನತೆಗೆ ಯಾವುದೇ ವಿಧವಾದಂಥ ಒಂದು ಉಪಯುಕ್ತವಾದ ಚಿಂತನೆಯಲ್ಲವೆಂದು ಹೇಳಿ ನಾನು ಪ್ರಾಮಾಣಿಕವಾಗಿ ಅದನ್ನು ವಿರೋಧಿಸಿದ್ದೆ. ಮಾನ್ಯ ಹಿರಿಯ ಸ್ನೇಹಿತರಾದಂಥ ಶ್ರೀ ರಾಮಕೃಷ್ಣ ಹೆಗಡೆಯವರು ಇದನ್ನು ಮಾಡಬಾರದಾಗಿತ್ತು ಎಂದರು. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅವರ ದೃಷ್ಟಿಯಲ್ಲಿ ಅದು ಸರಿಯಲ್ಲವೆಂದು ಹೇಳಿದರು. ವೈಯಕ್ತಿಕವಾಗಿ ನನಗೆ ರಾಜ್ಯಪಾಲರ ಬಗ್ಗೆ ವಿರೋಧ ಇಲ್ಲ. ಆದರೆ ಈ ವ್ಯವಸ್ಥೆ ಏನಿದೆ, ಇದರ ಬಗ್ಗೆ ನನ್ನದು ಸಂಪೂರ್ಣವಾದಂಥ ತಕರಾರು ಇದೆ. ಈಗಲೂ ಇದೆ. ಯಾವಾಗಲೂ ಇದೆ. ನಾನು ಮಾನ್ಯ ಅಧ್ಯಕ್ಷರಿಗೆ ಕೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರು ಒಂದು ದಿನ ಬಂದು ಭಾಷಣ ಮಾಡಿ ಹೋದನಂತರ ಸಂಪೂರ್ಣವಾಗಿ ಆ ಪೀಠವನ್ನು ಅಲಂಕರಿಸುವವರು ಈ ಶಾಸನಸಭೆಯ ಅಧ್ಯಕ್ಷರು. ರಾಜ್ಯಪಾಲರು ಬಂದರು ಎಂದರೆ ಒಬ್ಬರು ಆ ಕಡೆಗೆ ಹೋಗುತ್ತೀರಿ, ಒಬ್ಬರು ಈ ಕಡೆ ಕುಳಿತುಕೊಳ್ಳುತ್ತೀರಿ. ಈ ವ್ಯವಸ್ಥೆ ಇವತ್ತಿಗೂ ಇದೆ. ಈ ರಾಜ್ಯಾಂಗಬದ್ಧ ವ್ಯವಸ್ಥೆ ಸಮಗ್ರವಾಗಿ ಬದಲಾವಣೆ ಆಗಬೇಕಾಗಿದೆ. ಒಂದು ಕಾಲದಲ್ಲಿ ಈ ಸದನವನ್ನು ಕಟ್ಟಿಸಿದಂಥ ಹಿಮಾಲಯ ಪರ್ವತದ ಎತ್ತರಕ್ಕೆ ಬೆಳೆದಂಥ ಕೆಂಗಲ್ ಹನುಮಂತಯ್ಯನವರ ರಾಜ್ಯ ಎಲ್ಲಿ ನಡೆಯಿತು ಎಂದರೆ ನಮ್ಮ ಕೆಂಪು ಮನೆಯಲ್ಲಿ. ಈ ಸದನದಲ್ಲಿ ಅಲ್ಲ. ಈ ಸದನವನ್ನು ಕಟ್ಟಿಸಿದಂಥ ಕೆಂಗಲ್ ಹನುಮಂತಯ್ಯನವರ ಆಡಳಿತ ನಡೆದದ್ದು ಎಲ್ಲಿ? ನಮ್ಮ ಉಚ್ಚನ್ಯಾಯಾಲಯ ಇದೆಯಲ್ಲ, ಅಲ್ಲಿ. ಆಗ ಹೇಗೆ ಇತ್ತು ಎಂದರೆ ಒಂಭತ್ತು ಜನ ಮಂತ್ರಿಗಳು. ಇವತ್ತು ಅದನ್ನು ನೆನೆಸಿಕೊಳ್ಳಬೇಕು. ಒಬ್ಬ ದೊಡ್ಡ ಪತ್ರಿಕಾ ಪಿತಾಮಹಾ ಶ್ರೀಮಾನ್ ಕಿಡಿಶೇಷಪ್ಪನವರು, ಅವರನ್ನು ನೆನೆಸಿಕೊಳ್ಳಬೇಕು. ಅವರು ರಾಜಕಾರಣಿಗಳನ್ನು ಬೈದರೂ, ಅವರನ್ನು ವಿರೋಧ ಮಾಡಿದರೂ ಆ ವರದಿಯಲ್ಲಿ ಬೈಗುಳಗಳಿದ್ದರೂ ಸಹ ಓದುವವರಿಗೆ ಸಂತೋಷವಾಗುತ್ತಿತ್ತು. ಅಂತಹ ಪದಗಳನ್ನು ಅವರು ಉಪಯೋಗಿಸುತ್ತಿದ್ದರು. ಇದು ಶ್ರೀ ರಂಗನಾಥ್ ಅವರಿಗೆ ಗೊತ್ತು. ಶ್ರೀ ಹುಚ್ಚಮಾಸ್ತಿಗೌಡರಿಗೂ ಗೊತ್ತು. ಇಲ್ಲಿ ಅನೇಕರು ಕಿಡಿಶೇಷಪ್ಪನವರನ್ನು ಬಲ್ಲರು. ಅಂತಹ ಒಬ್ಬ ದೊಡ್ಡ ವ್ಯಕ್ತಿಯನ್ನು ಇಲ್ಲಿ ನೆನೆಸಿಕೊಳ್ಳುತ್ತಿದ್ದೇವೆ. ಅವರು ನವಗ್ರಹ ಮಂತ್ರಿಮಂಡಲದ ಎಂದು ಬರೆಯುತ್ತಿದ್ದರು. ಎಚ್.ಎಂ. ಚನ್ನಬಸಪ್ಪನವರು ಇದ್ದರು, ಸಿದ್ದವೀರಪ್ಪನವರು ಇದ್ದರು, ಟಿ.ಚನ್ನಯ್ಯನವರು ಇದ್ದರು. ಅವರ ಪತ್ರಿಕೆ ನಾಲ್ಕು ಪುಟಗಳದ್ದು ಇತ್ತು. ಇವತ್ತು ಪ್ರಜಾವಾಣಿಯಲ್ಲಿ ವ್ಯಂಗ್ಯಚಿತ್ರ ಏನು ಬರೆಯುತ್ತಾರೆ ಶ್ರೀ ಮೂರ್ತಿಯವರು, ಅವರು ಅಲ್ಲಿಂದ ತಯಾರಾದಂಥವರು. ಆ ವರದಿ ನಮ್ಮನ್ನು ಬಯ್ದರೂ ಸುತ್ತಿನಂಥ ವರದಿ. ಬಯ್ಯುತಕ್ಕಂಥ ಪದಗಳು ಎಷ್ಟು ಚೆನ್ನಾಗಿವೆ ಎಂದು ಸಂತೋಷ ಪಡುತ್ತಿದ್ದೆವು. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಇದ್ದಾಗ ಮಂತ್ರಿಗಳು ಎಲ್ಲಾ ಮೇಲಕ್ಕೆ ಬರುವಾಗ ಬೆಳ್ಳಿ ಗದೆ ಇರುತ್ತಿತ್ತು. ಆವಾಗ ಪ್ರತಿಯೊಬ್ಬ ಮಂತ್ರಿ ಹಿಂದೆ ಬೆಳ್ಳಿಗದೆ ಹಿಡಿದುಕೊಂಡು ಬರೋದು. ಒಂಭತ್ತು ಮಂತ್ರಿಗಳು ಎಂದರೆ ಒಂಭತ್ತು ಬೆಳ್ಳಿಗದೆಗಳನ್ನು ಹಿಡಿದುಕೊಂಡು ನಿಂತಿರಬೇಕು. ಮಂತ್ರಿಗಳು ಮೇಲೆ ಬಂದಿದ್ದಾರೆ ಎಂದರೆ ಇಬ್ಬರು ಬಂದಿದ್ದರೆ ಎರಡು ಗದೆಗಳು ಇರುತ್ತಿತ್ತು.

ಮೂರು ಜನ ಬಂದಿದ್ದರೆ, ಆರು ಇರುತ್ತಿತ್ತು. ಅಂದರೆ ಮೇಲಕ್ಕೆ ಹೋಗಿದ್ದಾರೆ ಎಂದು. ಅವರ ಹಿಂದೆ ಹಿಡಿದುಕೊಂಡು ಹೋಗಬೇಕು. ಹನುಮಂತಯ್ಯನವರು ನಿಜವಾಗಿಯೂ ಈ ರಾಜ್ಯದ ಒಂದು ಧೀಮಂತ ಶಕ್ತಿ. ಇದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಈ ರಾಜ್ಯದಲ್ಲಿ ಅವರ ಆಡಳಿತವನ್ನು

ಶತಶತಮಾನಗಳ ಕಾಲಕ್ಕೂ, ಪ್ರತಿಸಾರಿಯೂ ನೆನೆಮಕೊಳ್ಳಬೇಕು. ಅವರು ಯಾವ ರೀತಿ ಆಡಳಿತವನ್ನು ನಡೆಸಿದರು, ಯಾವ ರೀತಿ ಮಾಡಿದರು ಎನ್ನತಕ್ಕಂಥದ್ದು, ಈ ಸದನದಲ್ಲಿ ನಾವೇನು ಕುಳಿತಿದ್ದೇವೆ, ನೆನೆಯಬೇಕು. ಈ ಸದನವನ್ನು ಕಟ್ಟತಕ್ಕ ಮಹಾ ಶಕ್ತಿಯನ್ನು ಹೊಂದಿದಂಥ ಒಬ್ಬ ಧೀಮಂತ ಶಕ್ತಿ. ಆದರೆ, ಅವರು ಈ ಸದನಕ್ಕೆ ಬರುವುದಕ್ಕಾಗಲಿಲ್ಲ. ಈ ಸದನವನ್ನು ಕಟ್ಟಿದಂಥ ಹನುಮಂತಯ್ಯನವರು ಇಲ್ಲಿಗೆ ಬರುವುದಕ್ಕಾಗಲಿಲ್ಲ. ಇಲ್ಲಿ ಮುಖ್ಯಮಂತ್ರಿಗಳಾಗಿ ಬರುವುದಕ್ಕಾಗಲಿಲ್ಲ. ಆ ಒಂದು ಪೀಠದಲ್ಲಿ ಕುಳಿತುಕೊಳ್ಳುವುದಕ್ಕಾಗಲಿಲ್ಲ. ಅಲ್ಲಿ ಕುಳಿತುಕೊಂಡವರು ಶ್ರೀಮಾನ್ ಕಡಿದಾಳ್ ಮಂಜಪ್ಪನವರು. ಕೊನೆಯ ಮೂರು ತಿಂಗಳಲ್ಲಿ, ಬರೀ ಮೂರು ತಿಂಗಳು ಹನುಮಂತಯ್ಯನವರ ಅಧಿಕಾರ ಹೋಯಿತು, ಕೊನೆಯ ಮೂರು ತಿಂಗಳು ಅವರು ಬಂದರು. ವಿಧಾನಸೌಧದ ಮೇಲೆ ಗೋಪುರ 8–10 ಅಡಿ ಇತ್ತು. ನನ್ನ ಅಳತೆಗೆ ಒಂದು ಅದನ್ನು ಕಡಿಮೆ ಮಾಡಿದರು. ಅವರೆಲ್ಲರೂ ಸತ್ಯವಂತರೇ. ಇವತ್ತು ಕಡಿದಾಳ್ ಮಂಜಪ್ಪನವರು ಇಲ್ಲ, ಅವರನ್ನು ನಾವು ನೆನೆಯಬೇಕು. ನಿಜವಾಗಿಯೂ ಅದೊಂದು ರಾಮರಾಜ್ಯ, ಕೆಂಗಲ್ ಹನುಮಂತಯ್ಯನವರ ರಾಜ್ಯ ರಾಮರಾಜ್ಯ. ರಾಮರಾಜ್ಯದಲ್ಲಿ ಅವರೆಲ್ಲರೂ ರಾಮನ ಭಕ್ತರಾಗಿ, ಈ ರಾಜ್ಯಕ್ಕೆ ಒಳ್ಳೆಯ, ಸುಂದರವಾದ ಆಡಳಿತವನ್ನು ಕೊಟ್ಟರು. ಆಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ಅವರ ಜೊತೆಯಲ್ಲಿ ಇದ್ದಂಥ ಧೀಮಂತ ವ್ಯಕ್ತಿ. ಶ್ರೀಮಾನ್ ರಂಗನಾಥ್‌ರವರು ಕಿಸಾನ್ ಮಜ್ದೂರ್ ಪ್ರಜಾಪಾರ್ಟಿಯಲ್ಲಿದ್ದರು ಎಂದು ಕಾಣುತ್ತದೆ ಅಥವಾ ಪ್ರಜಾ ಸೋಷಿಯಾಲಿಸ್ಟ್ ಪಾರ್ಟಿ ಎಂದು ತಾವು ಹೇಳುತ್ತೀರಾ. 1952ರಲ್ಲಿ ಕೆ.ಎಂ.ಪಿ.ಪಿ. ಇತ್ತು, ಈ ಕೆ.ಎಂ.ಪಿ.ಪಿ. ಗುರುಪಾದಸ್ವಾಮಿಯವರು ಮೊದಲು ಇದ್ದುದು, ಗುಡಿಸಲು ಗುರುತು. ಆ ಸಂದರ್ಭದಲ್ಲಿ ಎಷ್ಟು ಸೊಗಸಾದ ಆಡಳಿತವನ್ನು ಕೊಟ್ಟರು ಎಂದು ಹೇಳಿದರೆ, ನಿಜವಾಗಿಯೂ ಮೆಚ್ಚತಕ್ಕಂಥದ್ದು. ಒಳ್ಳೆಯ, ಸುಂದರವಾದ ಆಡಳಿತವನ್ನು ಕೊಟ್ಟರು. ಈ ಸದನದಲ್ಲಿ ಹೊರಗಡೆ ಬರೆದಿದ್ದಾರೆ. ತಾವು ನೋಡಬೇಕು, "ಸರ್ಕಾರದ ಕೆಲಸ ದೇವರ ಕೆಲಸ" ಇದನ್ನು ಬರೆಸಿದವರು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಅದಾದ ಮೇಲೆ ರಾಜಕಾರಣ ಹೇಗಿದೆ ಎಂದು ಹೇಳಿದರೆ, ಗಂಧದ ಜೊತೆಯಲ್ಲಿ ಗುದ್ದಾಟ ಇದ್ದ ಹಾಗೆ. ನಾವು ಶ್ರೀಮಾನ್ ವೀರಣ್ಣಗೌಡರನ್ನು ಇಲ್ಲಿ ನೆನೆಯಬೇಕು, ಅವರು ಲೋಕೋಪಯೋಗಿ ಸಚಿವರಾಗಿದ್ದರು. ಮದ್ದೂರಿನ ವೀರಣ್ಣಗೌಡರು. ಅವರು ಬಂದ ನಂತರ, ಸರ್ಕಾರದ ಕೆಲಸ ದೇವರ ಕೆಲಸ, ಸರ್ಕಾರ ಎಂದರೆ ಏನು ಎಂದು ಹನುಮಂತಯ್ಯನವರ ಜೊತೆಯಲ್ಲಿ ವಾದ ಮಾಡಿ, ಅದನ್ನು ಅಳಿಸಿ ಹಾಕಿದರು. ಮುಂದೆ ಬಂದ ಸರ್ಕಾರ ಆ ರೀತಿ ಅಳಿಸಿ ಹಾಕುವುದು ಸರಿಯಲ್ಲವೆಂದು ಮತ್ತೆ ಬರೆಸಿದರು. ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದರು.

ಶ್ರೀ ಕೆ.ಹೆಚ್. ರಂಗನಾಥ್.— ದಿವಂಗತ ಗೋಪಾಲಗೌಡರು, ದೇವರ ಕೆಲಸ ಮಾಡಿದರೆ ಮಾಡಬಹುದು, ಬಿಟ್ಟರೆ ಬಿಡಬಹುದು ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ನಿಜವಾಗಿಯೂ ದೇವರ ಕೆಲಸ ಮಾಡಬೇಕು. ಇದನ್ನು ದಿಗ್ಗಜಗಳೆಲ್ಲರೂ ಹೇಳಿದ್ದರು. ನಮಗೂ ಭಗವಂತನ ದಯೆಯಿಂದ, ಆ ಸಂದರ್ಭದಲ್ಲಿ ಅವರ ಜೊತೆಯಲ್ಲಿರತಕ್ಕ ಅವಕಾಶ ಇತ್ತು. ಸಾಹುಕಾರ್ ಚೆನ್ನಯ್ಯನವರು ಇಲ್ಲಿ ಇದ್ದರು, ಬಹಳ ದೊಡ್ಡ ವ್ಯಕ್ತಿತ್ವ. ಅಲ್ಲಿ ಅಧ್ಯಕ್ಷರು ಕುಳಿತಾಗ, ಸದನದಲ್ಲಿ ಬರುವಾಗ ಕೈಯಲ್ಲಿ ಯಾವುದೇ ಸಾಮಾನು ತರಬಾರದು, ಯಾವುದೇ ಒಂದು ವಸ್ತು ತರಬಾರದು ಎಂದು ಇದ್ದರೂ ಕೂಡ, ಇವರೊಬ್ಬರಿಗೆ ಮಾತ್ರ ಕೈಯಲ್ಲಿ ಬೆತ್ತ ತರುವುದಕ್ಕೆ ಅವಕಾಶ ಇತ್ತು. ಒಂದು ಸಾರಿ ಅಧ್ಯಕ್ಷರ ಪೀಠದಲ್ಲಿ ಕೊಂಡಾಪಳಿಯವರು ಕುಳಿತಿದ್ದರು. ಏನು, ಚನ್ನಯ್ಯನವರು ಏನು ಹೇಳುತ್ತೀರೆಂದರೆ, ಒಂದು ಸಾರಿ ಬೆತ್ತವನ್ನು ಆ ಕಡೆ ತಿರುಗಿಸುತ್ತಿದ್ದರು. ಚನ್ನಯ್ಯನವರು ಈ ರಾಜ್ಯದ ರಾಜಕಾರಣದಲ್ಲಿ ಧ್ರುವತಾರೆಯಾಗಿ ಮೆರೆದಂಥ ಒಬ್ಬ ದೊಡ್ಡ ವ್ಯಕ್ತಿ. ಅಧ್ಯಕ್ಷರೇ, ಈಗಾಗಲೇ 6 ಗಂಟೆಯಾಯಿತು, ಸಭೆಯನ್ನು ನಾಳೆಗೆ

ಮುಂದಕ್ಕೆ ಹಾಕಬಹುದು. ನಾಳೆ ಉಳಿದ ವಿಷಯಗಳನ್ನು ಮಾತನಾಡುತ್ತೇನೆ.

ವೈಸ್ ಚೇರ್ಮನ್:- ಈ ಚರ್ಚೆ ನಾಳೆಗೆ ಮುಗಿಯಬೇಕು, ಇನ್ನೂ 20 ಜನ ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗಾಗಲೇ 6 ಗಂಟೆಯಾಯಿತು, ದಯಮಾಡಿ ಮುಂದಕ್ಕೆ ಹಾಕಿ, ನಾಳೆ ಮುಗಿಸುತ್ತೇನೆ. ಇವತ್ತು ಬೆಳಿಗ್ಗೆಯಿಂದ ಕುಳಿತಿದ್ದೇವೆ, ಪತ್ರಿಕೆಯವರೂ ಹೋಗಬೇಕಾಗಿದೆ, ಅವಕಾಶ ಮಾಡಿಕೊಡಿ, ಬೆಳಿಗ್ಗೆ ಮಾತನಾಡುತ್ತೇನೆ. ಬೆಳಿಗ್ಗೆ ನಾವು, ನೀವು ಕೇಳೋಣ. ಈ ಜಗತ್ತಿನ ಜನ ಕೇಳದಿದ್ದರೂ ಚಿಂತೆ ಇಲ್ಲ. ಕೆಲವು ಇತಿಹಾಸ ಹೇಳುತ್ತೇನೆ. ಯಾರು ಬರಲಿ, ಬರದಿರಲಿ, ಪ್ರಚಾರ ಬರಲಿ, ಬರದಿರಲಿ, ನಾನು ಅನೇಕ ವಿಚಾರಗಳನ್ನು ಹೇಳಬೇಕಾಗಿದೆ.

ವೈಸ್ ಚೇರ್ಮನ್:- ಈ ಸಭೆಯನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6.00 ಗಂಟೆಗೆ ಮುಕ್ತಾಯವಾಗಿ, 25.2.93ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಶೀಲಿಸಿಲ್ಲ ಎಂದು ಸೂಚಿಸುತ್ತದೆ)